ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 4 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 344 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸ್ವಾಮಿ...ನನ್ನ ಹೆಂಡ್ತಿ ಸತ್ತಿಲ್ಲ...! ಮಹಾಸ್ವಾಮಿ...ನನ್ನ ಹೆಂಡ್ತಿ ಬದುಕಿದ್ದಾಳೆ...!! ಹೇ, ನೀನೇ ಕೊಂದಿದ್ದೀಯಾ ನಡೀ ಜೈಲಿಗೆ...!!!

- ಎರಡು ವರ್ಷ ಜೈಲು ವಾಸ ಅನುಭವಿಸಿದ ಬಡಪಾಯಿ!
- ಜಾಮೀನಿನ ಮೇಲೆ ಹೊರಬಂದ ಪತಿಗೆ 'ಜೀವಂತ ಸತಿ' ದರ್ಶನ
- ನೊಂದ ಜೀವಕೆ ನೆರವಾದ ನ್ಯಾಯವಾದಿ ಪಾಂಡು ಪೂಜಾರಿ
- ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಧೀಶರು
- ಗಂಡ, ಮಕ್ಕಳ ಬಿಟ್ಟು ಪರ ಪುರುಷನೊಂದಿಗೆ ನಾಪತ್ತೆಯಾಗಿದ್ದ ಮಹಿಳೆ
- ತನಿಖಾ ವರದಿ ಸಲ್ಲಿಕೆಗೆ ಪೊಲೀಸ್ ಅಧಿಕಾರಿಗಳಿಗೆ ಕೋರ್ಟ್ ಸೂಚನೆ

ಮೈಸೂರು, ಏ.3– ಐದು ವರ್ಷದ ಹಿಂದೆ ಪೊದೆಯೊಂದರಲ್ಲಿ ಮಾನವ ಅಸ್ಥಿಪಂಜರ ದೊರೆಯುತ್ತದೆ. ಪೊಲೀಸರು ತನಿಖೆ ಮಾಡಿದಾಗ ಅದು 28 ರಿಂದ 30 ವರ್ಷ ವಯಸ್ಸಿನ ಮಹಿಳೆಯ ಅಸ್ಥಿಪಂಜರವಾಗಿದ್ದು, ಬಲವಾದ ಆಯುಧದಿಂದ ಬಲವಾಗಿ ಆಕೆಯ ತಲೆಯ ಮೇಲೆ ಹೊಡೆದು ಕೊಲೆ ಮಾಡಲಾಗಿದೆ ಎಂಬುದು ತಿಳಿದು ಬರುತ್ತದೆ. ಈ ಸಂಬಂಧ ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಠಾಣೆಯಲ್ಲಿ ಮೊದಲಿಗೆ ಅಸ್ವಾಭಾವಿಕ ಸಾವು ಎಂದು ದಾಖಲಾಗಿದ್ದ ಪ್ರಕರಣ, ನಂತರ ಕೊಲೆ ಪ್ರಕರಣವಾಗಿ ಮಾರ್ಪಾಡಾಗುತ್ತದೆ.

ಕೊಲೆ ಪ್ರಕರಣವಾಗಿರುವುದರಿಂದ ತನಿಖಾಧಿಕಾರಿ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಯಾಗಿದ್ದು, ಆಗ ಪಿರಿಯಾ ಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಬಿ.ಜಿ.ಪ್ರಕಾಶ್, ಈ ಪ್ರಕರಣ ಕೈಗೆತ್ತಿಕೊಂಡು, 9 ತಿಂಗಳ ನಂತರ ಸುರೇಶ್ ಎಂಬಾತನನ್ನು ಬಂಧಿಸುತ್ತಾರೆ. ಆತ ತನ್ನ ಪತ್ನಿ ಮಲ್ಲಿಗೆಗೆ ವರದಕ್ಷಿಣೆ ಕಿರುಕುಳ ನೀಡಿ ಹತ್ಯೆಗೈದು, ಪೊದೆಯಲ್ಲಿ ಶವವನ್ನು ಬಿಸಾಡಿದ್ದಾನೆ ಎಂಬ ತೀರ್ಮಾನಕ್ಕೆ ಬಂದು ಕೋರ್ಟ್‌ಗೆ ಚಾರ್ಜ್‌ಶೀಟ್ ಸಹ ಸಲ್ಲಿಸುತ್ತಾರೆ. ಇದರನ್ವಯ ಕೋರ್ಟ್, ಸುರೇಶ್‌ಗೆ ಜೈಲು ಶಿಕ್ಷೆಯನ್ನು ವಿಧಿಸುತ್ತದೆ. ಅಲ್ಲಿಗೆ ತಮ್ಮ ಶ್ರಮ ಸಾರ್ಥಕವಾಯ್ತು ಎಂದು ಇನ್ಸ್‌ಪೆಕ್ಟರ್ ಪ್ರಕಾಶ್, ತಮಗೆ ತಾವೇ ಶಹಭಾಸ್‌ಗಿರಿ ಕೊಟ್ಟುಕೊಳ್ಳುತ್ತಾರೆ.


ಸುರೇಶ್ ಮತ್ತು ಪತ್ನಿ ಮಲ್ಲಿಗೆ

ಇದಾಗಿ ಐದು ವರ್ಷಗಳೇ ಕಳೆದು ಹೋದವು. ಸಾಕಷ್ಟು ಜನರ ಮನಸ್ಸಿನಲ್ಲಿ ಈ ಘಟನೆ ಉಳಿದಿಲ್ಲ ಎನ್ನಿಸುತ್ತದೆ. ಆದರೆ, 5 ವರ್ಷದ ಹಿಂದೆ ಕೊಲ್ಲಲ್ಪಟ್ಟಿದ್ದ! ಮಹಿಳೆ ಈಗ ಧುತ್ತನೆ ಪ್ರತ್ಯಕ್ಷವಾಗಿದ್ದು, ಈ ಪ್ರಕರಣದ ತನಿಖಾಧಿಕಾರಿ, ಹಾಲಿ ಕುಶಾಲನಗರ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಬೆಚ್ಚಿ ಬೀಳುವಂತಾಗಿದ್ದು, ಅವರ ಕರ್ತವ್ಯ ದಕ್ಷತೆಗೆ ಬಹುದೊಡ್ಡ ಸವಾಲಾಗಿದೆ. ಅವರ ಕಟ್ಟುಕತೆಯನ್ನು ಬಯಲು ಮಾಡುವುದರೊಂದಿಗೆ ನ್ಯಾಯಾಲಯದಲ್ಲಿ ತಲೆ ತಗ್ಗಿಸಿ ನಿಲ್ಲುವಂತೆ ಮಾಡಿದೆ.

ಮಾಡದ ಕೊಲೆಗಾಗಿ 2 ವರ್ಷ ಕಾಲ ಜೈಲು ಶಿಕ್ಷೆ ಅನುಭವಿಸಿ, ಈಗಲೂ ಕೊಲೆ ಪ್ರಕರಣದ ಆರೋಪಿಯಾಗಿ ನ್ಯಾಯಾಲಯಕ್ಕೆ ಅಲೆಯುತ್ತಿರುವ ಕೊಡಗಿನ ಕುಶಾಲನಗರ ಬಳಿಯ ಬಸವನಹಳ್ಳಿಯ ದಿಡ್ಡಳ್ಳಿ ನಿವಾಸಿ ಆದಿವಾಸಿ ಜನಾಂಗದ ಸುರೇಶ್ ನಿಟ್ಟುಸಿರು ಬಿಡುವಂತಾಗಿದೆ.

ವಿವರ: ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಶಾನುಭೋಗನಹಳ್ಳಿಯಲ್ಲಿ 2020ರ ನ.12ರಂದು ಪೊದೆಯೊಂದರಲ್ಲಿ ಅಸ್ಥಿಪಂಜರವೊಂದು ದೊರೆತಿದ್ದು, ಪೊಲೀಸರು ಮೊದಲಿಗೆ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು. ■ 6ನೇ ಪುಟಕ್ಕೆ

ಈಗ ಸಂತೋಷಕ್ಕಿಂತ ನನ್ನನ್ನೇ ಮುಗಿಸಿ ಬಿಡುತ್ತಾರೇನೋ ಎಂದು ಭಯವಾಗ್ತಿದೆ!: ಸುರೇಶ್

ನನ್ನ ಹೆಂಡ್ತಿ ಜೀವಂತವಾಗಿ ಸಿಕ್ಕಿದ್ದಾಳೆ. ನಾನು ಕೊಲೆ ಮಾಡಿಲ್ಲ ಅನ್ನೋದು ರುಜುವಾತಾಗಿದೆ ಎಂಬ ಸಂತೋಷ ಕ್ಕಿಂತ ನನಗೆ ಈಗ ಬೇರೆ ತರಹ ಭಯ ಶುರುವಾಗಿಬಿಟ್ಟಿದೆ. ನನಗಾಗಿರುವ ಅನ್ಯಾಯಕ್ಕೆ ಯಾವ ಪೊಲೀಸರನ್ನೂ ನಂಬ ಲಾಗುತ್ತಿಲ್ಲ. ಕೊಲೆಯಾಗಿದ್ದಾಳೆ ಎಂದು ಅವರು ಹೇಳಿ ದ್ದಾಕೆ, ಜೀವಂತ ಬಂದಿರುವುದರಿಂದ ದೊಡ್ಡ ದೊಡ್ಡ ಅಧಿಕಾರಿಗಳಿಗೆ ತೊಂದರೆ ಆಗುತ್ತದೆ. ಅದಕ್ಕಾಗಿ ಯಾರನ್ನಾದರೂ ಬಿಟ್ಟು ನನ್ನನ್ನೇ ಮುಗಿಸಿಬಿಡುತ್ತಾರೇನೋ ಎಂದು ಭಯ ವಾಗುತ್ತಿದೆ. ನನ್ನ ರಕ್ಷಣೆಗೆ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕಾ ಎಂದು ಯೋಚಿಸುತ್ತಿದ್ದೇನೆ ಎಂದು ಆರೋಪಿ ಸುರೇಶ್ ತಿಳಿಸಿದ್ದಾರೆ.


ಸುರೇಶ್

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನನ್ನ ಹೆಂಡತಿ, ನಾನು ಗಣೇಶನ ಜೊತೆ ಹೋಗಿರು ವುದಾಗಿ ನನಗೇ ಫೋನ್ ಮಾಡಿ ಹೇಳಿದ್ದಳು. ಒಮ್ಮೊಮ್ಮೆ ಮನೆಗೆ ವಾಪಸ್ ಬರುವುದಾಗಿಯೂ ಹೇಳುತ್ತಿದ್ದಳು. ಅವಳು ಹೋಗಿ ಒಂದು ತಿಂಗಳಾದ ಮೇಲೆ ಫೋನ್‌ನಲ್ಲೇ ಅವಳಿಗೂ ನನಗೂ ಗಲಾಟೆ ಆಯಿತು. ಅದಕ್ಕಾಗಿ ನಾನು ಹೋಗಿ ಕುಶಾಲನಗರ ಠಾಣೆಯಲ್ಲಿ ಕಂಪ್ಲೇಂಟ್ ಕೊಟ್ಟೆ. ಪೊಲೀಸರಿಗೆ ನನ್ನ ಹೆಂಡತಿ ಮತ್ತು ಗಣೇಶ ಇರುವುದರ ಬಗ್ಗೆ ■ 10ನೇ ಪುಟಕ್ಕೆ

ಯಾರನ್ನೋ ರಕ್ಷಿಸಲು ದಿಕ್ಕಿಲ್ಲದವನ ಬಲಿಪಶು ಮಾಡಿದ್ದಾರೆ!: ಪಾಂಡು ಪೂಜಾರಿ

ಒಂದೇ ದಿನದಲ್ಲಿ ದೇಹ ಅಸ್ಥಿಪಂಜರ ಆಗಲು ಸಾಧ್ಯವೇ?

ಬೆಟ್ಟದಪುರ ಠಾಣಾ ವ್ಯಾಪ್ತಿಯಲ್ಲಿ ದೊರೆತಿದ್ದ ಅಸ್ಥಿಪಂಜರದ ತನಿಖೆ ನಡೆಸಿದ ತನಿಖಾಧಿಕಾರಿಗಳು ಉದ್ದೇಶ ಪೂರ್ವಕವಾಗಿಯೇ ಸುರೇಶನ ಮೇಲೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂಬುದು ನನ್ನ ಬಲವಾದ ಸಂಶಯ. ಕಾರಣವೇನೆಂದರೆ ಆದಿವಾಸಿ ಜನಾಂಗಕ್ಕೆ ಸೇರಿದ ಸುರೇಶನಿಗೆ ವಕೀಲರನ್ನು ನೇಮಕ ಮಾಡಿಕೊಂಡು ವಾದ ಮಾಡುವಂತಹ ಆರ್ಥಿಕ ಶಕ್ತಿ ಇಲ್ಲ. ಅವನ ಪರವಾಗಿ ಹೋರಾಟ ಮಾಡಲು ಯಾರೂ ದಿಕ್ಕಿಲ್ಲ ಎಂಬುದನ್ನು ಪೊಲೀಸರು ಮನಗಂಡಿದ್ದಾರೆ ಎಂದು ನನಗೆ ಅನ್ನಿಸುತ್ತಿದೆ. ಅಸ್ಥಿಪಂಜರ ದೊರೆತ ಪ್ರಕರಣದಲ್ಲಿ ಯಾರನ್ನೋ ರಕ್ಷಿಸಲು ಹೇಳಲು–ಕೇಳಲು ದಿಕ್ಕಿಲ್ಲದ ಈತನನ್ನು ಸಿಲುಕಿಸಿದ್ದಾರೆ ಎಂಬ ಅನುಮಾನ ನನಗಿದೆ ಎಂದು ಆರೋಪಿ ಸುರೇಶ್ ಪರ ವಕೀಲ ಪಾಂಡು ಪೂಜಾರಿ ತಿಳಿಸಿದ್ದಾರೆ.


ಪಾಂಡು ಪೂಜಾರಿ

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈ ವಿಷಯವನ್ನು ನ್ಯಾಯಾಧೀಶರ ಮುಂದೆಯೂ ತಿಳಿಸಿದ್ದೇನೆ. ಹೇಗಾದರೂ ಮಾಡಿ ಪ್ರಕರಣ ಮುಗಿಸಿ ಬಿಡೋಣ ಎಂಬ ದುರುದ್ದೇಶ, ತರಾತುರಿಯಲ್ಲಿ, ಸಿಕ್ಕಿದವನ್ನು ಸಿಲುಕಿಸಿ ಬಿಡೋಣ ಎಂಬ ಭಾವನೆಯಿಂದ ಪೊಲೀಸರು ಅಮಾಯಕ ಸುರೇಶ್ ಮೇಲೆ ಆರೋಪ ಪಟ್ಟಿ ಸಲ್ಲಿಸಿದ್ದಾರೆಯೇ ಎಂಬುದನ್ನು ನೋಡಿದರೆ ಅದರ ಸಾಧ್ಯತೆ ಕಡಿಮೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. 2020ರ ನ.12ರಂದು ಅಸ್ಥಿಪಂಜರ ದೊರೆಯುತ್ತದೆ. ಅದೇ ದಿನ ಮಲ್ಲಿಗೆ ನಾಪತ್ತೆಯಾಗಿದ್ದಾಳೆ ಎಂದು ಮರುದಿನ ಪತಿ ಸುರೇಶ ದೂರು ಸಲ್ಲಿಸುತ್ತಾನೆ. ಕೇವಲ ಒಂದೇ ದಿನದಲ್ಲಿ ಯಾವ ಮೃತದೇಹ ತಾನೇ ಅಸ್ಥಿ ಪಂಜರವಾಗಿ ಬಿಡುತ್ತದೆ ಎಂದು ಯೋಚಿಸುವ ಶಕ್ತಿ ಪೊಲೀಸರಿಗೆ ಇಲ್ಲ ಎಂಬುದನ್ನು ನಾನು ಮಾತ್ರವಲ್ಲ, ಯಾರೂ ನಂಬಲು ಸಾಧ್ಯವಿಲ್ಲ. ಮಡಿಕೇರಿ ಪೊಲೀಸರು ಕುಶಾಲನಗರ ಪೊಲೀಸರಿಗೆ ಮಲ್ಲಿಗೆಯನ್ನು ಒಪ್ಪಿಸಿದ್ದರೂ, ನಾವು ಹೋಗಿ ಕೇಳಿದಾಗ ಆಕೆಯ ಬಗ್ಗೆ ಗೊತ್ತಿಲ್ಲ ಎಂದು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಹೇಳಿದರು. ಕುಶಾಲನಗರ ಟೌನ್ ಪೊಲೀಸ್ ■ 10ನೇ ಪುಟಕ್ಕೆ

'ಜೈ ಭೀಮ್' ನೆನಪಾಗುತ್ತದೆ...!?

ತಮಿಳುನಾಡಿನಲ್ಲಿ ನಡೆದಿದ್ದ ಸತ್ಯ ಕಥೆಯೊಂದನ್ನ ಆಧರಿಸಿ ನಟ ಸೂರ್ಯ ಅವರು 'ಜೈ ಭೀಮ್' ಚಿತ್ರ ನಿರ್ಮಿಸಿ ತಾವೇ ನಾಯಕರಾಗಿ ನಟಿಸಿದ್ದರು. ಅಲ್ಲಿ ಬರುವ ಸನ್ನಿವೇಶಗಳಿಗೂ ಈಗ ಬಸವನಹಳ್ಳಿ ಸುರೇಶನ ವಿಚಾರದಲ್ಲಿ ಪೊಲೀಸರು ನಡೆದುಕೊಂಡಿರುವ ರೀತಿಗೂ ಸಾಮ್ಯತೆ ಇರುವಂತೆ ಕಂಡು ಬರುತ್ತಿದೆ. ಜೈ ಭೀಮ್‌ನಲ್ಲಿ ಜಮೀನ್ದಾರನ ಮನೆಯಲ್ಲಿ ಕಳ್ಳತನ ನಡೆದರೆ ಕೇಳಲು ಯಾರೂ ದಿಕ್ಕಿಲ್ಲದ ವ್ಯಕ್ತಿಗಳನ್ನು ಪೊಲೀಸರು ಠಾಣೆಗೆ ಕರೆತಂದು ಹಿಂಸಿಸುತ್ತಾರೆ. ಕೊನೆಗೆ ಓರ್ವ ಸತ್ತು ಹೋದಾಗ ಅವನ ದೇಹವನ್ನು ಎಲ್ಲೋ ಬಿಸಾಕಿ ಠಾಣೆಯಿಂದ ಪರಾರಿಯಾಗಿದ್ದಾನೆ ಎಂದು ಕೇಸ್ ಕ್ಲೋಸ್ ಮಾಡುತ್ತಾರೆ. ಆದರೆ ಸುರೇಶನ ಪ್ರಕರಣದಲ್ಲಿ ನೆರವಿಗೆ ನಿಂತ ವಕೀಲ ಪಾಂಡು ಪೂಜಾರಿ ಅವರಂತೆ ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಪಕ್ಷದವರಾದ ಸಾಮಾಜಿಕ ಹೋರಾಟಗಾರರೂ ಆದ ವಕೀಲ ಚಂದ್ರು ಅವರು ದಿಕ್ಕಿಲ್ಲದ ಜನರ ಪರವಾಗಿ ಕಾನೂನು ಹೋರಾಟ ನಡೆಸಿ ಗೆಲುವು ಸಾಧಿಸುತ್ತಾರೆ. ಯಾಕೋ ಸುರೇಶನ ಪ್ರಕರಣವನ್ನು ನೋಡಿದರೆ ಜೈ ಭೀಮ್ ನೆನಪಾಗುತ್ತಿದೆ.



ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ತೂಬಿನಕೆರೆ ಬಳಿ ಭೀಕರ ಅಪಘಾತ

ಒಂದೇ ಕುಟುಂಬದ ನಾಲ್ವರು ದುರ್ಮರಣ

- ಎಕ್ಸಿಟ್ ಪಾಯಿಂಟ್‌ನಲ್ಲಿ ಕಾರಿಗೆ ಐರಾವತ ಬಸ್ ಡಿಕ್ಕಿ
- ಸಂಬಂಧಿಕರ ಅಂತಿಮ ದರ್ಶನಕ್ಕೆ ತೆರಳುತ್ತಿದ್ದವರು ಮಸಣಕ್ಕೆ
- ಕಾರು ಚಾಲಕನ ಕ್ಷಣಮಾತ್ರದ ಗೊಂದಲದಿಂದ ದುರಂತ


ಅಪಘಾತದಲ್ಲಿ ಕಾರು ನಜ್ಜುಗುಜ್ಜಾಗಿರುವುದು.

ಮಂಡ್ಯ, ಏ.3– ಸಂಬಂಧಿಕರೊಬ್ಬರ ಅಂತಿಮ ದರ್ಶನಕ್ಕೆ ಹೋಗುವಾಗ ಒಂದೇ ಕುಟುಂಬದ ನಾಲ್ವರು ಭೀಕರ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಧಾರುಣ ಘಟನೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಗುರುವಾರ ಸಂಭವಿಸಿದೆ. ಇದಕ್ಕೆ ಒಂದು ಸಣ್ಣ ಗೊಂದಲ ಕಾರಣ; ಸರ್ವಿಸ್ ರಸ್ತೆಗಿಳಿಯಬೇಕೇ ಇಲ್ಲ ಎಕ್ಸ್‌ಪ್ರೆಸ್ ವೇನಲ್ಲೇ ಸಾಗಬೇಕೇ; ಕೊನೆಗೆ ಎಕ್ಸ್‌ಪ್ರೆಸ್ ವೇನಲ್ಲೇ ಸಾಗಲು ನಿರ್ಧರಿಸಿ, ಕಾರು ತಿರುಗಿಸುತ್ತಿದ್ದಂತೆ ಘೋರ ಅಪಘಾತ ಸಂಭವಿಸಿದೆ.

ಬೆಂಗಳೂರು ಜೆ.ಪಿ.ನಗರದ ನಿವಾಸಿ, ವಿದ್ಯುತ್ ಗುತ್ತಿಗೆದಾರ ಸತ್ಯಾನಂದ ರಾಜೇ ಅರಸ್(59), ಅವರ ಪತ್ನಿ ನಿಶ್ಚಿತಾ ಅರಸ್(51), ಸಹೋದರ ಬೆಸ್ಕಾಂ ನಿವೃತ್ತ ನೌಕರ ಚಂದ್ರಶೇಖರ ರಾಜೇ ಅರಸ್(62) ಹಾಗೂ ಅವರ ಪತ್ನಿ ಸುವೇದಿನಿ ರಾಣಿ(56) ಅವರು ಸಂಬಂಧಿಕರಾದ ಎನ್.ರಾಜೇ ಅರಸ್ ಅವರ ಅಂತ್ಯಕ್ರಿಯೆಗೆ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕಿನ ಸೀಗೂರು ಗ್ರಾಮಕ್ಕೆ ಹೋಗುವಾಗ ದುರಂತ ಸಾವಿಗೀಡಾಗಿದ್ದಾರೆ.

ಐರಾವತ ಡಿಕ್ಕಿ: ಬೆಂಗಳೂರಿನಿಂದ ಈ ನಾಲ್ವರು ಟಾಟಾ ಪಂಚ್(ಕೆಎ–09, ಎಂಜಿ–4263) ಕಾರಿನಲ್ಲಿ ಮೈಸೂರಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಬರುತ್ತಿದ್ದರು. ಮಂಡ್ಯ ತಾಲೂಕಿನ ತೂಬಿನಕೆರೆ ಗ್ರಾಮದ ಸಮೀಪ ಎಕ್ಸ್‌ಪ್ರೆಸ್ ವೇನಿಂದ ನಿರ್ಗಮನ ■ 10ನೇ ಪುಟಕ್ಕೆ

ಹನಕೆರೆ ಬಳಿ ಸರ್ವಿಸ್ ರಸ್ತೆಯಲ್ಲಿ ನಿಂತಿದ್ದ ಬೈಕ್‌ಗೆ ಮತ್ತೊಂದು ಬೈಕ್ ಡಿಕ್ಕಿ

ಇಬ್ಬರು ಯುವಕರು ಸಾವು

ಮಂಡ್ಯ, ಏ.3– ನಿಂತಿದ್ದ ಬೈಕ್‌ಗೆ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಮೃತಪಟ್ಟು, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬೆಂಗಳೂರು–ಮೈಸೂರು ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಗುರುವಾರ ಸಂಜೆ ಸಂಭವಿಸಿದೆ.

ಮಳವಳ್ಳಿ ತಾಲೂಕು, ದೇವರಹಳ್ಳಿ ಗ್ರಾಮದ ಸೃಜನ್(20) ಹಾಗೂ ಆಕಾಶ್(26) ಮೃತಪಟ್ಟವರು. ನಿಂತಿದ್ದ ಬೈಕ್‌ನ ಸವಾರನೂ ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಮೈಸೂರು ಕಡೆಯಿಂದ ಸೃಜನ್ ಮತ್ತು ಆಕಾಶ್ ಬೈಕ್‌ನಲ್ಲಿ ವೇಗವಾಗಿ ಬರುತ್ತಿದ್ದಾಗ ಹನಕೆರೆ ಗ್ರಾಮದ ಬಳಿ ನಿಂತಿದ್ದ ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಎರಡು ಬೈಕ್‌ಗಳೂ ಉರುಳಿ ಬಿದ್ದಿವೆ. ಘಟನೆಯಲ್ಲಿ ಸೃಜನ್ ಹಾಗೂ ಆಕಾಶ್‌ಗೆ ತೀವ್ರ ಪೆಟ್ಟು ಬಿದ್ದು ರಕ್ತಸ್ರಾವವಾಗಿದೆ. ಆಕಾಶ್ ಸ್ಥಳದಲ್ಲೇ ಮೃತಪಟ್ಟರೆ, ಸೃಜನ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾನೆ. ಬೈಕ್ ನಿಲ್ಲಿಸಿಕೊಂಡು ನಿಂತಿದ್ದವರೂ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ; ವರಿಷ್ಠರ ನಿರ್ಧಾರ

ಬೆಂಗಳೂರು, ಏ.3(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೆಳಗಿಳಿಸಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಕೂರಿಸಲು ದೆಹಲಿ ವರಿಷ್ಠರು ಮುಂದಾಗಿದ್ದಾರೆ.



ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ನಿರಂತರವಾಗಿ ನಡೆಸಿದ ಯತ್ನಕ್ಕೆ ಫಲ ದೊರೆತಂತಿದೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಸಿದ್ದರಾಮಯ್ಯ ಮತ್ತು ಅವರ ಬಣ, ನಿನ್ನೆ ರಾತ್ರಿ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಸಿದ್ದರಾಮಯ್ಯ ಅವರ ಸಲಹೆಯಂತೆ ವೇಣುಗೋಪಾಲ್ ತಡರಾತ್ರಿಯೇ ಬೀದರ್ ಪ್ರವಾಸದಲ್ಲಿದ್ದ ಖಂಡ್ರೆ ಅವರನ್ನು ಸಂಪರ್ಕಿಸಿ ದೆಹಲಿಗೆ ಬರುವಂತೆ ಆಹ್ವಾನ ನೀಡಿದರು.

ವರಿಷ್ಠರ ಆಹ್ವಾನದ ಮೇರೆಗೆ ಪುತ್ರ ಹಾಗೂ ಸಂಸದ ಸಾಗರ್ ಖಂಡ್ರೆ ಜೊತೆಗೂಡಿ ಹೈದರಾಬಾದ್ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಿದ್ದಲ್ಲದೆ, ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ವೇಣುಗೋಪಾಲ್ ಆಹ್ವಾನ ಸ್ವೀಕರಿಸಿರುವ ಖಂಡ್ರೆ ಸಚಿವ ಸ್ಥಾನ ತೊರೆದು ಅಥವಾ ಅದರಲ್ಲೇ ಮುಂದುವರೆದು ಕೆಪಿಸಿಸಿ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳಲು ಸಿದ್ಧ ಎಂದಿದ್ದಾರೆ.

ಕರ್ನಾಟಕದಲ್ಲಿ ಪಕ್ಷದ ನಾಯಕತ್ವವನ್ನು ವಹಿಸಿಕೊಟ್ಟರೆ ಸಂಘಟನಾತ್ಮಕವಾಗಿ ಬಲ ತುಂಬಲು ಶ್ರಮಿಸುತ್ತೇನೆ. ಅಲ್ಲದೆ, ಪಕ್ಷದಿಂದ ದೂರ ಸರಿದಿರುವ ವೀರಶೈವ/ಲಿಂಗಾಯತ ಸಮುದಾಯವನ್ನು ಮತ್ತೆ ಪಕ್ಷದ ಕಡೆ ತರುವಲ್ಲಿ ಕೆಲಸ ಮಾಡುವುದಾಗಿ ಹೇಳಿದ್ದಾರೆ. ■ 6ನೇ ಪುಟಕ್ಕೆ

ಏಕಾಂಗಿಯಾಗಿ ರಾಹುಲ್ ಗಾಂಧಿ ಭೇಟಿಯಾದ ಸಿಎಂ ಸಿದ್ದರಾಮಯ್ಯ

ಹನಿಟ್ರ್ಯಾಪ್; ಸಚಿವ ರಾಜಣ್ಣ ಪುತ್ರ ಎಂಎಲ್ಸಿ ರಾಜೇಂದ್ರ ಹತ್ಯೆ ಸಂಚಿನ ಬಗ್ಗೆ ಪೂರ್ಣ ಮಾಹಿತಿ

- 40 ನಿಮಿಷಗಳ ಕಾಲ ಒನ್–ಟು–ಒನ್ ಮಾತುಕತೆ
- ವಿಧಾನಸಭೆಯಲ್ಲಿ ರಾಜಣ್ಣ ಹನಿಟ್ರ್ಯಾಪ್ ಪ್ರಸ್ತಾಪಿಸಿದ್ದಕ್ಕೆ ಸಮರ್ಥನೆ
- ಪರಿಷತ್ 4 ಸ್ಥಾನಗಳಿಗೆ ಪಟ್ಟಿ ಸಲ್ಲಿಕೆ; ಹರಿಪ್ರಸಾದ್, ನಾಗೇಂದ್ರ ಸಂಪುಟ ಸೇರ್ಪಡೆ ಪ್ರಸ್ತಾಪ

ಬೆಂಗಳೂರು, ಏ.3(ಕೆಎಂಶಿ)– ಹನಿಟ್ರ್ಯಾಪ್ ಹಾಗೂ ಸಹಕಾರಿ ಸಚಿವ ಎನ್.ರಾಜಣ್ಣ ಪುತ್ರರೂ ಆದ ವಿಧಾನಪರಿಷತ್ ಸದಸ್ಯ ರಾಜೇಂದ್ರ ಹತ್ಯೆ ಸಂಚು ಹಿಂದಿನ ಕೈವಾಡದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ಪೂರ್ಣ ಮಾಹಿತಿ ನೀಡಿದ್ದಾರೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿರುವ ಮುಖ್ಯಮಂತ್ರಿ ಇಂದು ಬೆಳಗ್ಗೆ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಸುಮಾರು 40 ನಿಮಿಷಗಳಿಗೂ ಹೆಚ್ಚು ಕಾಲ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಲ್ಲದೆ, ತಮ್ಮ ಆಪ್ತ ಸಚಿವರ ಬಳಗ ದೆಹಲಿಯಲ್ಲೇ ಇದ್ದರೂ ಯಾರನ್ನೂ ತಮ್ಮ ಜೊತೆ ಕರೆದುಕೊಂಡು ಹೋಗದೆ, ತಾವು ಒಬ್ಬರೇ ಗೌಪ್ಯ ಮಾತುಕತೆ ನಡೆಸಿದ್ದಾರೆ. ಚರ್ಚೆ ವೇಳೆ ಹನಿಟ್ರ್ಯಾಪ್ ಬಗ್ಗೆ ರಾಹುಲ್ ಗಾಂಧಿ ಮಾಹಿತಿ ಪಡೆದರೆನ್ನಲಾಗಿದೆ. ಸಚಿವ ರಾಜಣ್ಣ ವಿಧಾನಸಭೆಯಲ್ಲಿ ನೀಡಿದ ಹಠಾತ್ ಹೇಳಿಕೆ ಬಗ್ಗೆ ಮುಖ್ಯಮಂತ್ರಿ ಸಮರ್ಥಿಸಿಕೊಂಡಿದ್ದಾರೆ. ಹನಿಟ್ರ್ಯಾಪ್ ಕರ್ನಾಟಕ ರಾಜಕೀಯದಲ್ಲಿ ತಲ್ಲಣ ಉಂಟು ಮಾಡಿರುವ ಅಂಶಗಳನ್ನು ರಾಹುಲ್ ಗಾಂಧಿ ಮುಂದಿಟ್ಟಿದ್ದಾರೆ.

ಉಪಮುಖ್ಯಮಂತ್ರಿ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನೂ ಹೊಂದಿರುವುದಕ್ಕೆ ಸರ್ಕಾರ ಮತ್ತು ಪಕ್ಷದ ವಲಯದಲ್ಲಿ ಅಪಸ್ವರ ಎದ್ದಿದೆ. ಈ ವಿಷಯ ಸಾರ್ವಜನಿಕವಾಗಿ ಚರ್ಚಿತವಾಗಿ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದೆ. ಶಿವಕುಮಾರ್ ಒಂದು ಹುದ್ದೆ ಹಾಗೂ ಒಂದು ಖಾತೆಯಲ್ಲಿ ಮುಂದುವರೆಯಲಿ. ಇದರಿಂದ ಅವರು ತಮ್ಮ ಜವಾಬ್ದಾರಿಗೆ ಹೆಚ್ಚು ಸಮಯ ನೀಡಲು ಸಾಧ್ಯ ಎಂದಿದ್ದಾರೆ.


ಗುರುವಾರ ಬೆಳಗ್ಗೆ ನವದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಏಕಾಂಗಿಯಾಗಿ ಭೇಟಿಯಾದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಈಶ್ವರ್ ಖಂಡ್ರೆ ಅವರನ್ನು ತರುವುದರಿಂದ ಸರ್ಕಾರ ಮತ್ತು ಪಕ್ಷದಲ್ಲಿ ಸಾಮರಸ್ಯ ಇರುತ್ತದೆ, ಗೊಂದಲ ಇರುವುದಿಲ್ಲ ಎಂಬ ಮಾಹಿತಿ ನೀಡಿದ್ದಾರೆ. ವಿಧಾನಪರಿಷತ್‌ನ ತೆರವಾದ ನಾಲ್ಕು ಸದಸ್ಯ ಸ್ಥಾನಗಳಿಗೆ ನಾಮ ನಿರ್ದೇಶನ ಪಟ್ಟಿಯನ್ನು ರಾಹುಲ್ ಗಾಂಧಿ ಮುಂದಿಟ್ಟಿದ್ದಾರೆ. ಪಟ್ಟಿಯಲ್ಲಿ ಬಿ.ಎಲ್.ಶಂಕರ್ (ಒಕ್ಕಲಿಗ), ದಿನೇಶ್ ಅಮೀನ್ ಮಟ್ಟು (ಹಿಂದುಳಿದ), ಅಲ್ಲದೆ, ದಲಿತ ಮತ್ತು ಕೊರಚ ಸಮುದಾಯದ ತಲಾ ಒಬ್ಬರ ಹೆಸರು ಇದೆ ಎನ್ನಲಾಗಿದೆ.

ಪಕ್ಷದ ಹಿರಿಯ ನಾಯಕರಾದ ಬಿ.ಕೆ.ಹರಿಪ್ರಸಾದ್ ಮತ್ತು ಬಿ.ನಾಗೇಂದ್ರ ಅವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಮಾಡಿ ಕೊಡುವಂತೆಯೂ ಕೋರಿದ್ದಾರೆ.

ರಾಜಕೀಯ ವಿಚಾರವಲ್ಲದೆ, ಆಡಳಿತಾತ್ಮಕವಾಗಿ ಕೆಲವು ವಿಷಯಗಳನ್ನು ರಾಹುಲ್ ಗಮನಕ್ಕೆ ತಂದಿರುವ ಮುಖ್ಯಮಂತ್ರಿ, ಕಾಂತರಾಜ್ ವರದಿ ಅನುಷ್ಠಾನಗೊಳಿಸಿ, ಒಟ್ಟಾರೆ ಶೇಕಡ 73ರಷ್ಟು ಮೀಸಲಾತಿ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆಯೂ ಮಾಹಿತಿ ನೀಡಿ, ಇದಕ್ಕೆ ಅನುಮತಿ ನೀಡುವಂತೆ ಕೋರಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಅವರ ಮಾತುಗಳನ್ನು ಆಲಿಸಿದ ರಾಹುಲ್ ಗಾಂಧಿ ಕೆಲವು ವಿಚಾರಗಳಿಗೆ ಸಂಬಂಧಿಸಿದಂತೆ ತಾವು ವೇಣುಗೋಪಾಲ್ ಜೊತೆ ಚರ್ಚಿಸುವುದಾಗಿಯೂ, ನೀವೂ ಸಹ ಅವರನ್ನು ಭೇಟಿ ಮಾಡಿ ಈ ವಿಷಯಗಳ ಬಗ್ಗೆ ಸಮಾಲೋಚಿಸುವಂತೆ ಸಲಹೆ ನೀಡಿದರೆನ್ನಲಾಗಿದೆ.

ಈ ಮಧ್ಯೆ, ಸರ್ಕಾರಕ್ಕೆ ಎರಡು ವರ್ಷ ತುಂಬುವವರೆಗೆ ನಾಯಕತ್ವ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಬದಲಾವಣೆ ಸಂಬಂಧ ಸರ್ಕಾರದ ಮಟ್ಟದಲ್ಲಿ ಯಾವುದೇ ಪ್ರಸ್ತಾಪವಾಗಕೂಡದು. ಪಕ್ಷದ ವೇದಿಕೆ ಬಿಟ್ಟು ಸಚಿವ ರಾಜಣ್ಣ ಹನಿಟ್ರ್ಯಾಪ್ ಪ್ರಕರಣವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ್ದು ಸರಿಯಲ್ಲ. ಪರಿಷತ್‌ಗೆ ನಾಮಕರಣ ಸಂಬಂಧ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿ ಅಂತಿಮಗೊಳಿಸುವಂತೆ ರಾಹುಲ್‌ಗಾಂಧಿ ಖಡಕ್ಕಾಗಿ ಸೂಚಿಸಿದರೆಂದು ಹೇಳಲಾಗಿದೆ.

ಶ್ರದ್ಧಾಂಜಲಿ



ಡಾ. ಎನ್. ಮನಮೋಹನ್ ರಾವ್

ಜನನ: 09.05.1940 - ನಿಧನ: 02.04.2025

ನಮ್ಮೆಲ್ಲರ ಪ್ರೀತಿ ಪಾತ್ರರಾದ ನೀವು ನಮ್ಮನ್ನು ಅಗಲಿದ್ದೀರಿ.
ಆದರೆ, ನಮ್ಮ ಹೃದಯಗಳಲ್ಲಿ ಶಾಶ್ವತರಾಗಿ ನೆಲೆಸಿರುವಿರಿ.

ಪತ್ನಿ: ಭಾರತಿ ಎಂ. ರಾವ್
ಪುತ್ರಿಯರು- ಎಂ. ಸುಮನಾ ರಾವ್ ಮತ್ತು ಎಂ. ಸಹನಾ ರಾವ್
ಸಹೋದರರು- ಎನ್. ಮನೋಹರ್ ರಾವ್, ಡಾ. ಎನ್. ನಿತ್ಯಾನಂದ ರಾವ್,
ಸಹೋದರಿ- ಡಾ. ಎನ್. ಮಮತಾ ರಾವ್ & ಕುಟುಂಬ ಸದಸ್ಯರು

ಮೈಸೂರು ಮಿತ್ರ

ನಾಳೆಯಿಂದ ಮನೋವೈದ್ಯರ ಸಮ್ಮೇಳನ

ರಾಜಕೇಸರಿ ಶ್ರೀ ಪುರುಷ ಮನೋವೈದ್ಯರ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಏ.3(ಜಿಎ)–ಭಾರತೀಯ ಮನೋವೈದ್ಯ ಸೊಸೈಟಿಯ ಮೈಸೂರು ಶಾಖೆ ವತಿಯಿಂದ ಕ್ಲಿನಿಕಲ್ ಅಭ್ಯಾಸದಲ್ಲಿ ಮನೋವೈದ್ಯರ ಸಮ್ಮೇಳನ ಮತ್ತು ರಾಜ ಕೇಸರಿ ಶ್ರೀ ಪುರುಷ ಮನೋವೈದ್ಯರ ಕ್ರಿಕೆಟ್ ಪಂದ್ಯಾವಳಿಯನ್ನು ಏ.5 ಮತ್ತು 6ರಂದು ಮೈಸೂರಲ್ಲಿ ಆಯೋಜಿಸಲಾಗಿದೆ ಎಂದು ಆಯೋಜಕ ಡಾ.ಬಿ.ಎನ್.ರವೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೋರು ಹೋಟೆಲ್‌ನ ದರ್ಬಾಲ್ ಹಾಲ್‌ನಲ್ಲಿ ಏ.5 ಮತ್ತು 6ರಂದು ಮೈಸೂರು ವೈದ್ಯಕೀಯ ವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ಮನೋವೈದ್ಯ ವಿಭಾಗವು ಆಯೋಜನೆ ಮಾಡುತ್ತಿದ್ದು, ಸುಮಾರು 9 ವಿಷಯ ಮಂಡನೆಗಳು ಹಾಗೂ 150 ಮನೋವೈದ್ಯರು ಪಾಲ್ಗೊಳ್ಳುತ್ತಾರೆ ಎಂದರು.

ಅಂದು ಬೆಳಗ್ಗೆ 10.15ಕ್ಕೆ ನಡೆಯಲಿರುವ ಸಮ್ಮೇಳನವನ್ನು ಮೈಸೂರು ವೈದ್ಯಕೀಯ ವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಭಾರತೀಯ ಮಾನವೀಯ ಸಂಘ ಕರ್ನಾಟಕ ಶಾಖೆಯ ಪದಾಧಿಕಾರಿಗಳಾದ ಡಾ.ಮಹೇಶ್ ಆರ್.ಗೌಡ, ಡಾ.ಬಿ.ಆರ್.ಮಧುಕರ್‌ಗೌಡ, ಡಾ.ಎಂ.ಎನ್.ಅನಿಲ್‌ಕುಮಾರ್, ಡಾ.ನಾರಾಯಣ್ ಆರ್.ಮುತಾಲಿಕ್, ಡಾ.ಅಲೋಕ್ ಎನ್.ಘಂಟೆ, ಡಾ.ವಿಜಯ ಕುಮಾರ್ ಎಸ್.ಹರಿಬಿಶೆಟ್ಟರ್, ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ಸೋಮಶೇಖರ್ ಬಿಜ್ಜಳ ಹಾಗೂ ವಿದೇಶದಿಂದ ಡಾ.ಪ್ಯಾಟ್ರಿಕ್ ಕೆಂಪರ್ಮನ್, ಡಾ.ಪೀಟರ್ ಲೋಪಿಂಗ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಂತರ ಕ್ರಿಕೆಟ್ ಪಂದ್ಯಾವಳಿಯನ್ನು 1.30ಕ್ಕೆ ಅಂಡರ್ 15 ತಂಡದ ನಾಯಕಿ ನೇಸರ ಸತೀಶ್ ಉದ್ಘಾಟಿಸಲಿದ್ದಾರೆ. ರಾಜಕೇಸರಿ ಶ್ರೀ ಪುರುಷ ಹಾಗೂ ಚಾಮುಂಡಿ ಪುರುಷರು ಹಾಗೂ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗಳನ್ನು ಮಹಾರಾಜ ಹಾಗೂ ಕಾಫಿ ಬೋರ್ಡ್ ಮೈದಾನದಲ್ಲಿ ಆಯೋಜಿಸಲಾಗಿದೆ. ಭಾಗವಹಿಸುವ ತಂಡಗಳು ಪುರುಷರಲ್ಲಿ ನಾಡಪ್ರಭು ಕೆಂಪೇಗೌಡ, ತಲಕಾಡು ಗಂಗಾ, ಹೊಯ್ಸಳ, ರಾಷ್ಟ್ರಕೂಟ ಹಾಗೂ ಮದಕರಿ. ಮಹಿಳಾ ತಂಡಗಳು ವಿಜಯಮಹದೇವಿ, ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಹಾಗೂ ಗಂಗಮ್ಮದೇವಿ ತಂಡಗಳು ಭಾಗವಹಿಸಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಅಭಿಜಿತ್ ಆರ್.ಹೊನ್ನಗೋಡು, ಡಾ.ಪ್ಯಾಟ್ರಿಕ್ ಕೆಂಪರ್ಮನ್, ಡಾ.ಪೀಟರ್ ಲೋಪಿಂಗ್ ಉಪಸ್ಥಿತರಿದ್ದರು.

ಏ.6ರಿಂದ ರಾಮನವಮಿ ಸಂಗೀತೋತ್ಸವ



ಮೈಸೂರು, ಏ.3(ಜಿಎ)–ಮೈಸೂರಿನ ರಾಮಾಭ್ಯುದಯ ಸಭಾದ ವತಿಯಿಂದ ರಾಮನವಮಿ ಅಂಗವಾಗಿ ಏ.6ರಿಂದ 21ರವರೆಗೆ ಸಂಗೀತೋತ್ಸವ ಹಾಗೂ ರಾಮೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಮಾಭ್ಯುದಯ ಸಭಾದ ಅಧ್ಯಕ್ಷ ಎನ್.ಶ್ರೀರಾಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.6ರಂದು ಸಂಜೆ 5ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್.ಉಮೇಶ್, ಎಸ್‌ಎಲ್‌ವಿ ಬುಕ್ ಇಂಡಿಯಾ ಪ್ರೈಲಿ ಮಾಲೀಕ ದಿವಾಕರ್ ದಾಸ್ ಆಗಮಿಸುವರು ಎಂದರು.

ಸಂಗೀತೋತ್ಸವ ಕಾರ್ಯಕ್ರಮಗಳು ಏ.18ರವರೆಗೆ ಶ್ರೀರಾಮಪೇಟೆಯ ಕುಂಚಿಟಿಗರ ಸಂಘದ ಆಲಮ್ಮನವರ ಛತ್ರದಲ್ಲಿ ಸಂಜೆ 6ರಿಂದ ರಾತ್ರಿ 9.30ರವರೆಗೆ ನಡೆದರೆ, ರಾಮೋತ್ಸವ ಕಾರ್ಯಕ್ರಮ ರಾಮಮಂದಿರದಲ್ಲಿ ನಡೆಯಲಿದೆ. 11ರವರೆಗೆ ವಿವಿಧ ಭಜನಾ ಮಂಡಳಿಗಳಿಂದ ರಾಮಭಜನೆ ಮತ್ತು ದೇವರ ನಾಮ ಸಂಜೆ 5ರಿಂದ 6ರವರೆಗೆ ನಡೆಯಲಿದೆ ಎಂದರು. ಏ.12ರಂದು ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಏ.13ರಂದು ಸೀತಾ ಕಲ್ಯಾಣ, ಏ.14 ಮತ್ತು 15ರಂದು ರಾಮಾಯಣದ ಪ್ರವಚನ, ಏ.16ರಂದು ಶ್ರೀರಾಮ ಪಟ್ಟಾಭಿಷೇಕ, 19ರಂದು ಹನುಮಂತೋತ್ಸವ, 20ರಂದು ಶಯನೋತ್ಸವ, 21ರಂದು ಒಳಗುಡಿ ಉತ್ಸವ ಹಾಗೂ ಮೇ 2ರಂದು ಶಂಕರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಭಾದ ಉಪಾಧ್ಯಕ್ಷ ಎಸ್.ಕೆ.ಜಗದೀಶ್, ಕಾರ್ಯದರ್ಶಿ ಫಣೀಂದ್ರ, ಖಜಾಂಚಿ ಪದ್ಮಾ ಅನಂತ್, ಟ್ರಸ್ಟಿಗಳಾದ ಗುರುಪ್ರಸಾದ್, ಆರ್.ಆರ್.ಜನಾರ್ದನ್ ಉಪಸ್ಥಿತರಿದ್ದರು.



ನಿವೃತ್ತ ಪೊಲೀಸ್ ಅಧಿಕಾರಿಗೆ ಸನ್ಮಾನ

ಮೈಸೂರಿನ ಸಿಎಆರ್ ಮೈದಾನದಲ್ಲಿ ನಡೆದ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಮುಸ್ತಾಫಾ ಕಮಲ್ ಪಾಷಾ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಅವರನ್ನು ಚಿತ್ರದಲ್ಲಿ ಕಾಣಬಹುದು.

ಏ.6ರಂದು ಪ್ರಸನ್ನ ಹೆಗ್ಗೋಡು 'ಆಕ್ಟಿಂಗ್ ಅಂಡ್ ಬಿಯಾಂಡ್' ಪುಸ್ತಕ ಬಿಡುಗಡೆ

ಮೈಸೂರು, ಏ. 3– ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ ವತಿಯಿಂದ ಹಿರಿಯ ರಂಗ ನಿರ್ದೇಶಕರು ಹಾಗೂ ಗಾಂಧೀವಾದಿ ಪ್ರಸನ್ನ ಹೆಗ್ಗೋಡು ಅವರ 'ಆಕ್ಟಿಂಗ್ ಅಂಡ್ ಬಿಯಾಂಡ್' ಪುಸ್ತಕ ಬಿಡುಗಡೆ ಮತ್ತು ಚರ್ಚೆಯನ್ನು ಏ.6ರಂದು ಸಂಜೆ 5 ಗಂಟೆಗೆ ಹಾರ್ಡ್ವಿಕ್ ಪಿಯು ಕಾಲೇಜು ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಪುಸ್ತಕದ ಕುರಿತು ಮಾತನಾಡಲು ಹಾಗೂ ಲೇಖಕರೊಂದಿಗೆ ಸಂವಾದ ನಡೆಸಲು ಲೇಖಕಿ ಪ್ರೀತಿ ನಾಗರಾಜ್ ಹಾಗೂ ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸಸ್ (LTTS) ಡೆಲಿವರಿ ಮುಖ್ಯಸ್ಥರೂ ಹಾಗೂ ಲೇಖಕರು ಶಶಿಧರ ಡೋಂಗ್ರೆ ಭಾಗವಹಿಸಲಿದ್ದಾರೆ. ಕೃತಿಯ ಲೇಖಕರಾದ ರಂಗ ನಿರ್ದೇಶಕ ಪ್ರಸನ್ನ ಹೆಗ್ಗೋಡು ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಹೆಚ್ಚಿನ ಮಾಹಿತಿಗಾಗಿ ರಾಜೇಶ್ ಬಸವಣ್ಣ ಅವರನ್ನು ಮೊ.9448871815 ಮೂಲಕ ಸಂಪರ್ಕಿಸಬಹುದು.

ಏ.6ರಿಂದ 'ಹಾಡು ಆಟ ಆಡು' ಮಕ್ಕಳ ಬೇಸಿಗೆ ಶಿಬಿರ

ಮೈಸೂರು, ಏ.3(ಜಿಎ)–ಮೈಸೂರಿನ ನೇಪಥ್ಯ ರಂಗ ತಂಡದಿಂದ ಏ.6ರಿಂದ ಮೇ 2ರವರೆಗೆ 'ಹಾಡು ಆಟ ಆಡು' ಮಕ್ಕಳ ಬೇಸಿಗೆ ಶಿಬಿರ–2025 ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಂಗತಂಡದ ಗೌತಮ್ ವಿರಾಜ್ ಈ ವಿಷಯ ತಿಳಿಸಿ, ಸ್ಪಾರ್ಕ್ ಅಕಾಡೆಮಿ, ಜಿ.ಎನ್.ಆರ್ ಫೋಟೋಗ್ರಫಿ, ಫಿನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ ಮತ್ತು ಸ್ಟ್ರೀಟ್ ಡ್ರೀಮರ್ಸ್ ತಂಡಗಳ ಸಹಯೋಗದೊಂದಿಗೆ ಜೆ.ಪಿ.ನಗರದ ಪುಟ್ಟರಾಜು ಗವಾಯಿ ಕ್ರೀಡಾಂಗಣ ಹಾಗೂ ಫಿನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ ಎರಡು ಸ್ಥಳಗಳಲ್ಲಿ ಶಿಬಿರ ನಡೆಯಲಿದೆ. 6ರಿಂದ 15ವರ್ಷದೊಳಗಿನ 40 ಮಕ್ಕಳಿಗೆ ಅವಕಾಶವಿದೆ. ಶಿಬಿರವು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ನಡೆಯಲಿದ್ದು, ನಾಟಕ, ಈಜು, ಜಾನಪದ ನೃತ್ಯ, ಯೋಗ, ರಂಗಭೂಮಿ ಗೀತೆ, ದೇಶಿ ಆಟಗಳು, ಮುಖವಾಡ ತಯಾರಿಕೆ, ಕ್ರೀಡೆ, ಮಕ್ಕಳ ಸಂತೆ, ಕಳರಿ ಫೈಟ್, ಜಿಮ್ನಾಸ್ಟಿಕ್, ಪ್ರವಾಸ, ಮಾಡೆಲಿಂಗ್ ಸೇರಿದಂತೆ ಹಲವು ಚಟುವಟಿಕೆ ಒಳಗೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ಸಾಗರ್, ಸತೀಶ್, ಮೈಕಲ್, ಜ್ಯೋತಿ, ಚೈತನ್ಯ, ಸಂಜಯ್‌ರಾಮ್ ಇದ್ದರು.

ರಾಜೇಂದ್ರ ಪ್ರಸಾದ್ ನಾಯಕ್ ನಿಧನ



ಮೈಸೂರು, ಏ.3– ಮೈಸೂರಿನ ಸಿದ್ಧಾರ್ಥನಗರದ ನಿವಾಸಿಯಾಗಿದ್ದ ರಾಜೇಂದ್ರ ಪ್ರಸಾದ್ ನಾಯಕ್(41) ಅವರು ಹೃದಯಾಘಾತದಿಂದ ಗುರುವಾರ ಸಾವನ್ನಪ್ಪಿದರು.

ಇವರು ಪತ್ನಿ, ಇಬ್ಬರು ಮಕ್ಕಳು, ತಂದೆ, ತಾಯಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಸ್ವಗ್ರಾಮವಾದ ಕೊಳ್ಳೇಗಾಲ ಸಮೀಪದ ಪಾಳ್ಯದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಹದೇವಮ್ಮ

ಮೈಸೂರು, ಏ.3– ನಗರದ ಕ್ಯಾತಮಾರನಹಳ್ಳಿ 12ನೇ ಕ್ರಾಸ್ ನಿವಾಸಿ ಶ್ರೀನಿವಾಸ್(ಮರಲಯ್ಯನವರ ಪುತ್ರ) ಅವರ ಧರ್ಮಪತ್ನಿ ಶ್ರೀಮತಿ ಮಹದೇವಮ್ಮ (60) ಅವರು ಗುರುವಾರ ನಿಧನರಾದರು. ಇವರು ಪುತ್ರ ಎಟಿಎಂಇ ಕಾಲೇಜಿನ ಅಧೀಕ್ಷಕ ಶಿವರಾಜ್ ಹಾಗೂ ಆರು ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕ್ಯಾತಮಾರನಹಳ್ಳಿ ರುದ್ರಭೂಮಿಯಲ್ಲಿ ಶುಕ್ರವಾರ ಬೆಳಗ್ಗೆ 11ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಗ್ರಾಮವೂ ನನ್ನೂರಿದ್ದಂತೆ

● ಶಾಸಕ ಜಿ.ಟಿ.ದೇವೇಗೌಡರ ಭಾವನುಡಿ ● ರೈತರಿಗೆ ಸಾಗುವಳಿ ಚೀಟಿ ಸಮಸ್ಯೆ ಪರಿಹಾರಕ್ಕೆ ಹೋರಾಟ ● ರೈತರಿಗೆ ಹಕ್ಕುಪತ್ರ ನೀಡುವವರೆಗೆ ನನಗೆ ನೆಮ್ಮದಿ ಇಲ್ಲ



ಮೈಸೂರು ತಾಲೂಕಿನ ಗುಮಚನಹಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ 94–ಸಿ ಅಡಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು.

ಮೈಸೂರು, ಏ.3(ಎಸ್‌ಬಿಡಿ)– ರೈತರು ನಾಲ್ಕೈದು ದಶಕಗಳಿಂದ ಸಾಗುವಳಿ ಮಾಡುತ್ತಿರುವ ಭೂಮಿಯ ಹಕ್ಕುಪತ್ರ ನೀಡುವಲ್ಲಿ ಎದುರಾಗಿರುವ ಸಮಸ್ಯೆ ಪರಿಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸುತ್ತಿರುವುದಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಮೈಸೂರು ತಾಲೂಕು, ಗುಮಚನಹಳ್ಳಿ ಗ್ರಾಮದಲ್ಲಿ ಅನಧಿಕೃತ ಮನೆಗಳ ಸಕ್ರಮಗೊಳಿಸಲಾದ ಫಲಾನುಭವಿಗಳಿಗೆ 94–ಸಿ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ಕಳೆದ ನಾಲ್ಕೈದು ದಶಕಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ರೈತರಿಗೆ ಹಕ್ಕುಪತ್ರ ಕೊಡಿಸುವವರೆಗೆ ನನಗೆ ನೆಮ್ಮದಿ ಇಲ್ಲ. ಈ ಸಂಬಂಧ ಎದುರಾಗಿರುವ ಸಮಸ್ಯೆಗಳ ಪರಿಹಾರಕ್ಕೆ ಅಧಿವೇಶನದಲ್ಲಿ ಆಗ್ರಹಿಸಿದ್ದಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಮಾತನಾಡಿದ್ದೇನೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಪ್ರತಿಯೊಂದು ಹಳ್ಳಿಯೂ ನನ್ನ ಊರಿದ್ದಂತೆ. 25 ವರ್ಷಗಳ ಕಾಲ ಸಿದ್ದರಾಮಯ್ಯನವರು ಇಲ್ಲಿನ ಶಾಸಕರಾಗಿದ್ದರು. ಕಳೆದ ಮೂರು ಚುನಾವಣೆಗಳಲ್ಲಿ ನನ್ನನ್ನು ಆಯ್ಕೆ ಮಾಡಿ, ಆಶೀರ್ವದಿಸಿದ್ದೀರಿ. ಕ್ಷೇತ್ರದ ಜನರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡಿಕೊಂಡು ಬಂದಿದ್ದೇನೆ. ಜಯಪುರ, ಗುಮಚನಹಳ್ಳಿ, ಹಾರೋಹಳ್ಳಿ, ಚಿಕ್ಕನಹಳ್ಳಿ ಸೇರಿದಂತೆ ಹಲವು ಗ್ರಾಮಗಳಿಂದ ಹಲವರು ನಮ್ಮ ಮನೆಗೆ ದಾಖಲೆ ಇಲ್ಲದ ಕಾರಣ ಬ್ಯಾಂಕ್‌ನಲ್ಲಿ ಸಾಲ ಸಿಗುತ್ತಿಲ್ಲ ಎಂದು ಹೇಳಿಕೊಂಡಿದ್ದು. ಆದ್ದರಿಂದ ಈ ಸಮಸ್ಯೆ ಪರಿಹಾರಕ್ಕೆ ಮುಂದಾಗಿದ್ದೇನೆ ಎಂದು ಹೇಳಿದರು.

ದಶಕಗಳಿಂದ ಉಳುಮೆ ಮಾಡಿಕೊಂಡು ಬಂದಿದ್ದರೂ, ದಾಖಲೆಯಲ್ಲಿ ರೈತರ ಹೆಸರಿದ್ದರೂ ಅದು ಅರಣ್ಯಭೂಮಿ ಎಂದು ದಾಖಲಿಸಲಾಗಿದೆ. ಪರಿಣಾಮ ಹಕ್ಕು ಪತ್ರ ನೀಡುವಲ್ಲಿ ಸಮಸ್ಯೆಯಾಗಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಾತ್ರವಲ್ಲ ಹಲವು ಕ್ಷೇತ್ರಗಳಲ್ಲಿ ಈ ಸಮಸ್ಯೆ ಇದೆ. ಆದ್ದರಿಂದ ಅರಣ್ಯ ಇಲಾಖೆ ಭೂಮಿ ಎಂದು ತೋರಿಸುವ ಜಮೀನಿನಲ್ಲಿ ರೈತರು ಉಳುಮೆ ಮಾಡಿಕೊಂಡು ಬಂದಿದ್ದರೆ ಅವರಿಗೆ ಹಕ್ಕುಪತ್ರ ನೀಡಲು ತೀರ್ಮಾನಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ಜಯಪುರ ಹೋಬಳಿಯ ಕೆಲವು ಗ್ರಾಮಗಳ ರೈತರು ಉಳುಮೆ ಮಾಡಿಕೊಂಡು ಬಂದಿದ್ದಾರೆ. ಸಾಗುವಳಿ ಚೀಟಿ ಇದ್ದರೂ ಅವರ ಭೂಮಿ ಅರಣ್ಯ ಇಲಾಖೆ ಭೂಮಿಯಾಗಿಬಿಟ್ಟಿದೆ. ಇಂತಹದ್ದನ್ನು ಸರಿಪಡಿಸಿ ಹಕ್ಕುಪತ್ರ ನೀಡಬೇಕೆಂದು ತೀರ್ಮಾನಿಸಿ ಹಲವು ತಿಂಗಳಿಂದ ಪ್ರಯತ್ನಿಸಲಾಗಿತ್ತು. ಒಂದು ಒಳ್ಳೆಯ ಕೆಲಸಕ್ಕೆ ನಾನಾ ವಿಘ್ನಗಳು ಎನ್ನುವಂತೆ ಹಲವು ಅಡತಡೆಗಳ ನಡುವೆ ಕೊನೆಗೂ ಹಕ್ಕುಪತ್ರ ನೀಡಿರುವುದಕ್ಕೆ ಸಂತಸವಾಗಿದೆ. ತಹಸಿಲ್ದಾರ್ ಮಹೇಶ್ ಕುಮಾರ್ ವರ್ಷದಿಂದ ಹಕ್ಕುಪತ್ರ ನೀಡಲು ಸಿದ್ಧತೆ ಮಾಡಿಕೊಂಡಿದ್ದರಾದರೂ ಒಂದಲ್ಲಾ ಒಂದು ಕಾರಣಕ್ಕೆ ವಿಳಂಬವಾಗುತ್ತಿತ್ತು ಎಂದರು.

ಉದ್ಬೂರು, ಗುಮಚನಹಳ್ಳಿ ಮೊದಲಾದ ಗ್ರಾಮಗಳಿಗೆ ಕುಡಿಯುವ ನೀರು, ರಸ್ತೆ ಚರಂಡಿ, ವಿದ್ಯುತ್ ದೀಪದ ವ್ಯವಸ್ಥೆ ಮಾಡಲಾಗಿದೆ. ಆಶ್ರಯ ಬಡಾವಣೆ ಸಂಬಂಧಿತ ಅಡೆತಡೆಗಳನ್ನು ನಿವಾರಿಸಲು ಗಮನಹರಿಸಿದ್ದೇನೆ. ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸಿದರೆ ತಕ್ಷಣವೇ ಮಂಜೂರಾತಿ ದೊರಕುತ್ತದೆ ಎಂದು ಇದೇ ವೇಳೆ ತಿಳಿಸಿದರು.

ಈ ಸಂದರ್ಭದಲ್ಲಿ ಮಂಡನಹಳ್ಳಿ ಗ್ರಾಮದಲ್ಲಿ 38 ಲಕ್ಷ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಕಾಮಗಾರಿ, ಶಾಸಕರ ವಿಶೇಷ ಅನುದಾನದಲ್ಲಿ ಕೈಗೊಂಡಿರುವ ಮಂಡನಹಳ್ಳಿ–ಕಾಡನಹಳ್ಳಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ, ಶಾಲಾ ಕೊಠಡಿಗಳ ಉದ್ಘಾಟನೆಯನ್ನೂ ಜಿಟಿಡಿ ನೆರವೇರಿಸಿದರು.

ಇನ್ನು ಮುಂದೆ ಚಿತ್ರ ಪ್ರದರ್ಶನಕ್ಕೆ ನಿರ್ಮಾಪಕರೆ ಹೊಸ ವ್ಯವಸ್ಥೆ ಮಾಡಿಕೊಳ್ಳಬೇಕು

● ಹಿರಿಯ ನಿರ್ದೇಶಕ ಟಿ.ಎನ್.ಸೀತಾರಾಮ್ ಸಲಹೆ ● ಅಮೃತ ಪೀಠಂ ದೃಶ್ಯ ಸಂವಹನ ವಿಭಾಗದ 'ಸಿನಿರಮಾ–2025' ಕಿರುಚಿತ್ರೋತ್ಸವಕ್ಕೆ ಚಾಲನೆ



ಮೈಸೂರಿನ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನಲ್ಲಿ ಗುರುವಾರ ಆಯೋಜಿಸಿದ್ದ 'ಸಿನಿರಮಾ–2025' 7ನೇ ರಾಷ್ಟ್ರಮಟ್ಟದ ಕಿರುಚಿತ್ರೋತ್ಸವವನ್ನು ಹಿರಿಯ ನಿರ್ದೇಶಕ ಟಿ.ಎನ್.ಸೀತಾರಾಮ್ ಉದ್ಘಾಟಿಸಿದರು.

ಮೈಸೂರು, ಏ.3(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಚಿತ್ರಮಂದಿರಕ್ಕೆ ಬಂದು ಸಿನಿಮಾ ವೀಕ್ಷಿಸುವ ಪ್ರೇಕ್ಷಕರ ಸಂಖ್ಯೆ ಕ್ಷೀಣಿಸುತ್ತಿದ್ದು, ಯುವ ನಿರ್ಮಾಪಕರು ತಮ್ಮ ಚಲನಚಿತ್ರಗಳನ್ನು ಪ್ರದರ್ಶಿಸಲು ಹೊಸ ಹೊಸ ವೇದಿಕೆ ಕಂಡುಕೊಳ್ಳುವತ್ತ ಗಮನ ಹರಿಸಬೇಕು ಎಂದು ಹಿರಿಯ ನಿರ್ದೇಶಕ ಟಿ.ಎನ್.ಸೀತಾರಾಮ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂ ಸಭಾಂಗಣದಲ್ಲಿ ಸಂಸ್ಥೆಯ ದೃಶ್ಯಸಂವಹನ ವಿಭಾಗ ಆಯೋಜಿಸಿದ್ದ 'ಸಿನಿರಮಾ–2025' 7ನೇ ರಾಷ್ಟ್ರಮಟ್ಟದ ಕಿರುಚಿತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಿನಿಮಾ ಕ್ಷೇತ್ರ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದು, ತತ್ತರಿಸುವಂತಾಗಿದೆ. ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ವೀಕ್ಷಣೆ ಮಾಡುವ ಪ್ರೇಕ್ಷಕರ ಸಂಖ್ಯೆ ಕ್ಷೀಣಿಸುತ್ತಿದೆ. ಆದರೂ ಹೊಸ ಹೊಸ ಸಿನಿಮಾ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಹೊಸ ಸಿನಿಮಾ ತಯಾರಿಸುವ ಚಿತ್ರ ನಿರ್ಮಾಪಕರು ತಮ್ಮ ಸಿನಿಮಾ ಪ್ರದರ್ಶನಕ್ಕಾಗಿ ಹೊಸ ವಿಧಾನ ಅಥವಾ ನೂತನ ವೇದಿಕೆಯನ್ನು ತಾವೇ ಅನ್ವೇಷಿಸಿಕೊಳ್ಳಬೇಕು. ಸಾಂಪ್ರದಾಯಿಕ ಮಾರ್ಗಗಳಿಗೆ ಜೋತು ಬೀಳುವ ಬದಲು, ಪ್ರೇಕ್ಷಕರನ್ನು ತಲುಪಲು ನಿಮ್ಮದೇ ಆದ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕು. ಹೃದಯವನ್ನು ಸ್ಪರ್ಶಿಸುವ ಕಥೆಯಿದ್ದರೆ ಅದು ಅತ್ಯುತ್ತಮ ಚಲನಚಿತ್ರವಾಗಿ ರೂಪುಗೊಳ್ಳುತ್ತದೆ ಎಂದರು.

ಸಿನೆಮಾ ಕೇವಲ ಕನ್ನಡಿಯಲ್ಲ. ಅದು ಪ್ರೇಕ್ಷಕ ಹಾಗೂ ಸಮಾಜದ ಪ್ರತಿಬಿಂಬ. ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಹೆಚ್ಚಾಗುತ್ತಿದೆ. ಜಗತ್ತು ಕೃತಕ ಬುದ್ಧಿಮತ್ತೆಯ ಪಾತ್ರವನ್ನು ಒಪ್ಪಿಕೊಂಡರೂ, ತಂತ್ರಜ್ಞಾನದ ಮೇಲೆ ಅತಿಯಾದ ಅವಲಂಬನೆ ಸರಿಯಲ್ಲ. ಕೃತಕ ಬುದ್ಧಿಮತ್ತೆ ಸಹಾಯ ಮಾಡಬಹುದು. ಆದರೆ ಸಿನೆಮಾ ಬೇಡುವ ಮಾನವ ಭಾವನೆಗಳ ಆಳವನ್ನು ಅದರಿಂದ ಬದಲಾಯಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

70 ಕಿರುಚಿತ್ರಗಳ ಪ್ರದರ್ಶನ: ಅಮೃತ ವಿಶ್ವವಿದ್ಯಾಪೀಠಂನಲ್ಲಿ ಆಯೋಜಿಸಿದ್ದ ಕಿರುಚಿತ್ರೋತ್ಸವದಲ್ಲಿ ದೇಶದ ವಿವಿಧ ರಾಜ್ಯಗಳಿಂದ ವಿವಿಧ ಭಾಷೆಗಳ ಸುಮಾರು 70 ಕಿರುಚಿತ್ರಗಳು ಸಲ್ಲಿಕೆಯಾಗಿದ್ದವು. ಆಯ್ಕೆಯಾದ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಅಮೃತ ವಿಶ್ವವಿದ್ಯಾಪೀಠಂ ಕ್ಯಾಂಪಸ್‌ನ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕರಾದ ಮುಕ್ತಿದಾಮೃತ ಚೈತನ್ಯ, ಪ್ರಾಂಶುಪಾಲರಾದ ಡಾ.ಜಿ.ರವೀಂದ್ರನಾಥ್, ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥರಾದ ಡಾ.ಮೌಲ್ಯ ಬಾಲಾಡಿ ಹಾಗೂ ಇತರರರು ಉಪಸ್ಥಿತರಿದ್ದರು.

ನಾಳೆ ವರುಣ ಗ್ರಾಮದ ಸರ್ಕಲ್‌ಗೆ ಡಾ.ಅಂಬೇಡ್ಕರ್ ಹೆಸರು ನಾಮಕರಣ



ಮೈಸೂರು, ಏ.2(ಜಿಎ)–ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿ ಯಿಂದ ಏ.5ರಂದು ಬೆಳಗ್ಗೆ 11 ಗಂಟೆಗೆ ವರುಣಾ ಗ್ರಾಮದ ಸರ್ಕಲ್‌ಗೆ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್ ನಾಮಕರಣ ಮತ್ತು ನಾಮಫಲಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲಾ ಈ ವಿಷಯ ತಿಳಿಸಿ, ಅಂದು ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್‌ಪಿ ವಿಷ್ಣುವರ್ಧನ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ತಹಸೀಲ್ದಾರ್ ಮಹೇಶ್, ಡಿವೈಎಸ್‌ಪಿ ಕರೀಂರಾವತರ್ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಛಲವಾದಿ ಮಹಾಸಭಾದ ರಾಜ್ಯಾಧ್ಯಕ್ಷ ವಾಣಿ ಕೆ.ಶಿವರಾಂ ವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪುಟ್ಟರಾಜು, ಸುದರ್ಶನ್, ಸಮೀರ್ ರೈ, ಭಾಗ್ಯಮ್ಮ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.04.2025 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2025ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಜಾನಪದ ಉತ್ಸವ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಪ್ರಾದೇಶಿಕ ಜಂಟಿ ನಿರ್ದೇಶಕ ಡಾ. ಬಿ. ಚಂದ್ರಶೇಖರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಪುಟ್ಟರಾಜ, ಉಪಸ್ಥಿತರು : ಎಂ. ವಿದ್ಯಾರಣ್ಯ, ಡಾ. ಎಸ್.ವಿ. ಮುರಳೀಧರ, ಡಾ. ಆರ್. ಗುರುಸ್ವಾಮಿ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ರಾಮ್ ಪತಂಗೆ ಅಂಡ್ ಕಂಪನಿ :** ಜಿಎಸ್‌ಟಿ ಜೆನಿ ಎಕ್ಸೋ–2, ಸ್ಥಳ: ನಂ. 35/ಬಿ, 2ನೇ ಮಹಡಿ, ದೇವರಾಜ ಅರಸು ರಸ್ತೆ, ಮೈಸೂರು, ಬೆಳಗ್ಗೆ 10 ರಿಂದ.

■ **ಶೇಷಾದ್ರಿಪುರಂ ಪದವಿ ಕಾಲೇಜು :** ಅನ್ವೇಷಣಾ–2025, ನ್ಯಾಷನಲ್ ಮಲ್ಟಿಡಿಸಿಪ್ಲಿನರಿ ಕಾನ್ಫರೆನ್ಸ್, ಅಧ್ಯಕ್ಷತೆ : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಪ್ರಾಸ್ತಾವಿಕ ಭಾಷಣ : ಡಾ.ಎಂ.ವಿ. ಸುನೀಲ್, ಅಧ್ಯಕ್ಷತೆ : ಕಾಲೇಜು ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ನವಾವರಣ ಪೂಜೆ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ದಶಶ್ಯಾಮಲಾ ಹೋಮ ಮತ್ತು ಶ್ರೀ ಮಹಾಲಕ್ಷ್ಮೀ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸ್ವಾರ್‌ಟೆಕ್‌ತ್ರಾ–2025 ಸಮಾರೋಪ ಸಮಾರಂಭ, ಉಪಸ್ಥಿತರು : ಜೆಎಸ್‌ಎಸ್ ಮಹಾವಿದ್ಯಾಪೀಠ ಹಣಕಾಸು ನಿರ್ದೇಶಕ ಎಸ್. ಪುಟ್ಟಬಸಪ್ಪ, ಸಮಾರೋಪ ಭಾಷಣ : ಪೂಜಾ ಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಬಹುಮಾನ ವಿತರಣೆ: ಡಾ.ಹೆಚ್.ಎಸ್. ನಾಗೇಂದ್ರಸ್ವಾಮಿ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಗಾನಭಾರತೀ :** ತಿಂಗಳ ಸಂಗೀತ ಕಾರ್ಯಕ್ರಮ, ವಿದುಷಿ ಶುಭ ಸಂತೋಷ್ ಅವರಿಂದ ವೀಣೆ, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಅಜಯ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ರಿಂದ.

■ **ಕರ್ನಾಟಕ ಬಯಲಾಟ ಅಕಾಡೆಮಿ, ಬಾಗಲಕೋಟೆ, ರಂಗಾಯಣ :** ಮೂಡಲಪಾಯ ಬಯಲಾಟ ಪರಂಪರೆ, ಸಂಜೆ 6.30ಕ್ಕೆ ದೊಡ್ಡಬ್ಯಾಡರಹಳ್ಳಿ ಉನ್ನತ ಪ್ರಾಥಮಿಕ ಶಾಲೆಯ ಮಕ್ಕಳಿಂದ 'ಕರ್ಣಾಜುನರ ಕಾಳಗ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ರಂಗಾಯಣ.

■ **ಶ್ರೀರಾಮಮಂದಿರ :** ಶ್ರೀ ರಾಮಚಂದ್ರಸ್ವಾಮಿಗಳವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಬಾಲಾ ತ್ರಿಪುರಸುಂದರೀ ಹೋಮ, ಸಂಜೆ 6.30 ರಿಂದ ಶ್ರೀ ಬ್ರಹ್ಮ ವಿದ್ಯಾ ಪ್ರತಿಷ್ಠಾನದ ವತಿಯಿಂದ ವಿದ್ವಾನ್ ಡಾ. ರಾ.ಸ. ನಂದಕುಮಾರ್ ಮತ್ತು ವೃಂದದವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಜಯನಗರ.


■ **ಶ್ರೀರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ಅಂಜನ ಮತ್ತು ಶರಣ್ಯ–ಶ್ರೀವತ್ಸ–ಸ್ಕಂದ ಅವರಿಂದ ದ್ವಂದ್ವ ಗಾಯನ, ಸಂಜೆ 6.15 ರಿಂದ ವಿದ್ವಾನ್ ಸಾಯಿ ವಿಘ್ನೇಶ್ ಅವರಿಂದ ಗಾಯನ, ಡಾ. ಜ್ಯೋತ್ಸ್ನ ಶ್ರೀಕಾಂತ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ಮೈಸೂರು ವಿಶ್ವವಿದ್ಯಾನಿಲಯ :** ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ ಸಭೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಕ್ರಾಫರ್ಡ್ ಭವನ, ಬೆಳಗ್ಗೆ 11ಕ್ಕೆ.

■ **ಎಸ್‌ಜೆಸಿಇ :** ಮೈಸೂರು ವಲಯ ಇಂಜಿನಿಯರಿಂಗ್ ಕಾಲೇಜು ಸಿಬ್ಬಂದಿ ಆಹ್ವಾನಿತ ಕ್ರಿಕೆಟ್ ಪಂದ್ಯಾವಳಿ, ಉದ್ಘಾಟನೆ : ಕುಲಪತಿ ಡಾ.ಎ.ಎನ್. ಸಂತೋಷ್‌ಕುಮಾರ್, ಉಪಸ್ಥಿತರು : ಡಾ. ಸಿ. ನಟರಾಜು, ಡಾ. ಎಸ್.ಎ. ಧನರಾಜ್, ಸ್ಥಳ: ಎಸ್‌ಜೆಸಿಇ ಆವರಣ.


■ **ಉದಯಗಿರಿ ಕನ್ನಡ ಸಂಘ, ಶ್ರೀ ಜಗನ್ನಾಥ ವಿಠ್ಠಲ ಭಜನಾ ಮಂಡಳಿ :** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರಿಗೆ ಸನ್ಮಾನ ಸಮಾರಂಭ, ಸನ್ಮಾನಿಸುವವರು : ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಹಿರಿಯ ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ, ಅಭಿನಂದನಾ ನುಡಿ : ಶ್ರೀಮತಿ ಕೆ. ಲೀಲಾಪ್ರಕಾಶ್, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಹೆಚ್.ಎನ್. ಶ್ರೀಕಂಠಯ್ಯ, ಮಾಜಿ ಉಪಮೇಯರ್ ಶ್ರೀಮತಿ ಹೆಚ್.ಎಂ. ಶಾಂತಕುಮಾರಿ, ಮುಖಂಡರಾದ ಎಂ. ಶಿವಕುಮಾರ್, ನಾರಾಯಣ್ ಲೋಲಪ್ಪ, ಸ್ಥಳ: ಶ್ರೀ ರಾಮಧಾಮ ಉದಯಗಿರಿ ವೃತ್ತದ ಹತ್ತಿರ, ಉದಯಗಿರಿ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧ– ಗ್ರಾಮೀಣ ಪರಿಸರದ ಉಪಕರಣಗಳು, ಪ್ರಸ್ತುತಿ : ಡಾ. ಎಂ.ಎನ್. ಚಿಕ್ಕಮಾದು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ– ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಆಟಿಸಂ ಜಾಗೃತಿ ದಿನಾಚರಣೆ ಸಂದರ್ಭದಲ್ಲಿ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ ಕುರಿತು ಡಾ. ಜಯಶ್ರೀ ಶಾನ್‌ಬಾಳ್ ಅವರೊಂದಿಗೆ ಮಾತುಕತೆ ಮತ್ತು ಬಿಸಿಲ ಬೇಗೆಗೆ ದೇಹದ ಆರೈಕೆ ಕುರಿತು ಡಾ. ಮಲ್ಲಿಕಾ. ಬಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಸ್ಮಿತಾ ಶ್ರೀಕಿರಣ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ– ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಸುಮಂತ್ ಮಂಜುನಾಥ್–ವೈಯೋಲಿನ್ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ– ಪ್ರಾಚ್ಯವಿದ್ಯಾ ಸಂಶೋಧನೆಯ ಮಹತ್ವ ಕುರಿತು ಮೈಸೂರು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಅಂದರೆ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಡಿ.ಪಿ. ಮಧುಸೂದನಾಚಾರ್ಯ ಅವರೊಂದಿಗೆ ಮಾತುಕತೆ. (ಭಾಗ–1), ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಬರಡು ರಾಸು ಚಿಕಿತ್ಸೆ ಈ ಕುರಿತು ಟಿ. ನರಸೀಪುರ ತಾಲ್ಲೂಕು ಕುಪ್ಯ ಗ್ರಾಮದ ಪಶು ಚಿಕಿತ್ಸಾಲಯದ ಪಶು ವೈದ್ಯಾಧಿಕಾರಿ ಡಾ. ಎಲ್. ಜನಾರ್ಧನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ– ದಿಲೀಪ್. ಎನ್.ಕೆ ಅವರಿಂದ ಸಣ್ಣ ಕಥೆ–ದೊಡ್ಡ ಸಂಪಿಗೆಯ ತಿರುವು, 8.00 ಸಂಸತ್ ಸಮೀಕ್ಷಾ, 8.15–ವಿಜ್ಞಾನ ಭಾರತೀ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್.ಶಶಾಂಕ್–ಕೊಳಲು ವಾದನ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ





ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ-573103

ಸಂ/ಜಸಾಆ/ಟೆಂಡರ್/ಅ/01/2025-26 ದಿನಾಂಕ:02.04.2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

01)ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ ಇಲ್ಲಿಗೆ 2025-26 ನೇ ಸಾಲಿನ ಆಸ್ಪತ್ರೆಯ ಪಥ್ಯಾಹಾರ ಸಾಮಗ್ರಿಗಳು ಹಾಗೂ ಉತ್ತಮ ದರ್ಜೆಯ ಬ್ರೆಡ್ ಸರಬರಾಜು ಮಾಡಲು ವಿವಿಧ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. 02)ಟೆಂಡರ್‌ನ್ನು ಸಲ್ಲಿಸುವ ದಿನಾಂಕ:02/04/2025 ರಿಂದ ದಿನಾಂಕ:02/05/2025 ರವರೆಗೆ 03)ಇ-ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02/05/2025 ರಂದು ಸಂಜೆ 05.00 ಗಂಟೆಗೆ 04)ದಿನಾಂಕ: 03/05/2025 ರಂದು ಬೆಳಿಗ್ಗೆ 11 ಗಂಟೆಗೆ ತಾಂತ್ರಿಕ ಬಿಡ್ ದಾಖಲಾತಿ ಲಕೋಟೆಯನ್ನು ತೆರೆಯಲಾಗುವುದು. 05)ದಿನಾಂಕ: 09/05/2025 ರಂದು ಬೆಳಿಗ್ಗೆ 11.00 ಗಂಟೆಗೆ ಆರ್ಥಿಕ ಬಿಡ್ ಲಕೋಟೆಯನ್ನು ತೆರೆಯಲಾಗುವುದು. 06)ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ದೂರವಾಣಿ .ಸಂ: 08174-232380 ವೆಬ್ ಸೈಟ್ ಸಂಖ್ಯೆ: https://kppp.karnataka.gov.in / ಕ್ರಸಂ.01)ವಿವರ ಪಥ್ಯಾಹಾರ ಸಾಮಗ್ರಿಗಳು ಅಂದಾಜು ಮೊತ್ತ 2300000/- ಇ.ಎಂ.ಡಿ. 57500/- 02)ಉತ್ತಮ ದರ್ಜೆಯ ಬ್ರೆಡ್ ಅಂದಾಜು ಮೊತ್ತ 300000/- ಇ.ಎಂ.ಡಿ. 7500/-

ಸಹಿ/-ಆಡಳಿತ ವೈದ್ಯಾಧಿಕಾರಿಗಳು, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ

ವಾಸಾಸಂಇ/ಹಿಸನಿ/ಹಾಸನ/04/ಕೆಎಸ್‌ಎಂಸಿಎ/2025-26







ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲೂಕು, ಜಯಪುರ ಹೋಬಳಿ, ತಳೂರು ಗ್ರಾಮದಲ್ಲಿ ವಾಸವಾಗಿರುವ ಶ್ರೀ. ಮಹದೇವ ಸ್ವಾಮಿ ಬಿನ್. ಲೇಟ್. ಮಾದಪ್ಪ ಮತ್ತು ಕುಟುಂಬ ದವರ ಒಡೆತನಕ್ಕೆ ಸೇರಿದ. ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಕೃಷಿ ಜಮೀನನ್ನು ಖರೀದಿಸುವ ಸಂಬಂಧ. ಅವರುಗಳು ಮತ್ತು ಮೈಸೂರು ಸಿಟಿ ಚಿಲ್ಲೆ ಮೊಹಲ್ಲಾ, ಶಂಕರ ಮಠ ರಸ್ತೆ, ನಂಬರ್ 67/A, ಈ ವಿಳಾಸದಲ್ಲಿ ಕಚೇರಿಯನ್ನು ಹೊಂದಿರುವ ಸಮೃದ್ಧಿ ಪ್ರಾಪರ್ಟೀಸ್, ಸಂಸ್ಥೆಯ ಪರವಾಗಿ ಡಾ. ಸರಳ ಚಂದ್ರಶೇಖರ್ ರವರು ಶುದ್ಧ ಕ್ರಯಕ್ಕೆ ಪಡೆಯುವ ಸಂಬಂಧ. ಪರಸ್ಪರ ಕ್ರಯದ ಕರಾರು ಒಪ್ಪಂದವಾಗಿರುತ್ತದೆ. ಈ ಕೆಳಗಿನ ಷೆಡ್ಯೂಲ್ ಸ್ವತ್ತುಗಳ ಸಂಬಂಧ. ಶ್ರೀ ಮಹದೇವಸ್ವಾಮಿ ಬಿನ್ ಲೇಟ್ ಮಾದಪ್ಪ ಮತ್ತು ಕುಟುಂಬದವರನ್ನು. ಹೊರತುಪಡಿಸಿ ಬೇರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕುಗಳು ಹಿತಾಸಕ್ತಿಗಳು ಅಥವಾ ಸದರಿ ಕರಾರಿನ ಸಂಬಂಧ ಯಾವುದೇ ರೀತಿಯ ತಂಟೆ ತಕರಾರುಗಳು ಇದ್ದಲ್ಲಿ, ಡಾ. ಸರಳಚಂದ್ರಶೇಖರ್ ರವರಿಗೆ ಮೊಬೈಲ್ ಸಂಖ್ಯೆ-9448047004/9986817230 ತಮ್ಮ ಕ್ಲೇಮ್‌ಗೆ ಸಂಬಂಧಿಸಿದಂತೆ ತಮ್ಮ ಬಳಿ ಇರುವ ದಾಖಲಾತಿಗಳ ಸಮೇತ ತಮ್ಮ ತಕರಾರುಗಳನ್ನು. ಈ ಸೂಚನೆ ಪ್ರಕಟಣೆಗೊಂಡ ಹತ್ತು ದಿನಗಳ ಒಳಗಾಗಿ ಸಲ್ಲಿಸುವುದು. ತಪ್ಪಿದಲ್ಲಿ ಈ ಸಂಬಂಧ ಯಾರಿಂದಲೂ ಯಾವುದೇ ರೀತಿಯ ತಂಟೆ ತಕರಾರುಗಳು ಇಲ್ಲ ವೆಂದು ಭಾವಿಸಿ, ಸದರಿ ಕರಾರಿನ ಸಂಬಂಧ. ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಜೈಪುರ ಹೋಬಳಿ ತಳೂರು ಗ್ರಾಮಕ್ಕೆ ಸೇರಿದ ಹಾಲಿ ಶ್ರೀ ಮಹದೇವಸ್ವಾಮಿ ಬಿನ್ ಲೇಟ್ ಮಾದಪ್ಪ ಮತ್ತು ಕುಟುಂಬದವರ ಒಡೆತನಕ್ಕೆ ಹಾಗೂ ಸ್ವಾಧೀನಕ್ಕೆ ಸೇರಿದ ಶುದ್ಧ ಕ್ರಯದ ಕರಾರು ಮಾಡಿಕೊಟ್ಟಿರುವ ಸ್ವತ್ತಿನ ಚಕ್ಕುಬಂದಿ:- 1. ಸರ್ವೆ ನಂ-191/8 ರಲ್ಲಿರುವ 1 ಎಕರೆ 00 ಗುಂಟೆ ಖುಷ್ಕಿ ಜಮೀನು ಪೂರ್ವಕ್ಕೆ: ಸರ್ವೆ ನಂ-189, ಸರ್ವೆ 189/1A (ಪೋಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ) ಪಶ್ಚಿಮಕ್ಕೆ: ಸರ್ವೆ ನಂ-191/7 (ವಿಶ್ವವಿದ್ಯಾನಿಲಯ ಗೃಹ ನಿರ್ಮಾಣ ಬಡಾವಣೆ), ಉತ್ತರ: ಸರ್ವೆ ನಂ - 191/2, ನಂಜಮ್ಮ C/o ಲೇ॥ ಸಿದ್ದಪ್ಪ ಇತರರು ದಕ್ಷಿಣ: ಸರ್ವೆ ನಂ 191/10 ಜಯಶೀಲಾ W/O ಮಹದೇವಸ್ವಾಮಿ, 2. ಸರ್ವೆ ನಂ-191/108 ರಲ್ಲಿರುವ 00 ಎಕರೆ 15 ಗುಂಟೆ ಖುಷ್ಕಿ ಜಮೀನು

ಪೂರ್ವಕ್ಕೆ: ಸರ್ವೆ ನಂ-189, (ಪೋಲೀಸ್ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ)

ಪಶ್ಚಿಮಕ್ಕೆ: ಸರ್ವೆ ನಂ- 191/7, ಯುನಿವರ್ಸಿಟಿ ಬಡಾವಣೆಯ ಪಾರ್ಕ್ ಮತ್ತು ರಸ್ತೆ, ಉತ್ತರ: ಸರ್ವೆ ನಂ -191/8, ಮಹದೇವಸ್ವಾಮಿ ದಕ್ಷಿಣ: ಮುರಡಗಳ್ಳಿ ಗಡಿ ಮತ್ತು ಯುನಿವರ್ಸಿಟಿ ಬಡಾವಣೆ

ಸಹಿ/- **ಡಾ. ಸರಳಚಂದ್ರಶೇಖರ್**
ವಕೀಲರು, ಹೆಚ್.ಪಿ. ಗಂಗೇಗೌಡ,
ನಂಬರ್ 02. ಸರ್ವೆ ನಂಬರ್ - 84/7,
2ನೇ ಕ್ರಾಸ್, ಕೆ.ಬಿ.ಎಲ್ ಬಡಾವಣೆ,
ಬನ್ನೂರು ರಿಂಗ್ ರಸ್ತೆ, ಆಲನಹಳ್ಳಿ ಮೈಸೂರು,
ಮೊಬೈಲ್ ಸಂಖ್ಯೆ - 8971133060.

PUBLIC NOTICE

The public at large is hereby notified that my client is intending to purchase the property more fully described in the schedule below from **Sri. R. Ramesh, Sri. R. Jagadish, Smt. Yashoda Nagaraj, Sri. Yashwanth and Smt. Rashmi K. Shetty.** If any person/s has/have any right, title, interest or claim over the schedule property, they may lodge their claim / objections with the undersigned within **TEN DAYS** from the date of this notification with supporting documents by Registered Post Acknowledgement Due failing which, my client will take it for granted that there are no claims / charges over the schedule property and he will proceed to purchase the property. Any claims/objections received after the stipulated period of ten days shall be treated as null and void.

SCHEDULE

Item No. 1

All that piece and parcel of the site and residential house property bearing No. 2937/2, D-17, Property No. 38-2-547-221, measuring 17½ Ft., x 40 Ft., situated at 4th Main, V. V. Mohalla, Mysuru bounded on the East by House No. 2912 of Seenappa West by House No. 2937 of T. Raghunath North by Common Passage and R. Nagaraj's Property, South by Conservancy Galli.

Item No. 2

All that piece and parcel of the site and residential house property 2937/2A1, D-17/A1, Property No. 38-2-547-17/A1, measuring 30 Ft., x 45 Ft., situated at 4th Main, V.V. Mohalla, Mysuru bounded on the
East by No. 2912, West by No. 2937, North by 4th Main Road, South by No. 2937/2.

Item No. 3

All that piece and parcel of the site and residential house property 2937/2A, D-17/A, Property No. 38-2-547-T54925980 54928297, measuring 173/2 Ft., x 40 Ft., situated at 4th Main, V.V. Mohalla, Mysuru bounded on the
East by House No. 2912 of Seenappa West by House No. 2937 of T. Raghunath North by Common Passage and R. Nagaraj's Property South by Conservancy Galli The above mentioned 3 items collectively measure 90 Ft x 35 Ft., including a common passage measuring 5 x 45 and 5 x 35.

Sd/- Rohit Subramanya, B.A.L, LL.M.,
Advocate, KAR 1162/11
#1230/A, CH 36/A, 2nd Cross, Behind Ramamandira, Krishnamurthypuram, Chamaraja Mohalla, Mysuru-04
Mob : 94800 04999
Date : 02.04.2025, Place : Mysore





ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ ಎಲ್ಲಿದ್ದೀರಾ?

ಗಂಡ : ಬೈಕಿನಿಂದ ಬಿದ್ದು ಬಿಟ್ಟೆ. ಹಾಸ್ಪಿಟಲ್‌ಗೆ ಹೋಗ್ತಾ ಇದ್ದೀನಿ.

ಹೆಂಡತಿ : ಹುಷಾರ್, ಲಂಚ್ ಬಾಕ್ಸ್ ಸೊಟ್ಟಗೆ ಇಡಬೇಡಿ. ಸಾಂಬಾರ್ ಚೆಲ್ಲೋಗುತ್ತೆ!

ಮೈಸೂರು ಮಿತ್ರ

ಶುಕ್ರವಾರ, 4 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಯಾರು ನಿನ್ನವರು, ಯಾವುದು ನಿನ್ನದು ಎಂಬುದು ಅರ್ಥವಾಗುವುದು ಸಮಯ ಬಂದಾಗ ಮಾತ್ರ...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲ್ಲಿ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್ ಸರಿಪಡಿಸಿ



ಮಾನ್ಯರೆ,

ರೈಲು ಪ್ರಯಾಣಿಕರು, ಹಿರಿಯ ನಾಗರಿಕರು ಹಾಗೂ ಮುಖ್ಯವಾಗಿ ವಿಕಲಚೇತನರ ಅನುಕೂಲಕ್ಕಾಗಿ ಎಸ್ಕಲೇಟರ್‌ಗಳನ್ನು ಇತ್ತೀಚೆಗೆ ಮೈಸೂರು ರೈಲು ನಿಲ್ದಾಣದಲ್ಲಿ ಅಳವಡಿಸಲಾಗಿದೆ. ಆದರೆ ಮೈಸೂರಿನ ರೈಲು ನಿಲ್ದಾಣದಲ್ಲಿರುವ ಎಸ್ಕಲೇಟರ್ ಸರಿಯಾಗಿ ಸಾರ್ವಜನಿಕರ ಉಪಯೋಗಕ್ಕೆ ಬರುತ್ತಿಲ್ಲ. ಈ ಎಸ್ಕಲೇಟರ್‌ಗಳು, ಕೆಲವು ವೇಳೆ ಕಾರ್ಯ ನಿರ್ವಹಿಸದೇ ನಿಸ್ತಂತು ಸ್ಥಿತಿಯಲ್ಲಿರುತ್ತವೆ. ಈ ಬಗ್ಗೆ ಅಲ್ಲಿನ ಸಿಬ್ಬಂದಿಯನ್ನು ವಿಚಾರಿಸಿದಾಗ ಇದರ ನಿರ್ವಹಣೆ ನೋಡಿಕೊಳ್ಳುವವರು ಕೆಲವೊಮ್ಮೆ ಈ ಎಸ್ಕಲೇಟರ್‌ಗಳಿಗೆ ಬೀಗ ಹಾಕಿಕೊಂಡು ಹೋಗುತ್ತಾರೆ. ನಾವೇನು ಮಾಡಲು ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆ ತೋರಿಸುತ್ತಾರೆ. ದಯಮಾಡಿ ಇದನ್ನು ರೈಲ್ವೆಯ ಹಿರಿಯ ಅಧಿಕಾರಿಗಳು ಗಮನಿಸಬೇಕು. ರೈಲು ನಿಲ್ದಾಣದ ಒಂದನೇ ಪ್ಲಾಟ್‌ಫಾರಂನಲ್ಲಿರುವ ಈ ಎಸ್ಕಲೇಟರ್‌ನಿಂದಲೇ ಉಳಿದೆಲ್ಲಾ ಪ್ಲಾಟ್‌ಫಾರಂಗೆ ಹೋಗಬೇಕು. ಹಿರಿಯ ನಾಗರಿಕರಿಗೆ, ವೃದ್ಧರಿಗೆ, ವಿಶೇಷ ಅಂಗವಿಕಲ ಚೇತನರಿಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸದ ಈ ಎಸ್ಕಲೇಟರ್‌ಗಳಿಂದ ರೈಲು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಹಿರಿಯ ರೈಲ್ವೇ ಅಧಿಕಾರಿಗಳು ಗಮನ ಹರಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಗ್ರಂಥಾಲಯದ ಶೌಚಾಲಯ ದುರಸ್ತಿಯಾಗಲಿ

ಮಾನ್ಯರೆ,

ಮೈಸೂರಿನ ಹೆಬ್ಬಾಳು 1ನೇ ಹಂತದಲ್ಲಿ ಸಾರ್ವಜನಿಕ ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿದ್ದು, ಈ ಗ್ರಂಥಾಲಯದಲ್ಲಿ ಉತ್ತಮ ಪುಸ್ತಕಗಳು, ನಿಯತಕಾಲಿಕೆಗಳು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಹಿರಿಯ ನಾಗರಿಕರಿಗೆ ಬೆಳಗ್ಗೆ – ಸಂಜೆ ವೇಳೆ ಲಭ್ಯವಿದೆ. ಹೀಗಾಗಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಇದರ ಉಪಯೋಗ ಪಡೆಯುತ್ತಿದ್ದಾರೆ.

ಆದರೆ, ಈ ಗ್ರಂಥಾಲಯದ ಕಟ್ಟಡದಲ್ಲಿನ ಶೌಚಾಲಯ ಕಳಪೆ ಕಾಮಗಾರಿಯಿಂದ ಚರಂಡಿಯ ಸಂಪರ್ಕದ ಪೈಪ್‌ನಿಂದ ಶೌಚಾಲಯದ ತ್ಯಾಜ್ಯ ನೀರು ಸರಿಯಾಗಿ ಹೋಗುತ್ತಿಲ್ಲ. ಇದರಿಂದ ಗ್ರಂಥಾಲಯಕ್ಕೆ ಬರುವ ಓದುಗರಿಗೆ ಶೌಚಾಲಯ ಮಲಿನತೆಯಿಂದ ಕಸಿವಿಸಿ–ಮುಜುಗರ ಉಂಟಾಗುತ್ತಿದೆ.

ಸಮಸ್ಯೆಯನ್ನು ಇಲಾಖೆಯ ಮೇಲಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಈ ಮೂಲಕ ಮನವಿ.

–ಎ.ಡಿ. ನಂಜುಂಡಸ್ವಾಮಿ, ಹೆಬ್ಬಾಳು 1ನೇ ಹಂತ, ಮೈಸೂರು.

ಶಾಲೆಯ ಸುತ್ತಮುತ್ತ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ಮೈಸೂರು ತಾಲೂಕು ವಾಜಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಭುಗತಗಳ್ಳಿ ಗ್ರಾಮದ ಡಬಲ್ ಟ್ಯಾಂಕ್ ಹತ್ತಿರದಲ್ಲಿ ಹೆಚ್ಚುವರಿಯಾಗಿ ಕಟ್ಟಿರುವ ಸರ್ಕಾರಿ ಶಾಲೆಯ ಕಾಂಪೌಂಡ್ ಆವರಣದ ಸುತ್ತಲು ಗಿಡಗಂಟಿಗಳು ಬೆಳೆದು ನಿಂತು ವಿಷಜಂತುಗಳ ವಾಸಸ್ಥಾನವಾಗಿದೆ.

ಶಾಲೆಯ ಪಕ್ಕದಲ್ಲಿ ಅಂಗನವಾಡಿ ಕಟ್ಟಡವಿದ್ದು, ಅಂಗನವಾಡಿ ಶಾಲೆಗೆ ಪುಟ್ಟ ಪುಟ್ಟ ಮಕ್ಕಳು ಬರುತ್ತಾರೆ. ಮಕ್ಕಳು ಮೂತ್ರ ವಿಸರ್ಜನೆಗೆ ಹೊರಗಡೆ ಬರುವುದರಿಂದ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲಿಸಿ ಅತೀ ತುರ್ತಾಗಿ ಶಾಲೆಯ ಆವರಣದ ಸುತ್ತಮುತ್ತಲು ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ಎಸ್. ನೀಲಿಸಿದ್ದಯ್ಯ, ಭುಗತಗಳ್ಳಿ, ಮೈಸೂರು ತಾ.

ಕೃತ್ಯವೊಂದೇ...ನಾಮ ಹಲವು!

ಮಾನ್ಯರೆ,

ಆ ಘಟನೆಯ ನಂತರ
ಮಹಿಳೆ ದೂರು ನೀಡಿದರೆ
ಅದು ಅತ್ಯಾಚಾರ!
ಪುರುಷ ದೂರು ನೀಡಿದರೆ
ಅದು ಹನಿ ಟ್ರ್ಯಾಪ್!!
ಇಬ್ಬರೂ ದೂರು ನೀಡದಿದ್ದರೆ
ಅದು ವ್ಯಭಿಚಾರ!!
ಕೃತ್ಯ ಒಂದೇ...
ಆದರೆ....
ನಾಮ ಹಲವು!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಮ್ಮ ಪ್ರಗತಿಗೆ ತೊಡಕಾಗುವವರು ನಾವೇ...!

> ಇದು ಸ್ಪರ್ಧೆಯ ಯುಗ. ಯಾರು ಹೆಚ್ಚು ತಯಾರಿ ಮಾಡಿಕೊಳ್ಳುತ್ತಾರೋ ಅವರು ಮಾತ್ರ ಗೆಲ್ಲುತ್ತಾರೆ. ಒಂದು ಸಲ ಆದ ಸೋಲು ಹಲವರಲ್ಲಿ ನಿರುತ್ಸಾಹ ಮೂಡಿಸುತ್ತದೆ. ಆದರೆ ಅದನ್ನು ಚಾಲೆಂಜ್ ಆಗಿ ತೆಗೆದುಕೊಂಡವರು ಮುಂದೆ ಸಾಧನೆ ಮಾಡಿರುವುದನ್ನು ನಾವು ಗಮನಿಸಬೇಕಾಗುತ್ತದೆ.

ನಾವು ಏನನ್ನಾದರೂ ಸಾಧಿಸಬೇಕು, ನಾಲ್ಕಾರು ಜನರು ಮೆಚ್ಚುವಂತೆ ಏನಾದರೂ ಮಾಡಬೇಕು ಎಂಬ ಆಸೆ ಎಲ್ಲರದ್ದೂ ಆಗಿರುತ್ತದೆ. ಯಾರೋ ಒಬ್ಬರು ಸಾಧನೆ ಮಾಡಿದಾಗ ನಾನೂ ಹಾಗೇ ಮಾಡಬಹುದಾಗಿತ್ತು. ಆದರೆ ಆಗಲಿಲ್ಲ, ಇದಕ್ಕೆ ನನ್ನ ಹಣೇಬರಹವೇ ಕಾರಣ ಎಂದು ಹೇಳಿಕೊಂಡು ಸಮಾಧಾನಪಟ್ಟುಕೊಳ್ಳುತ್ತೇವೆ. ಆದರೆ ಇದು ನಿಜವಲ್ಲ ಎಂಬುದು ನಮಗೆ ಗೊತ್ತಿದೆ. ಆ ರೀತಿ ಮಾಡಲಾಗದುದಕ್ಕೆ ನಿಜವಾದ ಕಾರಣ ನಾವೇ, ಹಾಗೂ ನಮ್ಮ ಸೋಮಾರಿತನವೇ ಕಾರಣ ಆಗಿರುತ್ತದೆ. ನಮ್ಮ ಪ್ರಗತಿಗೆ ನಾವೇ ಮಾರಕರಾಗುತ್ತೇವೆ.

ಒಬ್ಬ ವಿದ್ಯಾರ್ಥಿ ಚೆನ್ನಾಗಿ ಓದಿ ಉತ್ತಮ ಅಂಕ ಗಳಿಸಿದ, ಅವನು ರ್‍ಯಾಂಕ್ ಗಳಿಸಿದ ಎಂದರೆ ಅದರಲ್ಲಿ ಅವನ ತೊಡಗುವಿಕೆ ಮುಖ್ಯವಾಗಿ ಕಾರಣವಾಗಿರುತ್ತದೆ. ಅವನು ಅದಕ್ಕಾಗಿ, ಅನಾವಶ್ಯಕವಾಗಿ ಕಾಲ ಕಳೆಯಬಹುದಾಗಿದ್ದ ಸಂದರ್ಭಗಳನ್ನು ತಾನೇ ನಿವಾರಿಸಿಕೊಂಡಿರುತ್ತಾನೆ. ಅದಕ್ಕಾಗಿ ತಾನು ಮೋಜು ಮಾಡಬಹುದಾಗಿದ್ದ ಹಲವು ಸಂದರ್ಭಗಳನ್ನು ಕಳೆದುಕೊಂಡಿರುತ್ತಾನೆ. ಹಲವು ದಿನಗಳ ಸವಿ ನಿದ್ರೆಯನ್ನು ಕಳೆದುಕೊಂಡಿರುತ್ತಾನೆ. ಹಾಗೆ ಮಾಡಿದುದರಿಂದ ಅವನು ರ್‍ಯಾಂಕ್ ಗಳಿಸಲು ಕಾರಣವಾಗಿರುತ್ತದೆ. ಇದು ಮತ್ತೊಬ್ಬ ವಿದ್ಯಾರ್ಥಿಗೂ ಸಾಧ್ಯವಾಗುತ್ತದೆ. ಆದರೆ ಆತ ಈ ರೀತಿ ಸಮಯ ಹೊಂದಿಸಿಕೊಳ್ಳಲಾಗದೆ ಹಿಂದಕ್ಕೆ ಬೀಳುತ್ತಾನೆ. ತಾತ್ಕಾಲಿಕ ಸುಖ–ಸಂತೋಷಗಳನ್ನು ಅಪ್ಪಿಕೊಂಡ ಕಾರಣ ಅವನಿಗೆ ಪ್ರಗತಿ ಸಾಧ್ಯವಾಗುವುದಿಲ್ಲ.

ನಮ್ಮಲ್ಲಿ ಬಹುತೇಕರು ಹೀಗೇ ತಮ್ಮ ಪ್ರಗತಿಗೆ ತಾವೇ ತೊಡಕಾಗಿರುತ್ತಾರೆ. ಒಂದು ಗಟ್ಟಿ ಮನಸ್ಸು ಮಾಡದೇ ಹಲವು ಅವಕಾಶಗಳನ್ನು ಕಳೆದುಕೊಂಡಿರುತ್ತಾರೆ. ಇತ್ತೀಚೆಗೆ ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದವರ ಪಟ್ಟಿಯನ್ನು ಅವಲೋಕಿಸಿದರೆ, ಅದರಲ್ಲಿ ಕಡು ಬಡತನದಿಂದ ಬಂದು, ಒಂದು ಹೊತ್ತು ಊಟಕ್ಕೂ ಕಷ್ಟಪಟ್ಟವರ ಒಂದು ಪಟ್ಟಿ ಕಾಣಸಿಗುತ್ತದೆ. ಅದರಲ್ಲೂ ಗ್ರಾಮೀಣ ಭಾಗದಿಂದ ನಗರಗಳಿಗೆ ಬರುವ ಅನೇಕರು ತಾವೇ ಒಂದು ತಾತ್ಕಾಲಿಕ ಉದ್ಯೋಗ ಹುಡುಕಿಕೊಂಡು ಶ್ರಮವಹಿಸಿ, ಬಿಡುವಿನ ವೇಳೆಯನ್ನು ಸಮರ್ಪಕವಾಗಿ ಬಳಸಿಕೊಂಡು ಉನ್ನತ ಪದವಿ ಗಳಿಸಿದ್ದು ಕಂಡುಬರುತ್ತದೆ.

ಇತ್ತೀಚೆಗೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾಗ, ಕಾರ್ಯಕ್ರಮ ಮುಗಿದ ನಂತರ ಒಬ್ಬ ವಯಸ್ಸಾದ ಮಹಿಳೆಯೊಬ್ಬರು ತಾವು ತಂದಿದ್ದ ಕೈಚೀಲದಿಂದ ಒಂದು ಪುಸ್ತಕ ತೆಗೆದುಕೊಡುತ್ತಾ, ಇದು ನಾನು ಬರೆದ ಕವನ ಸಂಗ್ರಹ, ಕೆಲ ವರ್ಷಗಳ ಹಿಂದೆ ಒಂದು ಪುಸ್ತಕ ಮುದ್ರಿಸಿ, ಅದನ್ನು ಉಚಿತವಾಗಿ ಹಂಚಿದ್ದೆ, ಅದರ ಪ್ರತಿ ಇದು ಎಂದರು. ಮುಂದೆ ಇಂತಹುದನ್ನು ಬರೆಯಲಿಲ್ಲವೇ? ಎಂದರೆ ಅದೇ ಕೈಚೀಲದಿಂದ ಹತ್ತಾರು ಕೈಬರಹದ ಪುಸ್ತಕ ತೆಗೆದು ತೋರಿಸುತ್ತಾ, ಇದೆಲ್ಲವನ್ನೂ ನಾನೇ ಬರೆದಿದ್ದು ಎಂದರು. ತೆಗೆದುಕೊಂಡು ಪರಿಶೀಲಿಸಿದಾಗ ಎಲ್ಲವೂ ಉತ್ತಮವಾದ ಕವನಗಳೇ ಆಗಿದ್ದವು. ಅದರಲ್ಲಿ ಬಹುತೇಕ ಕವನಗಳು ದೇವರ ಕುರಿತಾದದ್ದು ಆಗಿತ್ತು. ಇಷ್ಟು ಚೆನ್ನಾಗಿ ಬರೆದಿದ್ದೀರಿ, ಏಕೆ ಪುಸ್ತಕ ಮಾಡಲಿಲ್ಲ ಎಂದರೆ, ನನಗೆ ಪುಸ್ತಕ ಮಾಡಿ ಹೆಸರು ಗಳಿಸಬೇಕು ಎಂಬ ಆಸೆ ಇಲ್ಲ, ನನ್ನ ಆತ್ಮತೃಪ್ತಿಗಾಗಿ ಬರೆಯುತ್ತೇನೆ ಅಷ್ಟೇ ಎಂದರು. ನಿಮಗೆ ಆರ್ಥಿಕ ಸಮಸ್ಯೆ ಇದ್ದರೆ ಹೇಗಾದರೂ ಹಣ ಹೊಂದಿಸಿ ಇದನ್ನು ಮುದ್ರಿಸೋಣವೇ? ಎಂದರೆ, ನನಗೆ ಹಣದ ಕೊರತೆ ಇಲ್ಲ, ಆದರೆ ಮುದ್ರಿಸುವುದು, ಮಾರಾಟ ಮಾಡುವುದು ಈ ವಯಸ್ಸಿನಲ್ಲಿ ಸಾಧ್ಯವಾಗುವುದಿಲ್ಲ, ಆದ್ದರಿಂದ ಹಾಗೆ ಇಟ್ಟುಕೊಂಡಿದ್ದೇನೆ ಎಂದರು. ಅವರ ಬಗ್ಗೆ ನಿಜಕ್ಕೂ ಆಶ್ಚರ್ಯ ಹಾಗೂ ಅಭಿಮಾನ ಮೂಡಿತು. ತಮಗೆ ವಯಸ್ಸಾಗಿದೆ, ನನಗೆ ಇನ್ನೇನೂ ಮಾಡಲು ಸಾಧ್ಯವಿಲ್ಲ ಎಂದು ಅವರು ಅಂದುಕೊಂಡರೆ ಅವರನ್ನು ಯಾರೂ ಆಕ್ಷೇಪ ಮಾಡುವುದಿಲ್ಲ. ಆದರೆ ಅವರ ಮನಸ್ಸು ಹಾಗಾಗಲು ಬಿಟ್ಟಿಲ್ಲ. ಈಗಲೂ ಅವರು ಏನನ್ನಾದರೂ ಬರೆಯುತ್ತಲೇ ಇರುತ್ತಾರೆ. ಇಂತಹ ನೂರಾರು ಜನರು ನಮ್ಮ ನಡುವೆ ಇರಬಹುದು. ಕೇವಲ ಒಂದೆರಡು ಪುಸ್ತಕ ಪ್ರಕಟಿಸಿ ನಾನು ಸಾಹಿತಿ ಎಂದು ಬೀಗುವವರ ನಡುವೆ ಇಂತಹವರು ಆದರ್ಶವಾಗಿ ಕಾಣುತ್ತಾರೆ. ಅಂತಹವರು ಎಲೆಮರೆ ಕಾಯಿಯಂತೆ ಕಂಡುಬರುತ್ತಾರೆ. ನನಗೆ ಪ್ರಚಾರ ಬೇಡ ಎನ್ನುವ ಇಂತಹವರು ಬರೆಯುತ್ತಲೇ ಇರುತ್ತಾರೆ. ಇದಲ್ಲದೆ ಅವರು ಪತ್ರಿಕೆಗಳಲ್ಲಿ ಬರುವ ಕೆಲವು ದೇವರ ಕುರಿತಾದ ಪುಸ್ತಕಗಳ ಬಗ್ಗೆ ವಿವರ ಹಾಗೂ ಚಿತ್ರಗಳನ್ನು ಕತ್ತರಿಸಿ ಸಂಗ್ರಹಿಸಿದ್ದಾರೆ.

ನನ್ನ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದಾಗ ಕರೆ ಮಾಡುವ ಕೆಲವರು ತಾವು ಪ್ರತಿದಿನ ಪತ್ರಿಕೆ ಓದುವುದಾಗಿಯೂ, ಅದರಲ್ಲಿಯೂ ಮುಖ್ಯವಾಗಿ ಪತ್ರಿಕೆಯಲ್ಲಿ ಬರುವ ಲೇಖನಗಳನ್ನು ಆದ್ಯತೆಯ ಮೇರೆಗೆ ಓದುವುದಾಗಿಯೂ, ಹಾಗೂ ಅವುಗಳಲ್ಲಿ ಚೆನ್ನಾಗಿದೆ ಎಂದು ಕಂಡು ಬರುವುದನ್ನು ಕತ್ತರಿಸಿ ಸಂಗ್ರಹಿಸಿ ಇಟ್ಟುಕೊಳ್ಳುವುದಾಗಿಯೂ, ನನ್ನ ನೂರಾರು ಲೇಖನಗಳನ್ನು ಈ ರೀತಿ ಸಂಗ್ರಹಿಸಿರುವುದಾಗಿಯೂ ತಿಳಿಸುತ್ತಾರೆ. ಕೆಲವರು ಲೇಖನ ಇಷ್ಟವಾಯಿತು. ಅದನ್ನು ನನ್ನ ನೂರಾರು ಸ್ನೇಹಿತರಿಗೆ ಕಳುಹಿಸಿದ್ದೇನೆ ಎನ್ನುತ್ತಾರೆ. ಮತ್ತೂ ಕೆಲವರು ಭೇಟಿಯಾದಾಗ, ನಿಮ್ಮ ಲೇಖನಗಳನ್ನು ಆಗಾಗ್ಗೆ ಓದುತ್ತೇನೆ ಎನ್ನುತ್ತಾರೆ. ಯಾವ ಲೇಖನ ಇಷ್ಟವಾಯಿತು ಎಂದರೆ, ನಾನು ಯಾವುದನ್ನೂ ಪೂರ್ತಿ ಓದುವುದಿಲ್ಲ. ಅದರಲ್ಲಿ ಬರುವ ಬಾಕ್ಸ್ ಐಟಂ ಮಾತ್ರ ಓದುತ್ತೇನೆ ಎನ್ನುತ್ತಾರೆ. ಲೇಖನವನ್ನು ಪೂರ್ತಿಯಾಗಿ ಏಕೆ ಓದುವುದಿಲ್ಲ ಎಂದರೆ, ಅಷ್ಟು ಸಮಯವಾಗುವುದಿಲ್ಲ ಎನ್ನುತ್ತಾರೆ. ನೀವು ಏನು ಕೆಲಸ ಮಾಡುತ್ತೀರಿ ಎಂದರೆ ನನಗೆ ಅಂತಹ ಕೆಲಸವೇನೂ ಇಲ್ಲ, ಸಾಕಷ್ಟು ಸಮಯ ಮಲಗಿ ಕಾಲ ಕಳೆಯುತ್ತೇನೆ ಎನ್ನುತ್ತಾರೆ.

ನಾವು ಏನನ್ನಾದರೂ ಸಾಧಿಸಬೇಕಾದರೆ ಅದಕ್ಕೆ ನಾವೇ ಸ್ವಯಂ ಪ್ರಯತ್ನ ಮಾಡಬೇಕು. ಶ್ರಮವಿಲ್ಲದೆ ಯಾವುದೂ ನಮಗೆ ಒಲಿಯುವುದಿಲ್ಲ ಎಂಬುದನ್ನು ಮನಗಾಣಬೇಕು. ಹಲವು ವರ್ಷಗಳ ಹಿಂದೆ ಒಬ್ಬರು ಸೈಕಲ್ ಸವಾರರ ಭೇಟಿಯಾಗಿತ್ತು. ಅವರು ಸೈಕಲ್ಲಿನಲ್ಲಿ ವಿಶ್ವ ಪರ್ಯಟನೆ ಮಾಡುತ್ತಿದ್ದರು. ಈಗಾಗಲೇ ಹಲವು ದೇಶಗಳನ್ನು ಸುತ್ತಿ ಬಂದಿದ್ದರು. ಆಯಾ ಊರಿಗೆ ಹೋದಾಗ ಅಲ್ಲಿನ ಗಣ್ಯರು, ದಾನಿಗಳನ್ನು ಭೇಟಿಯಾಗುವುದು, ಅವರು ಸಹಾಯ ನೀಡಿದರೆ ಅವಶ್ಯಕತೆ ಇದ್ದಷ್ಟು ಪಡೆದು ಮುಂದಿನ ಊರಿಗೆ ಹೋಗುವುದು ಅವರ ವಿಧಾನವಾಗಿತ್ತು. ಅವರಿಗೆ ಬೇರೆಬೇರೆ ಊರಿನ, ರಾಜ್ಯಗಳ, ದೇಶಗಳ ಗಣ್ಯರು ನೀಡಿದ ಶುಭಾಶಯ ಪತ್ರಗಳು ಅವರಲ್ಲಿತ್ತು. ಒಂದೆರಡು ದಿನ ಅವರು ಮೈಸೂರಿನಲ್ಲಿ ತಂಗಿದ್ದರು. ಕೆಲವು ಸಂಸ್ಥೆಗಳಿಗೆ ಅವರೊಡನೆ ಹೋಗುವಂತಾಯಿತು. ಅವರ ಸಾಹಸವನ್ನು ಅವರು ಮೆಚ್ಚಿ ಧನ ಸಹಾಯ ಮಾಡಿದ್ದಲ್ಲದೆ, ಶುಭಾಶಯ ಪತ್ರ ನೀಡುತ್ತಿದ್ದರು. ಕೊನೆಗೆ ಮೈಸೂರು ಬಿಡಬೇಕು ಎಂದಾದಾಗ ಅವರು ನೀವು ನನ್ನೊಡನೆ ಸ್ವಲ್ಪ ದೂರ ಸೈಕಲ್ಲಿನಲ್ಲಿ ಬಂದು ಕಂಪನಿ ಕೊಡಬಹುದಲ್ಲವೇ? ಎಂದರು. ಆಗಲಿ, ಎಲ್ಲಿಯವರೆಗೆ ಬರಲಿ ಎಂದರೆ ಹೀಗೆ ಬೆಂಗಳೂರಿನವರೆಗೆ ಬನ್ನಿ ಸಾಕು ಎಂದರು. ಬೆಂಗಳೂರಿಗಾ? ಎಂದು ಉದ್ಗಾರ ತೆಗೆದರೆ ನಾನು ಸಾವಿರಾರು ಕಿಲೋಮೀಟರು ಸೈಕಲ್ಲು ತುಳಿದಿದ್ದೇನೆ. ನೀವು ಬೆಂಗಳೂರಿಗೆ ಬರಲು ಹೀಗೆ ಉದ್ಗಾರ ತೆಗೆಯುತ್ತೀರಲ್ಲ ಎಂದರು. ಒಂದು ರೀತಿ ಸಂಕೋಚವಾಯಿತು, ಆದದ್ದಾಗಲಿ ಎಂದು ಅವರೊಡನೆ ಬೆಂಗಳೂರಿಗೆ ಸೈಕಲ್ಲಿನಲ್ಲಿ ಹೋಗಿ ಬಂದಿದ್ದೆ. ಅವರು ನೀಡಿದ ಉತ್ಸಾಹ ನಂತರವೂ ನಾಲ್ಕಾರು ಸಲ ಸೈಕಲ್ಲಿನಲ್ಲಿ ಬೆಂಗಳೂರಿಗೆ ಹೋಗುವಂತೆ ಮಾಡಿತ್ತು. ಇಂದಿಗೂ ಮೈಸೂರಿಂದ ಧರ್ಮಸ್ಥಳಕ್ಕೆ, ತಿರುಪತಿಗೆ ಪ್ರತಿ ವರ್ಷ ಕಾಲು ನಡಿಗೆ ಯಲ್ಲಿ ಯಾತ್ರೆ ಮಾಡುವವರನ್ನು ಕಾಣುತ್ತೇವೆ. ಅವರಿಗೆ ಅದು ಸಾಧ್ಯವಾಗುವುದಾದರೆ ನಮಗೇಕೆ ಸಾಧ್ಯವಾಗುವುದಿಲ್ಲ? ಎಂದರೆ ಮತ್ತದೇ ಉತ್ತರ ಮಾನಸಿಕತೆ. ಒಂದು ನಿರ್ಧಾರ ಮಾಡಿದಾಗ ಅದಕ್ಕೆ ತಕ್ಕಂತೆ ನಡೆಯುವವರು ಇಂತಹ ಸಾಧನೆ ಮಾಡುತ್ತಾರೆ. ಅಯ್ಯೋ ನನಗೆ ಅದು ಸಾಧ್ಯವೇ? ಎಂದು ನಾವೇ ನಮ್ಮ ಬಗ್ಗೆ ಅಪನಂಬಿಕೆ ಪಟ್ಟರೆ ಅದು ಸಾಧ್ಯವಾಗುವುದಾದರೂ ಹೇಗೆ?

ನಮ್ಮ ಹಿಂಜರಿತವೇ ನಾವು ಮುಂದುವರೆಯಲು ಅಡ್ಡಿಯಾಗುವಂತಹುದು. ಬೆಳಿಗ್ಗೆ ಬೇಗ ಎದ್ದು ವಾಕಿಂಗ್ ಮಾಡಬೇಕು ಎಂದರೆ, ಬೇಗ ಏಳುವ ಮನಸ್ಸು ಮಾಡಬೇಕು. ದೈಹಿಕವಾಗಿ ಸಶಕ್ತರಾಗಬೇಕಾದರೆ ಮೈಯನ್ನು ದಂಡಿಸಬೇಕು. ಕೆಲವು ಚಿತ್ರನಟರು ತಾವು ಒಪ್ಪಿದ ಪಾತ್ರಕ್ಕೆ ತಕ್ಕಂತಹ ಮೈಕಟ್ಟನ್ನು ಪಡೆಯಲು ಹಲವಾರು ತಿಂಗಳು ದೇಹವನ್ನು ದಂಡಿಸುತ್ತಾರೆ. ಅವರು ತಮ್ಮ ದೇಹವನ್ನು ತೆಳ್ಳಗೂ ಮಾಡಿಕೊಳ್ಳಬಲ್ಲರು, ದಷ್ಟಪುಷ್ಟವಾಗುವಂತೆಯೂ ಮಾಡಿಕೊಳ್ಳಬಲ್ಲರು. ನಾವು ತೆರೆಯ ಮೇಲೆ ಅವರ ಪಾತ್ರ ಕಂಡು ಸಂತೋಷಿಸುತ್ತೇವೆ. ಆದರೆ ಆ ರೀತಿಯ ದೈಹಿಕ ಸ್ಥಿತಿ ತಂದುಕೊಳ್ಳಲು ಅವರು ಪಟ್ಟ ಪರಿಶ್ರಮವನ್ನು ಗಮನಿಸುವುದಿಲ್ಲ.

ಇದು ಸ್ಪರ್ಧೆಯ ಯುಗ. ಯಾರು ಹೆಚ್ಚು ತಯಾರಿ ಮಾಡಿಕೊಳ್ಳುತ್ತಾರೋ ಅವರು ಮಾತ್ರ ಗೆಲ್ಲುತ್ತಾರೆ. ಒಂದು ಸಲ ಆದ ಸೋಲು ಹಲವರಲ್ಲಿ ನಿರುತ್ಸಾಹ ಮೂಡಿಸುತ್ತದೆ. ಆದರೆ ಅದನ್ನು ಚಾಲೆಂಜ್ ಆಗಿ ತೆಗೆದುಕೊಂಡವರು ಮುಂದೆ ಸಾಧನೆ ಮಾಡಿರುವುದನ್ನು ನಾವು ಗಮನಿಸಬೇಕಾಗುತ್ತದೆ.

ಒಬ್ಬರು ಒಮ್ಮೆ ನಮ್ಮ ಗ್ರಾಮದ ಮಕ್ಕಳಿಗೆ ಉದ್ಯೋಗವಿಲ್ಲದೆ ಕಷ್ಟ ಪಡುತ್ತಿದ್ದಾರೆ, ಏನಾದರೂ ಸಹಾಯ ಮಾಡಿ? ಎಂದು ಒಬ್ಬ ಅಧಿಕಾರಿಯಲ್ಲಿ ಕೇಳಿಕೊಂಡರು. ಅವರು ಹೇಳಿದ್ದು ಕಷ್ಟದ ಕೆಲಸಕೊಟ್ಟರೆ ಮಾಡುತ್ತಾರೆಯೇ? ಎಂದು. ಕೆಲಸ ಎಂದ ಮೇಲೆ ಅದು ಕಷ್ಟದ್ದೇ ಎಂಬುದು ಅವರ ಅನಿಸಿಕೆ. ಬಂದವರು ಮಕ್ಕಳು ಏನು ಮಾಡಬೇಕು? ಎಂದರೆ, ಅವರು ಹೇಳಿದ್ದು, ನಿಮ್ಮ ಊರಿನಲ್ಲಿ ಬೆಳೆಯುವ ಹೂವು, ಹಣ್ಣುಗಳನ್ನು ಏನು ಮಾಡುತ್ತೀರಿ? ಎಂದು ಕೇಳಿದರೆ, ಅದನ್ನು ಬೆಂಗಳೂರಿನ ಕೆಲವು ಗುತ್ತಿಗೆದಾರರು ಬಂದು ಒಂದಷ್ಟು ಹಣ ನೀಡಿ ಖರೀದಿಸುತ್ತಾರೆ, ಅವರಿಗೆ ಕೊಟ್ಟು ಅವರು ಕೊಟ್ಟಷ್ಟು ಹಣ ಪಡೆಯುತ್ತೇವೆ ಎಂದರು. ನೀವೇ ಏಕೆ ಅದನ್ನು ಬೆಂಗಳೂರಿನಲ್ಲಿ ಮಾರಾಟ ಮಾಡಬಾರದು ಎಂದರೆ, ನಮಗೆ ಅದು ಹೇಗೆ ಸಾಧ್ಯ. ಅದಕ್ಕೆ ಬಹಳ ಜನ ಬೇಕಾಗುತ್ತಾರೆ ಎಂದರು. ನಿಮ್ಮ ಊರಿನಲ್ಲೇ ಕೆಲಸವಿಲ್ಲದೆ ಜನ ಇದ್ದಾರೆ ಎಂದು ನೀವು ಹೇಳಿದಿರಲ್ಲವೇ? ಅವರನ್ನೇ ಇದಕ್ಕೆ ಏಕೆ ಉಪಯೋಗಿಸಿಕೊಳ್ಳಬಾರದು ಎಂದರು. ಅವರೇ ಒಂದು ಉಪಾಯವನ್ನೂ ಹೇಳಿದರು. ನಿಮ್ಮಲ್ಲಿ ಬೆಳೆವ ಹೂವನ್ನು ನೀವೇ ರಾತ್ರಿ ಬಸ್ಸಿನಲ್ಲಿ ಅಥವಾ ಯಾವುದಾದರೂ ವಾಹನದಲ್ಲಿ ಬೆಂಗಳೂರಿಗೆ ತೆಗೆದುಕೊಂಡು ಹೋಗಿ. ಅಲ್ಲಿ ಕೆಲವರನ್ನು ಹೂವು ಕಟ್ಟುವ ಕೆಲಸಕ್ಕೆ ನೇಮಕ ಮಾಡಿಕೊಳ್ಳಿ. ಅವರು ಮಧ್ಯರಾತ್ರಿ ಬರುವ ಹೂವನ್ನು ರಾತ್ರಿಯೇ ಕಟ್ಟಲಿ. ನೀವು ಕೆಲವು ಅಪಾರ್ಟ್‌ಮೆಂಟ್‌ಗಳವರೊಡನೆ ಒಂದು ಒಪ್ಪಂದ ಮಾಡಿಕೊಳ್ಳಿ. ಅವರ ಮನೆಗೆ ಪ್ರತಿದಿನ ನಸುಕಿನಲ್ಲಿ ಸೂಕ್ತ ಬೆಲೆಗೆ ಹೂವು ಸರಬರಾಜು ಮಾಡಿ. ಅವರಿಗೆ ಫ್ರೆಶ್ ಆದ ಹೂವು ಸಿಕ್ಕ ಸಂತೋಷವಾದರೆ ನಿಮ್ಮ ಹುಡುಗರಿಗೆ ಉದ್ಯೋಗ ಸಿಗುತ್ತದೆ. ಇದರಲ್ಲಿ ಪ್ರಾಮಾಣಿಕತೆ ಇದ್ದರೆ ಆ ರೀತಿ ಹೂವು ಪಡೆಯುವವರು ಮತ್ತಷ್ಟು ಜನರಿಗೆ, ಸ್ನೇಹಿತರಿಗೆ ನಿಮ್ಮ ಬಗ್ಗೆ ತಿಳಿಸುತ್ತಾರೆ. ನೀವು ಮತ್ತಷ್ಟು ಯುವಕರಿಗೆ ಕೆಲಸ ನೀಡಿ. ನಿಮಗೆ ಹೆಚ್ಚು ಹಣವೂ ಬರುತ್ತದೆ. ನಿಮ್ಮ ಯುವಕರಿಗೆ ಕೆಲಸವೂ ಸಿಗುತ್ತದೆ. ಅದೂ ಗುಲಾಮಗಿರಿಯ ಕೆಲಸವಲ್ಲ, ತಾವೇ ಮಾಲಿಕರಾಗಿ ಮಾಡಬಹುದಾದ ಕೆಲಸ. ಆದರೆ ಇಂದು ಒಂದು ದಿನಕ್ಕೆ ಸೀಮಿತವಾದುದಲ್ಲ. ನಿಯಮಿತವಾಗಿ ಮಾಡಿದರೆ ಒಂದು ಸಂಸ್ಥೆಯನ್ನೇ ಕಟ್ಟಬಹುದು ಎಂದರು. ಇಂತಹ ನೂರಾರು ಅವಕಾಶಗಳು ನಮ್ಮ ಸುತ್ತಲೇ ಇರುತ್ತವೆ. ಆದರೆ ಶ್ರಮಪಡುವ ಮನಸ್ಸಿದ್ದರೆ, ಅವು ನಮ್ಮನ್ನು ಸಾಧಕರಾಗಿ ಮಾಡುತ್ತವೆ.

ರೈಲಿನಲ್ಲಿ ಯುವತಿಯಿಂದ ಚಿನ್ನಾಭರಣ, ನಗದು ದೋಚಿದ್ದ ಆರೋಪಿಗೆ ಶಿಕ್ಷೆ

ಮೈಸೂರು, ಏ.3(ಆರ್‌ಕೆ)–ಚಲಿಸುತ್ತಿದ್ದ ರೈಲು ಬೋಗಿಯಲ್ಲಿ ಚಾಕು ತೋರಿಸಿ ಯುವತಿಯಿಂದ ಚಿನ್ನಾಭರಣ, ಮೊಬೈಲ್ ಮತ್ತು ನಗದು ದೋಚಿದ್ದ ಆರೋಪಿಗೆ ಮೈಸೂರು ನ್ಯಾಯಾಲಯವು ಜೈಲು ಶಿಕ್ಷೆ ವಿಧಿಸಿದೆ.

ನಂಜನಗೂಡು ತಾಲೂಕು, ಚಿನ್ನದಗುಡಿ ಹುಂಡಿ ಗ್ರಾಮದ ನಿವಾಸಿಯೂ ಆದ ಶಿವರಾಜು ಅಲಿಯಾಸ್ ಶಿವ ಶಿಕ್ಷೆಗೆ ಗುರಿಯಾದ ಆರೋಪಿ. 2019ರ ಆಗಸ್ಟ್ 29ರಂದು ಚಾಮರಾಜನಗರ–ಮೈಸೂರು ರೈಲಿನಲ್ಲಿ ಬದನಗುಪ್ಪೆಯಿಂದ ಮೈಸೂರಿಗೆ ಬರುತ್ತಿದ್ದ ಯುವತಿ ಬಳಿಗೆ ಇಲವಾಲದ ಉಮೇಶ್‌ನೊಂದಿಗೆ ಬಂದ ಆತ, ಚಾಕು ತೋರಿಸಿ ಬೆದರಿಸಿ ಚಿನ್ನಾಭರಣ ಹಾಗೂ 32,500 ರೂ. ನಗದು ದೋಚಿ ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರು ರೈಲ್ವೇ ಪೊಲೀಸ್ ಠಾಣೆ ಅಂದಿನ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್ ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮೈಸೂರಿನ 3ನೇ ಹೆಚ್ಚುವರಿ ಸಿ.ಜೆ. ನ್ಯಾಯಾಲಯದ ನ್ಯಾಯಾಧೀಶರಾದ ಮಂಜುಳಾ ಅವರು ವಾದ–ಪ್ರತಿವಾದ ಆಲಿಸಿದ ಬಳಿಕ, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಶಿವರಾಜು ಅಲಿಯಾಸ್ ಶಿವನಿಗೆ 3 ವರ್ಷ ಕಠಿಣ ಶಿಕ್ಷೆ ಹಾಗೂ 3000 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕ ಬಿ.ಜನಾರ್ಧನ ಅವರು ವಾದ ಮಂಡಿಸಿದ್ದರು.

ಡಿಜಿಟಲ್ ಪ್ಲಾಟ್‌ಫಾರ್ಮ್ ಕುರಿತು ಪತ್ರಕರ್ತರಿಗೆ ಕಾರ್ಯಾಗಾರ




ಮೈಸೂರಿನ ಪತ್ರಕರ್ತರಿಗೆ ಡಿಜಿಟಲ್ ವೇದಿಕೆ (ಪ್ಲಾಟ್‌ಫಾರ್ಮ್) ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಮೈಸೂರು,ಏ.3(ಆರ್‌ಕೆ)–ಮೈಸೂರಿನ ಪತ್ರಕರ್ತರಿಗೆ ಡಿಜಿಟಲ್ ವೇದಿಕೆ (ಪ್ಲಾಟ್‌ಫಾರ್ಮ್) ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಯಶಸ್ವಿಯಾಗಿರುವ ಹಿರಿಯ ಪತ್ರಕರ್ತರಾದ ಮೀಡಿಯಾ ಮಾಸ್ಟರ್ಸ್ ಸಂಸ್ಥಾಪಕ ಎಂ.ಎಸ್.ರಾಘವೇಂದ್ರ ಅವರು ವಿಷಯ ಪ್ರಸ್ತುತಪಡಿಸಿದರು. ಈ ಹಿಂದಿನ ದಿನಮಾನಗಳಲ್ಲಿ ಪತ್ರಿಕೋದ್ಯಮ, ಛಾಯಾಚಿತ್ರಗ್ರಹಣ, ವಿಜ್ಞಾನ ಮತ್ತು ತಂತ್ರಜ್ಞಾನದ ಇಂದಿನ ಕಾಲದ ಸಾಮಾಜಿಕ ಜಾಲತಾಣ, ಡಿಜಿಟಲ್ ಸುದ್ದಿಲೋಕದ ಪ್ರಭಾವ, ಯು–ಟ್ಯೂಬ್ ಚಾನೆಲ್‌ಗಳ ಮೂಲಕ ಪತ್ರಿಕೋದ್ಯಮ ಹೇಗಿರಬೇಕು, ಯು–ಟ್ಯೂಬ್ ಚಾನೆಲ್‌ಗಳಲ್ಲಿ ನೋಡುಗರು, ಓದುಗರನ್ನು ಹೇಗೆ ತಲುಪಬಹುದು ಹಾಗೂ ಆದಾಯ ಗಳಿಕೆ ಮಾರ್ಗದ ಬಗ್ಗೆಯೂ ಅವರು ಉಪಯುಕ್ತ ಮಾಹಿತಿಗಳನ್ನು ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಮಮತಾ, ಹಿರಿಯ ಪತ್ರಕರ್ತರಾದ ಅಂಶಿಪ್ರಸನ್ನಕುಮಾರ್, ಎಂ.ಆರ್.ಸತ್ಯನಾರಾಯಣ, ಸತೀಶ್, ಬಾಲಕೃಷ್ಣ ಮದ್ದೂರು, ಪಬ್ಲಿಕ್ ಟಿವಿಯ ಕೆ.ಪಿ.ನಾಗರಾಜ್, ಆರ್.ಕೃಷ್ಣ, ಟಿವಿ 9ನ ರಾಮ್ ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ನ್ಯುಮೋನಿಯಾಗೆ ತುತ್ತಾಗಿದ್ದ ಒರಾಂಗೂಟಾನ್ ಮಿನ್ನಿ ಸಾವು



ಮೈಸೂರು,ಏ.3(ಎಂಟಿವೈ)– ಮೈಸೂರಿನ ಮೃಗಾಲಯದಲ್ಲಿ ನ್ಯುಮೋನಿಯಾಗೆ ತುತ್ತಾಗಿದ್ದ ಒರಾಂಗೂಟಾನ್ 'ಮಿನ್ನಿ' ಚಿಕಿತ್ಸೆ ಫಲಕಾರಿಯಾಗದೇ ಕಳೆದ ರಾತ್ರಿ ಕೊನೆಯುಸಿರೆಳೆದಿದೆ.

ಪ್ರಾಣಿ ವಿನಿಮಯ ಯೋಜನೆಯಡಿ 2021ರಲ್ಲಿ ಮಲೇಷಿಯಾದ ಸಫಾರಿ ವಂಡರ್‌ಲ್ಯಾಂಡ್ ಮೃಗಾಲಯದಿಂದ ತರಲಾಗಿದ್ದ ಒರಾಂಗೂಟಾನ್ ಜೋಡಿಯಲ್ಲಿ 10 ವರ್ಷ 8 ತಿಂಗಳಿನ 'ಮಿನ್ನಿ' ತೀವ್ರ ಉಸಿರಾಟದ ಸಮಸ್ಯೆಯಿಂದಾಗಿ ಗಂಭೀರ ಸ್ಥಿತಿಯಲ್ಲಿತ್ತು. ಕಳೆದ ಒಂದು ವಾರದಿಂದ ಮಿನ್ನಿಗೆ ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡಲಾಗುತ್ತಿತ್ತು. ಯುಕೆ ಮತ್ತು ಮಲೇಷಿಯಾದ ತಜ್ಞ ವೈದ್ಯರ ಸಹಕಾರ ಪಡೆದು ಚಿಕಿತ್ಸೆ ಮುಂದುವರೆಸಲಾಗಿತ್ತು.

ಇಲ್ಲಿಗೆ ಬಂದ ನಂತರ 3 ಬಾರಿ ನ್ಯುಮೋನಿಯಾಗೆ ತುತ್ತಾದ ಮಿನ್ನಿ, ಈ ಬಾರಿ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಾ.27ರಿಂದ ಗಂಭೀರ ಸ್ಥಿತಿಯಲ್ಲಿದ್ದ ಮಿನ್ನಿ ಉಳಿಸಿಕೊಳ್ಳಲು ಹರಸಾಹಸ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಬಂದ ದಿನವೇ ಕೊನೆಯುಸಿರೆಳೆದ ಮಿನ್ನಿ: ಮಿನ್ನಿ ಒರಾಂಗೂಟಾನ ಜೋಡಿಯನ್ನು ಏ.2, 2021ರಂದು ಮೈಸೂರು ಮೃಗಾಲಯಕ್ಕೆ ತರಲಾಗಿತ್ತು. ಕಾಕತಾಳೀಯ ಎಂಬಂತೆ ಮೈಸೂರು ಮೃಗಾಲಯದ ಅಂಗಳಕ್ಕೆ ಕಾಲಿಟ್ಟ 4 ವರ್ಷದ ಸಂಭ್ರಮಾಚರಣೆ ದಿನವೇ ಮಿನ್ನಿ ಕೊನೆಯುಸಿರೆಳೆದಿದೆ. ಏ.2ರಂದು ರಾತ್ರಿ ಮಿನ್ನಿ ತನ್ನ ಮನೆಯಲ್ಲಿ ಮೃತಪಟ್ಟಿದೆ. ಇದು, ಇಂದು ಬೆಳಗ್ಗೆ ಪಾಲಕರ ಗಮನಕ್ಕೆ ಬಂದಿದ್ದು, ಮೃಗಾಲಯದ ಆವರಣದಲ್ಲಿರುವ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಹೆಚ್ಚಿನ ಪರೀಕ್ಷೆಗಾಗಿ ಮಿನ್ನಿಯ ಅಂಗಾಂಗದ ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ರಂಗಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ಉಚಿತ ತಪಾಸಣಾ ಶಿಬಿರ

ಮೈಸೂರು,ಏ.3–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಏ.8ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ, ಕಬೀರ್ ರಸ್ತೆ, ಮಂಡಿ ಮೊಹಲ್ಲಾದಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. ಹೆಚ್.ಎಸ್. ಬಸವರಾಜ್, ಮೊ. 94487 53597, ಎಂ.ಎನ್.ಜೈಪ್ರಕಾಶ್, ಮೊ. 99161 55453 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ
ಶುಕ್ರವಾರ 4 ಏಪ್ರಿಲ್ 2025

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಡ್ಡದಾರಿಗೆ ಕಡಿವಾಣ

ಟೋಲ್ ತಪ್ಪಿಸಿಕೊಳ್ಳಲೆತ್ನಿಸುವವರ ತಡೆಗೆ ಬೌನ್ಸರ್‌ಗಳ ನೇಮಕ



ಮೈಸೂರು, ಏ.3(ಬಿಎಲ್‌ಯು)- ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಪಾವತಿಯಿಂದ ಪಾರಾಗಲು ವಾಹನ ಚಾಲಕರು ಸರ್ವಿಸ್ ರೋಡ್ ಮತ್ತು ಎಕ್ಸ್‌ಪ್ರೆಸ್ ವೇಗೆ ಹಾವು-ಏಣಿ ಆಟವಾಡುತ್ತಿರುವುದಕ್ಕೆ ಕಡಿವಾಣ ಹಾಕಲು ಟೋಲ್ ಗುತ್ತಿಗೆ ಪಡೆದಿರುವ ಕಂಪನಿ ಬೌನ್ಸರ್‌ಗಳನ್ನು ನೇಮಕ ಮಾಡಿದೆ.

ಮೈಸೂರಿನಿಂದ ಬೆಂಗಳೂರಿಗೆ ಹೋಗುವ ವಾಹನ ಚಾಲಕರು ಎಕ್ಸ್‌ಪ್ರೆಸ್ ವೇನಲ್ಲೇ ಸಾಗುವಾಗ, ಟೋಲ್ ಶುಲ್ಕ ಪಾವತಿಯಿಂದ ತಪ್ಪಿಸಿಕೊಳ್ಳಲು ಶ್ರೀರಂಗಪಟ್ಟಣ ಬಳಿಯ ಗಣಂಗೂರು ಟೋಲ್‌ಗೆ ಮುಂಚಿತವಾಗಿ ಸರ್ವಿಸ್ ರೋಡ್‌ಗೆ ಪ್ರವೇಶ ಪಡೆಯುತ್ತಿದ್ದರು.

ವಾಹನ ಚಾಲಕರು ಚಾಪೆ ಕೆಳಗೆ ನುಸುಳಿದರೆ, ಟೋಲ್ ಗುತ್ತಿಗೆ ಪಡೆದ ಕಂಪನಿ ರಂಗೋಲಿ ಕೆಳಗೆ ನುಗ್ಗಿ ಚಾಲಾಕಿತನ ಮೆರೆದಿದೆ. ಗಣಂಗೂರು ಟೋಲ್‌ಗೆ ಮುಂಚಿತವಾಗಿ ಸರ್ವೀಸ್ ರೋಡ್‌ಗೆ ಪ್ರವೇಶ ಪಡೆಯುವ ಮಾರ್ಗದಲ್ಲಿ ಬೌನ್ಸರ್‌ಗಳನ್ನು ನಿಯೋಜಿಸಿದೆ. ಇವರು ದಿನದ 24 ಗಂಟೆ ಕಾಯುತ್ತಿದ್ದು, ಚಾಲಕರು ಅನಿವಾರ್ಯವಾಗಿ ಟೋಲ್ ಹಾದು ಹೋಗಬೇಕಾಗಿದೆ.

ಶ್ರೀರಂಗಪಟ್ಟಣದ ನಂತರ ಕೆಲವು ವಾಹನ ಸವಾರರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶ ಪಡೆದು ಬೆಂಗಳೂರಿನತ್ತ ಸಾಗುತ್ತಾರೆ. ಅದೇ ರೀತಿ ಬಿಡದಿಯ ಕುಂಬಳಗೋಡು ಟೋಲ್ ಪ್ಲಾಜಾಗೆ ಮುಂಚಿತವಾಗಿ ಸತ್ವ ಅಪಾರ್ಟ್‌ಮೆಂಟ್ ಬಳಿ ಬಲಕ್ಕೆ ತಿರುಗಿ ಸರ್ವಿಸ್ ರೋಡ್‌ನಲ್ಲಿ ಸಾಗುತ್ತಿದ್ದರು. ಇಲ್ಲಿ ಕೂಡ ಬೌನ್ಸರ್‌ಗಳ ನಿಯೋಜನೆ ಮಾಡಲಾಗಿದೆ.

ಹಾಗೆಯೇ ಬೆಂಗಳೂರಿನಿಂದ ಮೈಸೂರಿಗೆ ಬರುವ ವಾಹನ ಚಾಲಕರು ಸರ್ವಿಸ್ ರೋಡ್‌ನಲ್ಲಿ ಸಾಗಿ ಕುಂಬಳ ಗೋಡು ಪ್ಲಾಜಾ ನಂತರ ಬಿಡದಿ ಬಳಿ ಎಕ್ಸ್‌ಪ್ರೆಸ್ ವೇಗೆ ಪ್ರವೇಶ ಪಡೆಯುತ್ತಿದ್ದರು. ಈಗ ಕಂಪನಿ ಅಲ್ಲಿಯೂ ಬೌನ್ಸರ್‌ಗಳ ನಿಯೋಜನೆ ಮಾಡಿ, ಟೋಲ್ ತಪ್ಪಿಸಿಕೊಳ್ಳುವವರಿಗೆ ಪ್ರವೇಶ ಬಂದ್ ಮಾಡಿದೆ.

ಇದಲ್ಲದೆ ಸರ್ವಿಸ್ ರಸ್ತೆಯಲ್ಲೇ ಸಾಗಿ ರಾಮನಗರ, ಕೆಂಪೇಗೌಡನದೊಡ್ಡಿ, ಚನ್ನಪಟ್ಟಣ, ತಿಟ್ಟಮಾರನಹಳ್ಳಿ, ಮತ್ತಿಕೆರೆ-ಶೆಟ್ಟಿಹಳ್ಳಿ, ಮದ್ದೂರಿನ ನಿಡಘಟ್ಟ, ಮಂಡ್ಯದಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಸಾಗಿ ತೂಬಿನಕೆರೆ ಬಳಿ ಬಲಕ್ಕೆ ಸರ್ವಿಸ್ ರಸ್ತೆಗೆ ಪ್ರವೇಶ ಪಡೆದು ಟೋಲ್ ಶುಲ್ಕದಿಂದ ಪಾರಾಗುತ್ತಿದ್ದರು. ಈಗ ತೂಬಿನಕೆರೆ ಹಾಗೂ ಗಣಂಗೂರು ಟೋಲ್ ಪ್ಲಾಜಾ ಬಳಿ ಬೌನ್ಸರ್‌ಗಳನ್ನು ನಿಯೋಜನೆ ಮಾಡಲಾಗಿದ್ದು, ಅಡ್ಡದಾರಿ ಮೂಲಕ ಎಕ್ಸ್‌ಪ್ರೆಸ್ ವೇನಲ್ಲಿ ಹೋಗುವ ಮಾರ್ಗ ಮುಚ್ಚಿದೆ.

ತೂಬಿನಕೆರೆ ಬಳಿ ಇಂದು ಅಪಘಾತ ಸಂಭವಿಸಿದ ಹಿನ್ನೆಲೆಯಲ್ಲಿ ಅಡ್ಡದಾರಿಯಲ್ಲಿ ವಾಹನ ಚಾಲಕರು ಹೋಗದಂತೆ ತಡೆಯೊಡ್ಡುತ್ತಿದ್ದ ಬೌನ್ಸರ್‌ಗಳು ಇಂದು ಕಾಲ್ಕಿತ್ತಿದ್ದಾರೆ.

ಒಟ್ಟಾರೆ ಟೋಲ್ ಶುಲ್ಕದಿಂದ ತಪ್ಪಿಸಿಕೊಳ್ಳಲು ಕೆಲವು ವಾಹನ ಸವಾರರು ಕಳ್ಳ ಮಾರ್ಗ ಹಿಡಿದು ಅಪಘಾತಕ್ಕೀಡಾಗುತ್ತಿದ್ದಾರೆ. ಜೊತೆಗೆ ದರೋಡೆ, ಸುಲಿಗೆಯಂತಹ ಕೃತ್ಯಕ್ಕೂ ಒಳಗಾಗುತ್ತಿದ್ದಾರೆ. ಟೋಲ್ ಶುಲ್ಕ ದುಬಾರಿಯಾದ ಕಾರಣ ಇಂತಹ ಅಡ್ಡ ದಾರಿ ಹಿಡಿಯುತ್ತಿದ್ದಾರೆ. ಆದರೆ, ಟೋಲ್ ಶುಲ್ಕ ಉಳಿಸಲು ಹೋಗಿ ಅಪಘಾತಕ್ಕೀಡಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ರಾಜಕಾರಣಿಗಳು, ಧರ್ಮಗುರುಗಳೇ ಸೌಹಾರ್ದತೆಗೆ ಕಂಟಕವಾಗುತ್ತಿದ್ದಾರೆ...

'ಸಾಮಾಜಿಕ ಸೌಹಾರ್ದತೆ ಮತ್ತು ಸೋದರತ್ವದ ಕಡೆಗೆ' ಸೌಹಾರ್ದ ಕೂಟದಲ್ಲಿ ಕೇಳಿ ಬಂದ ಮಾತು!



ನಗರದ ಹೈವೆ ಸರ್ಕಲ್ ಸಮೀಪದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ 'ಸಾಮಾಜಿಕ ಸೌಹಾರ್ದತೆ ಮತ್ತು ಸೋದರತ್ವದ ಕಡೆಗೆ' ಪರಿಕಲ್ಪನೆಯ ಸೌಹಾರ್ದ ಕೂಟ ನಡೆಯಿತು.

ಮೈಸೂರು, ಏ.3(ಎಂಕೆ)- ರಾಜಕಾರಣಿಗಳು, ಧರ್ಮಗುರುಗಳೇ ಸೌಹಾರ್ದತೆಗೆ ಕಂಟಕವಾಗುತ್ತಿದ್ದಾರೆ... ಅಕ್ಷರವಂತರು, ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳೇ ಸೌಹಾರ್ದತೆ ಸಮಾಜಕ್ಕೆ ಬೆಂಕಿ ಹಚ್ಚುತ್ತಿದ್ದಾರೆ...!

ನಗರದ ಹೈವೆ ಸರ್ಕಲ್ ಸಮೀಪದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್ ಮೈಸೂರು ವತಿಯಿಂದ 'ಸಾಮಾಜಿಕ ಸೌಹಾರ್ದತೆ ಮತ್ತು ಸೋದರತ್ವದ ಕಡೆಗೆ' ಪರಿಕಲ್ಪನೆಯಲ್ಲಿ ಆಯೋಜಿಸಿದ್ದ ಸೌಹಾರ್ದ ಕೂಟದಲ್ಲಿ ಕೇಳಿ ಬಂದ ಮಾತುಗಳಿವು. ಸೌಹಾರ್ದ ಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಅಕ್ಷರವಂತರು ಹಾಗೂ ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳೇ ಸೌಹಾರ್ದತೆ ಸಮಾಜಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಇವತ್ತು ಇಡೀ ಸಮಾಜ ಕಲುಷಿತ ವಾತಾವರಣದತ್ತ ಸಾಗುತ್ತಿದೆ. ಸಮಾಜದಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ನಡೆದುಕೊಳ್ಳಬೇಕಾದ ವಿದ್ಯಾವಂತರು, ಅಕ್ಷರವಂತರು ಹಾಗೂ ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳೇ ಸೌಹಾರ್ದಯುತ ಸಮಾಜವನ್ನು ಹಾಳು ಮಾಡುತ್ತಿದ್ದಾರೆ ಎಂದು ವಿಷಾದಿಸಿದರು.

ನಾವುಗಳು ಸಮಾಜವನ್ನು ಅರ್ಥ ಮಾಡಿಕೊಂಡು ಪರಸ್ಪರ ಸೌಹಾರ್ದತೆ, ಭಾತೃತ್ವದ ಸಮಾಜ ನಿರ್ಮಾಣ ಮಾಡಬೇಕಿದೆ. ಈ ನಿಟ್ಟಿನಲ್ಲಿ ಇಂತಹ ಸಾಮಾಜಿಕ ಸೌಹಾರ್ದತೆ ಸಾರುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಮೊನ್ನೆಯಷ್ಟೇ ಒಬ್ಬಟ್ಟು ತಿಂದು ನಂತರದ ದಿನ ಕೋಳಿ ತಿಂದಿದ್ದೇವೆ. ಯುಗಾದಿ ಮತ್ತು ರಂಜಾನ್ ಒಂದರ ಹಿಂದೆ ಮತ್ತೊಂದು ಬಂದಿದ್ದು, ನಮ್ಮ ಮನೆಗೆ ಅವರು, ಅವರ ಮನೆಗೆ ನಾವು ಹೋಗಿದ್ದೇವೆ. ಸಮನ್ವಯದಿಂದ ಹಬ್ಬಗಳನ್ನು ಆಚರಿಸಿದ್ದೇವೆ ಎಂದು ತಿಳಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಯುಗಾದಿ ಮತ್ತು ರಂಜಾನ್ ಎರಡು ಜೊತೆ ಜೊತೆಯಾಗಿ ಬಂದಿದ್ದು, ಮನುಷ್ಯ ಬಯಸಿದ್ದನ್ನು ಭಗವಂತ ಮಾಡಿದ್ದಾನೆ. ಒಂದು ಕಡೆ ಬೇವು-ಬೆಲ್ಲ(ಕಹಿ ಮತ್ತು ಸಿಹಿ), ಮತ್ತೊಂದು ಕಡೆ ಹಸಿವಿನ ಅರಿವನ್ನು ಮೂಡಿಸುವ ರಂಜಾನ್ ಈ ವರ್ಷ ಜೊತೆಯಾಗಿ ಬಂದಿರುವುದರಲ್ಲಿ ಸಮಾಜದ ಚಿತ್ರಣ ಅಡಗಿದೆ. ಸಮಾಜದಲ್ಲಿ ಸಮನ್ವಯತೆ ಕಾಪಾಡಲು ಪ್ರತಿಯೊಂದು ವಾರ್ಡ್ ವ್ಯಾಪ್ತಿಯಲ್ಲಿಯೂ ಇಂತಹ ಸೌಹಾರ್ದ ಕೂಟಗಳು ನಡೆಯಬೇಕು. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ ಎಂಬುದು ಸಾಕಾರವಾಗಬೇಕಾದರೆ ನಮ್ಮ ಪ್ರಯತ್ನಗಳಿರಬೇಕು ಎಂದು ತಿಳಿಸಿದರು.

> “ಸೌಹಾರ್ದತೆ ಎಂಬುದು ನಮ್ಮ ಪರಂಪರೆಯಲ್ಲಿದೆ. ಇನ್ನೊಬ್ಬರ ಆರೋಗ್ಯ ಪದ್ಧತಿಯನ್ನು ಗೌರವಿಸಿದರೆ ಮಾತ್ರವೇ ಸಮಾಜದಲ್ಲಿ ಸೌಹಾರ್ದತೆಯ ವಾತಾವರಣವನ್ನು ನೋಡಲು ಸಾಧ್ಯ. ದೇಶದಲ್ಲಿ ನಡೆದ ಮೊಟ್ಟ ಮೊದಲ ಹೃದಯ ಮರುಕಸಿ(ಮರು ಜೋಡಣೆ) ಆಪರೇಷನ್ ಮಾಡಿದವರು ಡಾ.ಜೋಸ್ ಚಾಕೊ(ಕ್ರಿಶ್ಚಿಯನ್), ಆಪರೇಷನ್ ಮಾಡಿಸಿಕೊಂಡವರು ಕೇರಳದ ಸಾಫ್ಟ್‌ವೇರ್ ಇಂಜಿನಿಯರ್ ಗಿರೀಶ್(ಹಿಂದೂ) ಮತ್ತು ಆ ಹೃದಯವನ್ನು ಕೊಟ್ಟವರು ಮುಸಲ್ಮಾನ ಮೌಲ್ವಿಯಾಗಿದ್ದು, ಸೌಹಾರ್ದತೆಗೆ ಅತೀ ಉತ್ತಮ ಉದಾಹರಣೆ ಇದಾಗಿದೆ. ಅಂತಹ ಹೃದಯ ಜೋಡಣೆ ವಿಚಾರಗಳ ಮೂಲಕ ನಡೆಯಬೇಕಿದೆ.
>
> - ಬಿ.ಎಂ.ಹನೀಫ್, ಹಿರಿಯ ಪತ್ರಕರ್ತ

ಮನಸ್ಸಿನಲ್ಲಿರುವ ಕಲ್ಮಶಗಳು ದೂರಾಗಬೇಕು: ಸಮಾಜದಲ್ಲಿ ಸಹಬಾಳ್ವೆ ನೆಲೆಸಬೇಕಾದರೆ ಮನಸ್ಸುಗಳಲ್ಲಿರುವ ಕಲ್ಮಶಗಳು ದೂರಾಗಬೇಕು. ಅವರವರ ಧರ್ಮ ಆಚರಣೆ ಅವರವರಿಗೆ ಸೀಮಿತವಾಗಿದ್ದು, ಮನೆಯಿಂದ ಹೊರಗೆ ಬಂದಾಗ ಶಿಸ್ತು ಕಾಪಾಡಬೇಕಾದ ಸ್ಥಳಗಳಲ್ಲಿ ಶಿಸ್ತು ಪಾಲಿಸಲೇಬೇಕು. ಎಲ್ಲೆಲ್ಲಿ ಜೊತೆಗಿರಬೇಕಾಗುತ್ತದೆಯೋ ಅಲ್ಲೆಲ್ಲವೂ ಜೊತೆಯಾಗಿರಬೇಕು. ಜೊತೆಗೆ ಇರುವುದೇ ಶಕ್ತಿ. ಸಮಾಜವನ್ನು ಜೋಡಣೆ ಮಾಡುವ ಕೆಲಸವನ್ನು ನಾವು ನಿರಂತರವಾಗಿ ಮಾಡೋಣ. ಮುರಿಯೋರು ಎಷ್ಟೇ ಮುರಿಯುವ ಪ್ರಯತ್ನ ಮಾಡಿದರೂ ಅದಕ್ಕೂ ದೊಡ್ಡ ಮಟ್ಟದಲ್ಲಿ ಸಮಾಜವನ್ನು ಒಂದುಗೂಡಿಸುವ ಕೆಲಸವನ್ನು ಮಾಡೋಣ ಎಂದು ಕರೆ ನೀಡಿದರು.

ರಾಜಕಾರಣಿಗಳು ರಸ್ತೆ, ಚರಂಡಿ ಸರಿ ಇದೆಯಾ, ಎಲ್ಲರಿಗೂ ಶಿಕ್ಷಣ, ಅಗತ್ಯ ವಸ್ತುಗಳು ದೊರೆಯುತ್ತಿವೆಯಾ ಎಂಬುದು ಸೇರಿದಂತೆ ಅಭಿವೃದ್ಧಿ ಬಗ್ಗೆ ಮಾತನಾಡದೆ, ಧರ್ಮ ರಕ್ಷಣೆ ಬಗ್ಗೆ ಮಾತನಾಡುತ್ತಿದ್ದಾರೆ. ಹಾಗೆಯೇ ಧರ್ಮಗುರುಗಳಾದವರು ಪ್ರಪಂಚವನ್ನು ನಾವು ಎದುರಿಸಬೇಕು. ಸತ್ತ ಮೇಲೆ ಏನಾಗುತ್ತೇವೆ. ನಮ್ಮ ಮನುಷ್ಯ ಜೀವನ, ಆತ್ಮವನ್ನು ಪುನೀತಗೊಳಿಸುವುದೇಕೆ. ಸಜ್ಜನಿಕೆ, ಸನ್ನಡತೆಯೊಂದಿಗೆ ಒಳ್ಳೆಯ ನಾಗರಿಕನಾಗಿ ಬಹುಕುವುದ್ಹೇಗೆ ಎಂಬ ವಿಚಾರಗಳನ್ನು ಬಿಟ್ಟು, ನಮ್ಮ ಜಾತಿಯವನಿಗೆ ಎಂಎಲ್‌ಎ ಟಿಕೆಟ್ ಕೊಡಿ, ಮಂತ್ರಿ ಮಾಡಿ ಎನ್ನುತ್ತಿರುವುದು ದುರಂತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ಸರ್‌ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಶಾಸಕ ಕೆ.ಹರೀಶ್‌ಗೌಡ, ಡಿಎಸ್‌ಎಸ್ ಮುಖಂಡ ಬೆಟ್ಟಯ್ಯ ಕೋಟೆ, ರಂಗಕರ್ಮಿ ಸಿ.ಬಸವಲಿಂಗಯ್ಯ, ಚಿಂತಕಿ ಸವಿತಾ ಪ.ಮಲ್ಲೇಶ್, ಸಂವಿಧಾನ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್, ಕರ್ನಾಟಕ ಕಾವಲು ಪಡೆಯ ಮೋಹನ್ ಕುಮಾರ್ ಗೌಡ, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಯೋಗೀಶ್ ಉಪ್ಪಾರ, ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್‌ನ ಕಲೀಂ ಮತ್ತಿತರರು ಉಪಸ್ಥಿತರಿದ್ದರು.

ಹಾಸನ ಮಿತ್ರ

ಗ್ಯಾಸ್ ಸೋರಿಕೆಯಿಂದ ಮೂವರು ಮಹಿಳೆಯರ ಸಾವು ಪ್ರಕರಣ; ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ



ಗ್ಯಾಸ್ ಸೋರಿಕೆಯಾಗಿ ಮೃತಪಟ್ಟವರ ಮನೆಗೆ ಭೇಟಿ ನೀಡಿದ ಡಿಸಿ ಸತ್ಯಭಾಮಾ ಘಟನೆ ಕುರಿತು ಮಾಹಿತಿ ಪಡೆದರು.

ಕೊಣನೂರು: ಪಟ್ಟಣದ ಕುಂಚಿಟಿಗ ಗೌಡರ ಬೀದಿಯ ಪಟೇಲ್ ರಾಮೇಗೌಡರ ಮನೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಮೂವರು ಮೃತಪಟ್ಟಿದ್ದು, ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಸತ್ಯಭಾಮಾ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿದರು.

ಯುಗಾದಿ ಹಬ್ಬದಂದು ತಿಂಡಿ ಬೇಯಿಸುವ ವೇಳೆ ಗ್ಯಾಸ್ ಸೋರಿಕೆಯಾಗಿ ಗಂಭೀರವಾಗಿ ಗಾಯ ಗೊಂಡು, ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದ ಮೀನಾಕ್ಷಿ (55), ಮಂಗಳ (45) ಮತ್ತು ರಾಧಾ (60) ಮೂರು ದಿನಗಳಲ್ಲಿ ಕೊನೆಯುಸಿರೆಳೆದಿದ್ದರು.

ಘಟನೆಯ ವಿವರ ಪಡೆದು ಮಾತನಾಡಿದ ಜಿಲ್ಲಾಧಿಕಾರಿ ಸತ್ಯಭಾಮ, ಗ್ಯಾಸ್ ಸೋರಿಕೆಯಿಂದಾಗಿ 3 ಮಹಿಳೆಯರು ಮೃತಪಟ್ಟಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ಮೃತರ ಕುಟುಂಬಕ್ಕೆ ಮುಖ್ಯಮಂತ್ರಿಯ ಪರಿಹಾರ ನಿಧಿಯಿಂದ ಸಹಾಯ ಒದಗಿಸಿಕೊಡಲು, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತಂದು ಕ್ರಮ ಕೈಗೊಳ್ಳುತ್ತೇವೆ. ಮೃತ ಮಂಗಳಾ ಅವರ ಮಗ ಚಿರಂತ್ ಬಿ.ಎಸ್ಸಿ ವ್ಯಾಸಂಗ ಮುಗಿಸಿದ್ದು, ಉನ್ನತ ವ್ಯಾಸಂಗಕ್ಕೆ ಕಾನೂನುರೀತ್ಯ ಸಹಕಾರ ನೀಡಲಾಗುವುದು ಎಂದರು.

ತಹಶೀಲ್ದಾರ್ ಸೌಮ್ಯ, ಗ್ರೇಡ್-2 ತಹಶೀಲ್ದಾರ್ ಸಿ.ಸ್ವಾಮಿ, ಉಪ ತಹಶೀಲ್ದಾರ್ ಕುಮಾರ್, ಪಿಎಸ್‌ಐ ಗಿರೀಶ್, ಕಂದಾಯ ನಿರೀಕ್ಷಕ ಬಲರಾಮ, ಗ್ರಾಮ ಆಡಳಿತಾಧಿಕಾರಿ ಪ್ರವೀಣ್, ಯಾದವ್ ಮತ್ತು ಸ್ಥಳೀಯರು ಇದ್ದರು.

ಬಾಹುಬಲಿ ಪಾದಗಳಿಗೆ ಅಭಿಷೇಕ, ಪುಷ್ಪವೃಷ್ಟಿ



ಶ್ರವಣಬೆಳಗೊಳ: ಇಲ್ಲಿನ ವಿಂಧ್ಯಗಿರಿ ದೊಡ್ಡಬೆಟ್ಟದಲ್ಲಿ ವಿಶ್ವವಿಖ್ಯಾತ ಬಾಹುಬಲಿ ಮೂರ್ತಿಯ 1,044ನೇ ಪ್ರತಿಷ್ಠಾಪನಾ ಮಹೋತ್ಸವ ಜೈನ ಮಠದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ವೈಭವದಿಂದ ನೆರವೇರಿತು.


ಜಲ ತುಂಬಿಸಿದ ರಜತದ ಆಚಾರ್ಯ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಕಲಶ, ಬ್ರಹ್ಮದೇವರ ಕಲಶ, ಕೂಷ್ಮಾಂಡಿನಿ ದೇವಿ ಕಲಶ, ಗುಳ್ಳಕಾಯಜ್ಜಿ ಕಲಶ, ಕಾಳಲಾ ದೇವಿ ಕಲಶ, ಚಾವುಂಡ ರಾಯ ಕಲಶ, ಮಹಾಶಿಲ್ಪಿ ಕಲಶ, ಮಹಾ ಶಾಂತಿಧಾರಾ ಮತ್ತು ಚತುಷ್ಕೋನ ಕಲಶಗಳನ್ನು ಪ್ರತಿಷ್ಠಾಪಿಸಲಾಗಿತ್ತು.

ಮಹಾ ಮಂತ್ರಗಳೊಂದಿಗೆ ವಿವಿಧ ಮಂಗಲ ವಾದ್ಯಗಳು ಜಯಗಂಟೆ ಬಾರಿಸುತ್ತಿದ್ದಂತೆ ಶ್ವೇತ ಮತ್ತು ಕೇಸರಿ ವಸ್ತ್ರ ಧರಿಸಿದ ಶ್ರಾವಕ-ಶ್ರಾವಕಿಯರು, ಬಾಹುಬಲಿ ಪಾದಗಳಿಗೆ ಅಭಿಷೇಕ ನೆರವೇರಿಸಿ ಧನ್ಯತೆ ಮೆರೆದರು.

ಈಕ್ಷುರಸ, ಎಳನೀರು, ದಾಳಿಂಬೆ ಮತ್ತು ಮಾವಿನಹಣ್ಣಿ ರಸ, ಕ್ಷೀರ, ಶ್ವೇತ ಕಲ್ಕಚೂರ್ಣ, ಅರಿಶಿಣದ ಹುಡಿ, ಅರಿಶಿಣ, ಕಷಾಯ, ಸರ್ವೌಷಧಿ ಗಳಿಂದ ಅಭಿಷೇಕ ನೆರವೇರಿಸಿ ಚತುಷ್ಕೋನಗಳಿಂದ ಅಭಿಷೇಕ ಮಾಡಲಾಯಿತು. ನಂತರ ರಕ್ತಚಂದನ, ಅಷ್ಟಗಂಧ, ಕೇಸರಿ, ಶ್ರೀಗಂಧದಿಂದ ಅಭಿಷೇಕ ನೆರವೇರಿಸಿ, ವಿವಿಧ ಪುಷ್ಪಗಳಿಂದ ಪುಷ್ಪವೃಷ್ಟಿ ಮಾಡಿ ಲೋಕದ ಶಾಂತಿಗಾಗಿ ಮಹಾ ಶಾಂತಿಧಾರಾ ಮಾಡಲಾಯಿತು.

ಆಶೀರ್ವಚನ ನೀಡಿದ ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಮನುಷ್ಯ ಜನ್ಮದಲ್ಲಿ ಮಾಡಿದ ಸಾಕಷ್ಟು ಪಾಪಕರ್ಮಗಳನ್ನು ತೊಳೆಯಬೇಕಾದರೆ ಪ್ರತಿಯೊಬ್ಬರೂ ಸಹ, ದೇವ ಗುರು ಶಾಸ್ತ್ರಗಳನ್ನು ಆರಾಧಿಸಿದಾಗ ಮಾತ್ರ ಮೋಕ್ಷ ಪ್ರಾಪ್ತಿಯಾಗುತ್ತದೆ. ಪ್ರತಿಯೊಬ್ಬರೂ ಯಾವುದೇ ತರಹದ ಭೇದಭಾವ ಮಾಡದೇ ಧರ್ಮ ಮಾರ್ಗದಲ್ಲಿ ನಡೆಯಬೇಕು ಎಂದರು.

ಹಾಲಿನ ದರ ಹೆಚ್ಚಳದಿಂದ ಹಾಸನ ಹಾಲು ಒಕ್ಕೂಟಕ್ಕೆ 9 ಕೋಟಿ ನಷ್ಟ



ಹಾಸನ: ಹಾಲಿನ ಖರೀದಿ ದರವನ್ನು 4 ರೂ. ಹೆಚ್ಚಿಸುವುದರಿಂದ ಹಾಸನ ಹಾಲು ಒಕ್ಕೂಟಕ್ಕೆ ನಿತ್ಯ 36 ಲಕ್ಷದಂತೆ ತಿಂಗಳಿಗೆ 9 ಕೋಟಿ ನಷ್ಟ ಉಂಟಾಗಲಿದೆ ಎಂದು ಹಾಸನ ಹಾಲು ಒಕ್ಕೂಟದ ಅಧ್ಯಕ್ಷ, ಶಾಸಕ ಎಚ್.ಡಿ.ರೇವಣ್ಣ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟಕ್ಕೆ ಆಗುವ ನಷ್ಟದ ಕುರಿತು ಮುಖ್ಯಮಂತ್ರಿ, ಸರ್ಕಾರದ ಕಾರ್ಯದರ್ಶಿ, ಸಚಿವರು ಹಾಗೂ ಕೆಎಂಎಫ್‌ಗೆ 2 ಬಾರಿ ಪತ್ರ ಬರೆದಿದ್ದೆ. ಆದರೂ ದರ ಹೆಚ್ಚಿಸಲಾಗಿದೆ. ಒಕ್ಕೂಟ ನಷ್ಟ ಅನುಭವಿಸಿದರೆ, ಅದಕ್ಕೆ ಸರ್ಕಾರ, ಕೆಎಂಎಫ್ ನೇರ ಹೊಣೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ದರ ಹೆಚ್ಚಿಸುವಂತೆ ಒಕ್ಕೂಟಕ್ಕೆ ಪತ್ರ ಬಂದಿದ್ದು, ಮುಖ್ಯಮಂತ್ರಿ ಆದೇಶವನ್ನು ನಾವು ಪಾಲಿಸಬೇಕಾಗುತ್ತದೆ ಎಂದರು.

ಡಿಸಿಪಿಯಾಗಿ ಸುಂದರರಾಜ್ ಅಧಿಕಾರ ಸ್ವೀಕಾರ



ಮೈಸೂರು, ಏ.3(ಆರ್‌ಕೆ)-ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿಯಾಗಿ ಸುಂದರ ರಾಜ್ ಅವರು ಇಂದು ಬೆಳಗ್ಗೆ ಅಧಿಕಾರ ವಹಿಸಿಕೊಂಡರು. ಈ ಸಂದರ್ಭ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ನಗರ ಪೊಲೀಸ್ ಕಮಿಷ್ನರ್ ಮಾರ್ಗದರ್ಶನದಲ್ಲಿ ಅಧೀನಾಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಇಲ್ಲಿನ ಅಪರಾಧ ತಡೆ ಮತ್ತು ಪತ್ತೆ ಕಾರ್ಯ ಹಾಗೂ ಸುಗಮ ಸಂಚಾರ ವ್ಯವಸ್ಥೆ ಬಲಪಡಿಸಲು ಯತ್ನಿಸುತ್ತೇನೆ ಎಂದರು.

ಎಲ್ಲಾ ಠಾಣೆಗಳ ಅಪರಾಧ ಪ್ರಕರಣಗಳ ಸ್ಥಿತಿಗತಿ ತಿಳಿದುಕೊಂಡು ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ಆದ್ಯತೆ ನೀಡಿ, ಮೈಸೂರು ನಗರದಲ್ಲಿ ಅಪರಾಧ ಕೃತ್ಯಗಳಾಗದಂತೆ ಮುಂಜಾಗ್ರತಾ ಕ್ರಮ ವಹಿಸುವುದಾಗಿಯೂ ತಿಳಿಸಿದರು.

ವಿಜ್ಞಾನ ತಂತ್ರಜ್ಞಾನದ ಹೊಸ ಸಂಗತಿಗಳನ್ನು ವಿದ್ಯಾರ್ಥಿಗಳು ಅರಿಯಬೇಕು

ಕೊಡಗು ವಿವಿ ಕುಲಪತಿ ಪ್ರೊ.ಅಶೋಕ್ ಎಸ್.ಆಲೂರ್ ಸಲಹೆ



ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ 32 ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಗುರುವಾರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮೈಸೂರು, ಏ.3(ಬಿಎಲ್‌ಯು)- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ಷಿಪ್ರ ಕ್ರಾಂತಿಗಳಾಗುತ್ತಿದ್ದು, ಇದರ ಹೊಸ ಸಂಗತಿಗಳನ್ನು ವಿದ್ಯಾರ್ಥಿಗಳು ಓದಿಕೊಳ್ಳಬೇಕು ಎಂದು ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಅಶೋಕ್ ಎಸ್.ಆಲೂರ್ ಸಲಹೆ ನೀಡಿದರು.

ನಗರದ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ 32 ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಇಂದು ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ತಂತ್ರಜ್ಞಾನದ ಬಗ್ಗೆ ತಾವು ಕಲಿತುಕೊಂಡ ಹೊಸ ಸಂಗತಿಗಳನ್ನು ಸಹದ್ಯೋಗಿಗಳೊಂದಿಗೆ ಹಂಚಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳಿಗೆ ಪದವಿ ಭವಿಷ್ಯದ ಅಡಿಪಾಯವಾಗಿದೆ. ಈ ಹಿನ್ನೆಲೆ ವಿದ್ಯಾರ್ಜನೆಯನ್ನು ಗಂಭೀರವಾಗಿ ಪರಿಗಣಿಸಿ ಉನ್ನತ ಶಿಕ್ಷಣ ಪಡೆಯಬೇಕು. ಈ ಮೂಲಕ ಸಮಾಜ ಸುಧಾರಣೆಯಲ್ಲಿ ಭಾಗಿಯಾಗಬೇಕು. ಧನಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಆರ್.ದಿನೇಶ್, ಕಾಲೇಜಿನ ಪ್ರಿನ್ಸಿಪಾಲ್ ಹನುಮಂತಾಚಾರ್ ಜೋಶಿ, ಮೈಸೂರಿನ ಜಯದೇವ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್.ಸದಾನಂದ, ವಿಶ್ರಾಂತ ಕುಲಪತಿ ಪ್ರೊ.ಟಿ.ಕೆ.ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅತ್ಯಾಚಾರ ಪ್ರಕರಣ

ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಮತ್ತೆ ಶಾಕ್

ಬೆಂಗಳೂರು, ಏ.3- ಅತ್ಯಾಚಾರ ಪ್ರಕರಣದಲ್ಲಿ ಜೈಲು ಪಾಲಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಕೋರ್ಟ್ ಶಾಕ್ ನೀಡಿದೆ. ಅತ್ಯಾಚಾರ ಪ್ರಕರಣದಿಂದ ಕೈಬಿಡುವಂತೆ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವಜಾಗೊಳಿಸಿದೆ. ಅಲ್ಲದೆ ಅತ್ಯಾಚಾರ ಪ್ರಕರಣದ ವಿಚಾರಣೆಯನ್ನು ಏ.9ಕ್ಕೆ ಮುಂದೂಡಿದೆ. ಕೆ.ಆರ್.ನಗರ ಸಂತ್ರಸ್ತ ಮಹಿಳೆ ಅತ್ಯಾಚಾರ ಪ್ರಕರಣದಲ್ಲಿ ತನ್ನ ಪಾತ್ರ ಇಲ್ಲ. ಆದ್ದರಿಂದ ಪ್ರಕರಣದಿಂದ ತನ್ನನ್ನು ಕೈಬಿಡುವಂತೆ ಪ್ರಜ್ವಲ್ ರೇವಣ್ಣ ಪರ ವಕೀಲರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಚಲುವನಾರಾಯಣಸ್ವಾಮಿ, ಮಹಾಲಕ್ಷ್ಮಿ ಕಲ್ಯಾಣ ನಾಯಕಿ ಅಮ್ಮನವರ ಕಲ್ಯಾಣಕ್ಕೆ ವರ್ಷಧಾರೆ ಮುನ್ನುಡಿ



ಚಲುವನಾರಾಯಣಸ್ವಾಮಿ ಹಾಗೂ ಮಹಾಲಕ್ಷ್ಮಿ ಕಲ್ಯಾಣ ನಾಯಕಿ ಅಮ್ಮನವರ ಕಲ್ಯಾಣೋತ್ಸವ ಗುರುವಾರ ವೈಭವದಿಂದ ನಡೆಯಿತು.

ಮೇಲುಕೋಟೆ: ಕಲ್ಯಾಣೋತ್ಸವಕ್ಕೆ ವರ್ಷಧಾರೆ ಮುನ್ನುಡಿ ಬರೆಯಿತು. ಕಲ್ಯಾಣಿ ಸಮುಚ್ಚಯದ ಧಾರಾಮಂಟಪದಲ್ಲಿ ಚಲುವನಾರಾಯಣಸ್ವಾಮಿ ಹಾಗೂ ಮಹಾಲಕ್ಷ್ಮಿ ಕಲ್ಯಾಣನಾಯಕಿ ಅಮ್ಮನವರ ಕಲ್ಯಾಣೋತ್ಸವ ಗುರುವಾರ ವೈಭವದಿಂದ ನಡೆಯಿತು.

ವರ್ಷಕ್ಕೆ ಒಮ್ಮೆ ಮಾತ್ರ ವೈರಮುಡಿ ಬ್ರಹ್ಮೋತ್ಸವ ವೇಳೆ ಧಾರಾ ಮಂಟಪದಲ್ಲಿ ನಡೆಯುವ ಕಲ್ಯಾಣೋತ್ಸವದ ವೈಭವವನ್ನು ಕಣ್ತುಂಬಿಕೊಳ್ಳಲು ಆಂಧ್ರ ಮತ್ತು ತಮಿಳುನಾಡಿನಿಂದ ನೂರಾರು ಭಕ್ತರು ಆಗಮಿಸಿದ್ದರು. ಧಾರಾ ಮಹೋತ್ಸವದ ಅಂಗವಾಗಿ ಇಡೀ ಧಾರಾಮಂಟಪವನ್ನು ಪುಷ್ಪಾಲಂಕಾರ ಮಾಡಿ ತಳಿರುತೋರಣಗಳಿಂದ ಸಿಂಗಾರ ಮಾಡಲಾಗಿತ್ತು.

ಕಲ್ಯಾಣನಾಯಕಿ ಅಮ್ಮನವರಿಗೆ ಸಂಜೆ 5.30 ಗಂಟೆಯ ವೇಳೆಗೆ ಕಲ್ಯಾಣಿಗೆ ಉತ್ಸವ ನೆರವೇರಿಸಲಾಯಿತು. ಸಂಜೆ 6 ಗಂಟೆಯ ವೇಳೆಗೆ ದೇವ ಸೇನಾಧಿಪತಿ ವಿಶ್ವಕ್ಸೇನರ ಉತ್ಸವ ನೆರವೇರಿಸಿ ಕಲ್ಯಾಣೋತ್ಸವ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಪ್ರಾರ್ಥಿಸಲಾಯಿತು. ನಂತರ ನವವಧುವಿನಂತೆ ಬಂಗಾರದ ಪ್ರಭಾವಳಿಯೊಂದಿಗೆ ಸಿಂಗಾರಗೊಂಡ ಶ್ರೀ ಚೆಲುವನಾರಾಯಣಸ್ವಾಮಿಯ ಭವ್ಯ ಉತ್ಸವ 6.30 ಗಂಟೆಯ ವೇಳೆಗೆ ಧಾರಾಮಂಟಪಕ್ಕೆ ತಲುಪಿದ ನಂತರ ಅಲ್ಲಿ ಕಲ್ಯಾಣನಾಯಕಿ ಅಮ್ಮನವರು ಹಾಗೂ ಚೆಲುವನಾರಾಯಣಸ್ವಾಮಿಗೆ ಸಮನ್ಮಾಲೆ ಹಾಕಲಾಯಿತು. ಲಾಜಹೋಮ ಹಾಗೂ ಮದುವೆಯ ಎಲ್ಲಾ ಶಾಸ್ತ್ರಗಳನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ, ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಪಾರುಪತ್ತೇಗಾರ್ ಪಾರ್ಥ ಸಾರಥಿ ಉತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಶ್ರಮಿಸಿದರು.

ಕೋರಂ ಅಭಾವದಿಂದ ಚುನಾವಣೆ ಮುಂದೂಡಿಕೆ

ಕೆ.ಆರ್.ಪೇಟೆ: ತಾಲೂಕಿನ ಸಿಂಧುಘಟ್ಟ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಕೋರಂ ಅಭಾವ ಉಂಟಾದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಆಶಾ, ಚುನಾವಣೆಯನ್ನು ಮುಂದೂಡಿದರು.

ಅಧ್ಯಕ್ಷ ಸ್ಥಾನ ಬಯಸಿ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಹೇಮಂತ್ ಕುಮಾರ್, ಉಪಾಧ್ಯಕ್ಷ ಸ್ಥಾನ ಬಯಸಿ ಮೈತ್ರಿ ಪಕ್ಷದ ಎಸ್.ಎಂ.ರವಿ ನಾಮಪತ್ರ ಸಲ್ಲಿಸಿದ್ದರು. ಅದೇ ರೀತಿ ಕಾಂಗ್ರೆಸ್–ರೈತ ಸಂಘದ ಮೈತ್ರಿ ಅಭ್ಯರ್ಥಿಯಾಗಿ ಮೋಹನ್ ಅಧ್ಯಕ್ಷ ಸ್ಥಾನಕ್ಕೆ, ಅನುಸೂಯ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಅಂತಿಮವಾಗಿ ಏ.3ರಂದು ಮಧ್ಯಾಹ್ನ 12 ಗಂಟೆಗೆ ಮತದಾನಕ್ಕೆ ಸಂಘದ ಮೀಟಿಂಗ್ ಹಾಲ್‌ನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿತ್ತು ಚುನಾವಣಾ ಪ್ರಕ್ರಿಯೆಗೆ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷ ಬೆಂಬಲಿತ ನಿರ್ದೇಶಕರಾದ ಹೇಮಂತಕುಮಾರ್, ಎಸ್.ಎಂ.ರವಿ, ಎಸ್.ಮೋಹನ್, ಕೃಷ್ಣೇಗೌಡ, ಲೋಕೇಶ್, ಹಾಗೂ ಶೋಭ ಹಾಜರಾಗಿದ್ದರು. ಆದರೆ ಕಾಂಗ್ರೆಸ್–ರೈತ ಸಂಘದ ಐವರು ನಿರ್ದೇಶಕರ ಪೈಕಿ ಯಾವುದೇ ಯಾರೊಬ್ಬರೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಗೈರು ಹಾಜರಾದ ಹಿನ್ನೆಲೆಯಲ್ಲಿ ಕೋರಂ ಅಭಾವ ಸೃಷ್ಟಿಯಾಯಿತು. ಆಗ ಅನಿವಾರ್ಯವಾಗಿ ಚುನಾವಣಾಧಿಕಾರಿ ಚುನಾವಣೆಯನ್ನು ಮುಂದೂಡಿದರು.

ಮಲ್ಲಿಗೆರೆ ಡೇರಿ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷರಾಗಿ ರಾಜೇಗೌಡ, ಉಪಾಧ್ಯಕ್ಷರಾಗಿ ಅನಿತಾ ಆಯ್ಕೆ



ಮಲ್ಲಿಗೆರೆ ಡೇರಿಯ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಪಾಂಡವಪುರ: ತಾಲೂಕಿನ ಮಲ್ಲಿಗೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಎಂ.ಬಿ.ರಾಜೇಗೌಡ ಅಧ್ಯಕ್ಷರಾಗಿ, ಎಂ.ಆರ್.ಅನಿತಾ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ನೂತನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 10 ಕ್ಷೇತ್ರದಲ್ಲೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಅದರಂತೆ ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಬಿ.ರಾಜೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಆರ್.ಅನಿತಾ ನಾಮಪತ್ರ ಸಲ್ಲಿಸಿದ್ದರು. ಇವರಿಬ್ಬರನ್ನು ಹೊರತುಪಡಿಸಿ ಯಾರೂ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಎಂ.ಬಿ.ರಾಜೇಗೌಡ, ಉಪಾಧ್ಯಕ್ಷರಾಗಿ ಎಂ.ಆರ್.ಅನಿತಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆರ್.ನಿರ್ಮಲ ಘೋಷಿಸಿದರು.

ಸಂದರ್ಭದಲ್ಲಿ ನಿರ್ದೇಶಕರಾದ ಎಂ.ಎಸ್.ದೇವರಾಜು, ಎಂ.ಡಿ.ಹಲಗೇಗೌಡ, ಎಂ.ಬಿ.ಅಶೋಕ, ಎಸ್.ಎನ್.ರಘು, ಎ.ಎಸ್.ವಿನುತಾ, ಎಂ.ಕೆ.ಮಹೇಶ್, ಮಹೇಂದ್ರಚಾರಿ, ಪುಟ್ಟರಾಮೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಎಂ.ಸಿ.ಯಶವಂತ್ ಕುಮಾರ್, ಎಂ.ಎಸ್.ಜಗದೀಶ್, ಎಂ.ಆರ್.ಸೋಮಶೇಖರ್, ಎಂ.ಬಿ.ಸುರೇಶ್, ಎಂ.ಆರ್.ಪ್ರಶಾಂತ್, ಎಂ.ಎಸ್.ನಾಗರಾಜು, ರಾಮಕೃಷ್ಣೇಗೌಡ, ಉಮೇಶ್‌ಶೆಟ್ಟಿ, ಎಂ.ಕೆ.ರಾಜೇಶ್, ಎಂ.ಎಸ್.ನಾಗರಾಜು, ಎಂ.ಎಸ್.ಕುಮಾರ್, ಎಂ.ಕೆ.ರಮೇಶ್, ಎಸ್.ರವಿ, ಎಂ.ಎನ್.ಚಂದ್ರೇಗೌಡ, ಎಂ.ಡಿ.ಧನ್ಯಕುಮಾರ್, ಪ್ರಸನ್ನ, ಕಾರ್ಯದರ್ಶಿ ರಂಜಿತ್ ಹಾಜರಿದ್ದರು.

ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಜಾನಪದ ಜಾತ್ರೆ ಆಚರಿಸಬೇಕು



ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ (ಸ್ವಾಯತ್ತ) ಹಮ್ಮಿಕೊಳ್ಳಲಾಗಿದ್ದ ಜಾನಪದ ಜಾತ್ರೆ–2025 ಕಾರ್ಯಕ್ರಮವನ್ನು ಶಾಸಕ ರವಿ ಗಣಿಗ ನಗಾರಿ ಭಾರಿಸುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಾನಪದ ಸೊಬಗು ಸಾರ್ವಜನಿಕರ ಮನಸೂರೆಗೊಂಡಿತು.

ಮಂಡ್ಯ,ಏ.3– ಜಾನಪದ ಕಲೆ ನಶಿಸಿ ಹೋಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಜಾನಪದ ಜಾತ್ರೆಯನ್ನು ಅದ್ಧೂರಿಯಾಗಿ ಆಚರಿಸಬೇಕು ಎಂದು ಶಾಸಕ ಪಿ.ರವಿಕುಮಾರ್ ಗಣಿಗ ಹೇಳಿದರು.

ಗುರುವಾರ ನಗರದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ (ಸ್ವಾಯತ್ತ) ಹಮ್ಮಿಕೊಳ್ಳಲಾಗಿದ್ದ ಜಾನಪದ ಜಾತ್ರೆ–2025 ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನದ ಪ್ರಭಾವಕ್ಕೊಳಗಾಗಿ ಅನೇಕ ಜಾನಪದ ಆಟ, ಸಂಸ್ಕೃತಿ, ಕಲೆಗಳು ಅವನತಿ ಅಂಚಿನಲ್ಲಿ ನಿಂತಿರುವುದು ದುಃಖಕರ ವಿಷಯ ಎಂದು ವಿಷಾದ ವ್ಯಕ್ತಪಡಿಸಿದರು. ಮುಖ್ಯಮಂತ್ರಿಗಳು ವಿಶೇಷ ಮುತುವರ್ಜಿ ವಹಿಸಿ ಜಾನಪದ ಸಂಸ್ಕೃತಿ ಕಲೆಯನ್ನು ಉಳಿಸುವ ಸಲುವಾಗಿ ಸದರಿ ವರ್ಷದಿಂದ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಜಾನಪದ ಜಾತ್ರೆ ಆಚರಿಸುವಂತೆ ಸೂಚನೆ ನೀಡಿದ್ದಾರೆ, ಆದರಲ್ಲೂ ನಮ್ಮ ಜಿಲ್ಲೆಯ ಮಹಿಳಾ ಕಾಲೇಜಿನಲ್ಲಿ ದಶಕಗಳ ಹಿಂದಿನಿಂದಲೂ ಜಾನಪದ ಜಾತ್ರೆ ಆಚರಿಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದರು.

ಮಂಡ್ಯ ವಿಶ್ವವಿದ್ಯಾನಿಲಯವನ್ನು ಉಳಿಸಲು ಮುಂಬರುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಸಾಂಸ್ಕೃತಿಕ ಜಾತ್ರೆ ಆಯೋಜಿಸಿ ಸರ್ಕಾರದ ಗಮನ ಸೆಳೆಯೋಣ, ಎಲ್ಲಾ ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸಿ, ಮಂಡ್ಯ ವಿಶ್ವವಿದ್ಯಾನಿಲಯವನ್ನು ಉಳಿಸಿ ಅದಕ್ಕೆ ಮೆರುಗು ನೀಡಬೇಕೆಂದು ಕರೆ ನೀಡಿದರು.

ರಂಗಕರ್ಮಿಗಳು, ಜನಪದ ಗಾಯಕರು ಹಾಗೂ ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್.ಹೆಚ್ ಮಾತನಾಡಿ, ಮಂಡ್ಯ ಜಿಲ್ಲೆ ಜಾನಪದದ ತವರೂರು, ಕಲಾವಿದರು ಒಂದಾಗಿ ಉತ್ಸವ, ಜಾತ್ರೆಗಳಲ್ಲಿ ಸಾಂಸ್ಕೃತಿಕವಾಗಿ ಸಮನ್ವಯ ಸಾಧಿಸಲು ಜಾನಪದ ಜಾತ್ರೆ ಸಹಾಯ ಮಾಡುತ್ತದೆ ಎಂದರು.

ತಾಯ್ತನದ ತತ್ವವನ್ನು ಎಲ್ಲರಲ್ಲೂ ಬಿತ್ತುವ ಕೆಲಸ ಜಾನಪದ ಮಾಡುತ್ತಿದೆ, ನಮ್ಮ ಗೂಡು ಬಿಟ್ಟು ಹೊರಗಿನ ಪ್ರಪಂಚದೊಂದಿಗೆ ಸಂಪರ್ಕ ಬೆಳೆಸಿಕೊಳ್ಳಿ, ಆಗ ಜ್ಞಾನ ಬುದ್ಧಿಶಕ್ತಿ, ಆತ್ಮಬಲ ಹೆಚ್ಚಾಗುವುದು. ಪ್ರಸ್ತುತ ಸನ್ನಿವೇಶದಲ್ಲಿ ಗುದ್ದಲಿ, ಪಿಕಾಸಿ, ಎತ್ತಿನ ಗಾಡಿಯನ್ನು ಹಳ್ಳಿಯಲ್ಲೇ ಹುಡುಕುವುದು ಕಷ್ಟವಾಗುವಂತಹ ಸಂದರ್ಭದಲ್ಲಿ ನಾವಿರುವುದು ವಿಪರ್ಯಾಸ ಎಂದು ಹೇಳಿದರು.

ಜಾನಪದ ಜಾತ್ರೆಯ ಮೆರವಣಿಗೆ: ನಗರದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ (ಸ್ವಾಯತ್ತ) ಆಯೋಜಿಸಲಾಗಿದ್ದ ಜಾನಪದ ಜಾತ್ರೆ–2025 ಕಾರ್ಯಕ್ರಮದಲ್ಲಿ ವಿವಿಧ ಬಗೆಯ ಜಾನಪದ ಕಲಾ ಪ್ರಕಾರಗಳನ್ನು ಕಾಲೇಜಿನ ವಿದ್ಯಾರ್ಥಿನಿಯರು ಮೆರವಣಿಗೆಯಲ್ಲಿ ಪ್ರದರ್ಶಿಸಿದರು, ಮಂಡ್ಯ ವಿಧಾನಸಭಾ ಶಾಸಕ ಪಿ.ರವಿಕುಮಾರ್ ಅವರು ಡೊಳ್ಳು ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮಹಿಳಾ ಕಾಲೇಜಿನ ಆವರಣದಿಂದ ವನರಂಗದವರೆಗೆ ಎತ್ತಿನಗಾಡಿ ಮೇಲೆ ಶಾಸಕ ಪಿ.ರವಿಕುಮಾರ್ ಅವರು ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆಯಲ್ಲಿ ಪೂರ್ಣಕುಂಭ ಹೊತ್ತು ವಿದ್ಯಾರ್ಥಿನಿಯರು, ಡೊಳ್ಳು ಕುಣಿತ, ಕಂಸಾಳೆ, ಪಟ್ಟ ಕುಣಿತ, ವೀರಗಾಸೆ, ಪೂಜಾ ಕುಣಿತ, ಯಕ್ಷಗಾನ, ರಂಗ ಕುಣಿತ, ಬೊಂಬೆ ಕುಣಿತ ಸೇರಿದಂತೆ ವಿವಿಧ ತಂಡಗಳು ಸಮೂಹ ಮೆರವಣಿಗೆಯಲ್ಲಿ ಸಾಗಿತು.

ಕಾರ್ಯಕ್ರಮದಲ್ಲಿ ಮೂಡಾ ಅಧ್ಯಕ್ಷ ನಹೀಮ್, ಮಹಿಳಾ ಸರ್ಕಾರಿ ಕಾಲೇಜಿನ ಪ್ರಾಂಶುಪಾಲ ಡಾ.ಗುರುರಾಜ್ ಪ್ರಭು, ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಡಾ.ನಿಂಗರಾಜು, ಸಾಂಸ್ಕೃತಿಕ ವೇದಿಕೆಯ ಖಜಾಂಚಿ ಡಾ.ಮಂಗಳಮ್ಮ, ಮಹಿಳಾ ಸರ್ಕಾರಿ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕರಾದ ರವಿಕಿರಣ್, ಹೇಮಲತಾ, ಆನಂದ್, ಪ್ರತಾಪ್ ಇನ್ನಿತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ: ಲಿಂಕ್‌ಲೈನ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಏ.5 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಮಂಜುನಾಥನಗರ, ಬೀಡಿ ಕಾಲೋನಿ, ವಿನಾಯಕನಂದ ಬಡಾವಣೆ, ಕಾರೆಮನೆ ಗೇಟ್, ಕೆಹೆಚ್‌ಬಿ ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೆ.ಆರ್.ಪೇಟೆ ಬಳಿ ವಿದ್ಯುತ್ ಸ್ಪರ್ಶದಿಂದ ವ್ಯಕ್ತಿ ಸಾವು




ಕೆ.ಆರ್.ಪೇಟೆ: ಕೆ.ಆರ್.ಪೇಟೆ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಅವರ ಡ್ರೈವರ್ ವಾಟಾಳ್ ನಾಗರಾಜು ಅವರ ತಂದೆ ಬಣ್ಣೇನಹಳ್ಳಿ ಗ್ರಾಮದ ನಿವಾಸಿ ಶಿವರಾಮೇಗೌಡ (65) ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ್ದಾರೆ.

ಮೃತರು ಪತ್ನಿ, ಪುತ್ರರು, ಸೊಸೆಯಂದಿರು, ಪುತ್ರಿಯರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಶುಕ್ರವಾರ 11 ಗಂಟೆಗೆ ಸ್ವಗ್ರಾಮ ಬಣ್ಣೇನಹಳ್ಳಿ ಗ್ರಾಮದಲ್ಲಿ ನಡೆಯಲಿದೆ.

ಒಂದನೇ ಪುಟದಿಂದ

ನನ್ನ ಹೆಂಡ್ತಿ ಬದುಕಿದ್ದಾಳೆ...!! ಹೇ, ನೀನೇ ಕೊಂದಿದ್ದೀಯಾ ನಡೀ ಜೈಲಿಗೆ...!!!



ಅಂದು ಅಸ್ಥಿಪಂಜರ ದೊರೆತ ಸ್ಥಳದಲ್ಲಿ ಪೊಲೀಸರ ಮಹಜರು.

ಪ್ರಾಥಮಿಕ ವೈದ್ಯಕೀಯ ವರದಿಯಂತೆ ಅದು ಮಹಿಳೆಯ ಅಸ್ಥಿಪಂಜರವಾಗಿದ್ದು, ಆಕೆಯ ತಲೆ ಮೇಲೆ ಬಲವಾದ ಆಯುಧದಿಂದ ಹೊಡೆದು ಕೊಲೆ ಮಾಡಲಾಗಿದೆ ಎಂದು ತಿಳಿದು ಬಂದ ಹಿನ್ನೆಲೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣವನ್ನು ಕೊಲೆ ಪ್ರಕರಣವಾಗಿ ಮಾರ್ಪಡಿಸಲಾಗಿತ್ತು.

ಮತ್ತೊಂದೆಡೆ ತಾನು 18 ವರ್ಷದ ಹಿಂದೆ ಮದುವೆಯಾಗಿದ್ದ ಮಲ್ಲಿಗೆ ತನ್ನ ಇಬ್ಬರು ಮಕ್ಕಳನ್ನು ಬಿಟ್ಟು ನಾಪತ್ತೆ ಯಾಗಿದ್ದಾಳೆ ಎಂದು ಬಸವನಹಳ್ಳಿ, ದಿಡ್ಡಳ್ಳಿಯ ಆದಿವಾಸಿ ಜನಾಂಗದ ಸುರೇಶ್, 2020ರ ನ.13ರಂದು ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ಸಲ್ಲಿಸಿದ್ದರು.

ಇತ್ತ ಅಸ್ಥಿಪಂಜರನ್ನಿಡಿದು ತನಿಖೆಗಿಳಿದಿದ್ದ ಪಿರಿಯಾಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ತಮ್ಮ ಸಿಬ್ಬಂದಿಯನ್ನು ಕಳುಹಿಸಿ 2021ರ ಜು.18ರಂದು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಪತ್ನಿ ನಾಪತ್ತೆ ಸಂಬಂಧ ದೂರು ನೀಡಿದ್ದ ಸುರೇಶ್‌ನನ್ನು ಠಾಣೆಗೆ ಕರೆಸಿಕೊಂಡು ಆತನೇ ತನ್ನ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂದು ಪ್ರಕರಣ ದಾಖಲಿದ್ದಾರೆ. ಅಲ್ಲದೇ ಸುರೇಶನ ಪತ್ನಿ ಮಲ್ಲಿಗೆಯ ತಾಯಿ ಗೌರಿ ಎಂಬಾಕೆಯಿಂದ ಇದಕ್ಕೆ ಸಂಬಂಧಿಸಿದಂತೆ ದೂರನ್ನೂ ಪಡೆಯುತ್ತಾರೆ. ಸುರೇಶ ಕುಡಿತದ ಚಟವುಳ್ಳವನಾಗಿದ್ದು, ಪ್ರತಿ ದಿನ ಕುಡಿದು ಬಂದು ಪತ್ನಿ ಮಲ್ಲಿಗೆಯ ಮೇಲೆ ದೌರ್ಜನ್ಯ ನಡೆಸುತ್ತಿದ್ದ. ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದ. ಆತನೇ ತನ್ನ ಮಗಳನ್ನು ಕೊಲೆ ಮಾಡಿದ್ದಾನೆ ಎಂದು ದೂರಿನಲ್ಲಿ ನಮೂದಿಸಲಾಗಿತ್ತು. ವಿಶೇಷವೆಂದರೆ ಮಲ್ಲಿಗೆ ತಾಯಿ ಗೌರಿ ಹೇಳಿದಂತೆ ಮಲ್ಲಿಗೆಯ ಅಪ್ರಾಪ್ತ ಮಗನೇ ದೂರನ್ನು ಬರೆದಿದ್ದ.

ಯಾವುದೇ ಸಣ್ಣ ಕುರುಹೂ ಇಲ್ಲದ ಈ ಕೊಲೆ ಪ್ರಕರಣದಲ್ಲಿ ಸಾಹಸವೆಂಬಂತೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಆರೋಪಿಯನ್ನು ಬಂಧಿಸಿದ್ದರು. ತನ್ನ ಪತ್ನಿಯನ್ನು ಎಲ್ಲಿ, ಹೇಗೆ ಕೊಂದೆ. ಮೃತದೇಹವನ್ನು ಹೇಗೆ ತಂದು ಪೊದೆಯಲ್ಲಿ ಬಿಸಾಡಿದ್ದೆ ಎಂಬ ವಿಚಾರವಾಗಿ ಆರೋಪಿ ಸುರೇಶ್ ತಪ್ಪೊಪ್ಪಿಗೆ ಹೇಳಿಕೆ ನೀಡಿರುವುದನ್ನು ಸರ್ಕಲ್ ಇನ್ಸ್‌ಪೆಕ್ಟರ್ ತನ್ನ ವರದಿಯಲ್ಲಿ ನಮೂದಿಸಿದ್ದರು. ಅಸ್ಥಿಪಂಜರವು ತನ್ನ ಮಗಳದೇ ಎಂಬುದನ್ನು ದೃಢಪಡಿಸುವ ನಿಟ್ಟಿನಲ್ಲಿ ಮಲ್ಲಿಗೆ ತಾಯಿ ಗೌರಿ ಬಟ್ಟೆಗಳನ್ನು ಸಹ ಗುರ್ತಿಸಿದ್ದರು. ಇಷ್ಟಾದ ಮೇಲೆ ಸುರೇಶನಿಗೆ ಜೈಲೇ ಗತಿಯಾಯಿತು.


ತೀರಾ ಬಡವ, ಕೂಲಿ ಕಾರ್ಮಿಕ ಸುರೇಶನಿಗೆ ಹಣ ಕೊಟ್ಟು ವಕೀಲರನ್ನು ನೇಮಿಸಿಕೊಳ್ಳುವ ಶಕ್ತಿಯೂ ಇಲ್ಲ. ಹೀಗಾಗಿ ಪೊಲೀಸರೇ ಈತನ ಪರವಾಗಿ ವಕೀಲರೊಬ್ಬರನ್ನು ಉದಾರ ಮನಸ್ಸಿನಿಂದ ನೇಮಿಸಿದ್ದರು. ಜಾಮೀನು ಅರ್ಜಿಯು ವಜಾ ಆಗಿತ್ತು ನಂತರ ವರ್ಷವಾದರೂ ಈ ವಕೀಲ ನ್ಯಾಯಾಲಯಕ್ಕೆ ಹಾಜರಾಗಲೇ ಇಲ್ಲ.

ದಿಕ್ಕಿಲ್ಲದ ಸುರೇಶ್ ತಂದೆಗೆ ದಾರಿ ಕಾಣ್ತು: ತನ್ನ ಮಗ, ಸೊಸೆಯನ್ನು ಕೊಲೆ ಮಾಡಲಿಲ್ಲ. ಆಕೆ ಯಾರೊಂದಿಗೋ ಹೋಗಿಬಿಟ್ಟಿದ್ದಾಳೆ. ಅನ್ಯಾಯವಾಗಿ ಮಗ ಜೈಲಿನಲ್ಲಿ ಕೊಳೆಯುತ್ತಿದ್ದಾನೆ ಎಂದು ಕೊರಗುತ್ತಿದ್ದ ಸುರೇಶನ ತಂದೆ ಗಾಂಧಿಗೆ ನೆನಪಾಗಿದ್ದು ಕೊಡಗಿನ ಕೆಲ ಸಾಮಾಜಿಕ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದ ಮೈಸೂರಿನ ವಕೀಲ ಪಾಂಡು ಪೂಜಾರಿ. ಅವರ ಬಳಿ ಹೋಗಿ ಅಳಲು ತೋಡಿಕೊಂಡಾಗ ಸಮಾಜ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಪಾಂಡು ಪೂಜಾರಿ, ಪ್ರಕರಣದ ಬಗ್ಗೆ ಗಮನಹರಿಸಿದರು. ಮೊದಲಿಗೆ ಮಲ್ಲಿಗೆಯ ತಾಯಿಯ ರಕ್ತವನ್ನು ಸಂಗ್ರಹಿಸಿ, ಡಿಎನ್‌ಎಗೆ ಕಳುಹಿಸಿದ್ದರೂ ಇನ್ನೂ ವರದಿ ಬಂದಿರಲಿಲ್ಲ. ಆದರೆ ಪೊಲೀಸರು ಅದನ್ನೂ ಕಾಯದೇ ಸುರೇಶನ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಅದನ್ನು ನ್ಯಾಯಾಲಯವು ಒಪ್ಪಿಕೊಂಡಿತ್ತು. ಇನ್ನೇನು, ವಿಚಾರಣೆ ಆರಂಭವಾಗುವ ಸಮಯ.

ಆದರೆ, ಪೂರ್ವಾಪರಗಳ ಅವಲೋಕನದ ಬಳಿಕ ಸುರೇಶ ಅಮಾಯಕ ಎಂಬುದನ್ನು ಮನಗಂಡಿದ್ದ ವಕೀಲ ಪಾಂಡು ಪೂಜಾರಿ ತಮ್ಮ ಸ್ನೇಹಿತ, ಹೈಕೋರ್ಟ್ ವಕೀಲರ ಮೂಲಕ ಸುರೇಶನಿಗೆ ಜಾಮೀನು ಕೊಡಿಸಿದ್ದರು. ಬರೋಬ್ಬರಿ 2 ವರ್ಷದ ನಂತರ ಜೈಲಿನಿಂದ ಬಿಡುಗಡೆಯಾಗಿದ್ದ ಸುರೇಶ, ವಕೀಲರೊಂದಿಗೆ ತಾನು ಪತ್ನಿಯನ್ನು ಕೊಂದಿಲ್ಲ. ಆಕೆ ಜೀವಂತವಿದ್ದಾಳೆ ಎಂಬುದನ್ನು ಖಚಿತವಾಗಿ ಹೇಳುತ್ತಿದ್ದ. ಇದ್ದನ್ನೇ ವಕೀಲರು ನ್ಯಾಯಾಲಯದಲ್ಲಿ ಪ್ರಸ್ತಾಪಿಸಿದರಾದರೂ, ಅದನ್ನು ನ್ಯಾಯಾಲಯ ಒಪ್ಪಲಿಲ್ಲ. ಯಾಕೆಂದರೆ ಈ ಪ್ರಕರಣದಲ್ಲಿ 59 ಮಂದಿ ಸಾಕ್ಷಿದಾರರಿದ್ದರು.


ಎಲ್ಲದಕ್ಕೂ ಹೆಬ್ಬೆಟ್ ಒತ್ತಿಸಿಕೊಂಡರು: ವಿಚಾರಣೆ ಆರಂಭವಾದಾಗ ದೂರು ಸಲ್ಲಿಸಿದ್ದ ಮಲ್ಲಿಗೆ ತಾಯಿ ಗೌರಿ ಸಹ ನನ್ನ ಅಳಿಯ ಮಗಳ ಮೇಲೆ ಯಾವುದೇ ದೌರ್ಜನ್ಯ ನಡೆಸಿಲ್ಲ ಅವಳನ್ನು ಕೊಂದೂ ಇಲ್ಲ. ಎಲ್ಲೋ ಜೀವಂತವಿದ್ದಾಳೆ ಎಂದು ಹೇಳಿದ್ದಲ್ಲದೇ, ಪೊಲೀಸರ ಮಹಜರ್‌ನಲ್ಲಿ ಹಾಜರುಪಡಿಸಿದ್ದ ಬಟ್ಟೆಗಳನ್ನು ನಾನು ನೋಡಿ ಗುರುತಿಸಲೇ ಇಲ್ಲ. ಪೊಲೀಸರು ನನ್ನಿಂದ ಹೆಬ್ಬೆಟ್ಟು ಒತ್ತಿಸಿಕೊಂಡರು. ಅವರು ಅಳಿಯನಿಗೆ ಹೊಡೆಯುತ್ತಿದ್ದರಿಂದ ನಾನು ಅವರು ಹೇಳಿದ ಹಾಗೆ ಹೆಬ್ಬೆಟ್ಟು ಒತ್ತಿದೆ ಎಂದು ನ್ಯಾಯಾಧೀಶರ ಮುಂದೆ ಹೇಳಿದ್ದರು.

ಅಸ್ಥಿಪಂಜರ ಯಾರದ್ದು... ಅದರ ತನಿಖೆ ಆಗಬೇಕಲ್ಲವೆ?



ಪತ್ತೆಯಾಗಿದ್ದ ಅಸ್ಥಿಪಂಜರ.

ಈ ಪ್ರಕರಣದಲ್ಲಿ ಪೊಲೀಸರ ವರ್ತನೆ ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಮೃತದೇಹ ದೊರೆಯದೇ ಕೇವಲ ಅಸ್ಥಿಪಂಜರ ದೊರೆತಾಗ ಎಫ್‌ಎಸ್‌ಎಲ್ ವರದಿಯಲ್ಲಿ ಸತ್ತದ್ದು ಯಾರು ಎಂಬುದು ಪತ್ತೆಯಾದ ನಂತರ ಕೊಂದವರು ಯಾರು ಎಂಬುದರ ಬಗ್ಗೆ ತನಿಖೆ ನಡೆಯುತ್ತದೆ. ಆದರೆ ಈ ಪ್ರಕರಣದಲ್ಲಿ ಸುರೇಶನೇ ಹೆಂಡತಿಯನ್ನು ಕೊಂದಿದ್ದಾನೆ ಎಂದು ಪೊಲೀಸರು ಏಕಪಕ್ಷೀಯವಾಗಿ ತೀರ್ಮಾನಿಸಿ ಬಿಟ್ಟಿದ್ದರು. ಎಫ್‌ಎಸ್‌ಎಲ್ ವರದಿ ಬಂದು ಸತ್ತದ್ದು ಯಾರು ಎಂಬುದು ಗೊತ್ತಾಗುವ ಮುನ್ನವೇ ಸತ್ತಿರುವುದು ಮಲ್ಲಿಗೆ, ಕೊಂದಿರುವುದು ಸುರೇಶ್ ಎಂದು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಕೀಲ ಪಾಂಡು ಪೂಜಾರಿ ಹೇಳುವಂತೆ ನ್ಯಾಯಾಲಯದಲ್ಲಿ ಎಫ್ ಎಸ್‌ಎಲ್ ವರದಿ ಬಗ್ಗೆ ಪ್ರಶ್ನಿಸಲು ಸುರೇ ಶನ ಪರವಾಗಿ ಯಾವುದೇ ವಕೀಲರು ಇರುವುದಿಲ್ಲ ಎಂಬ ಧೈರ್ಯ ಪೊಲೀಸರಿಗೆ ಇತ್ತೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಸ್ಥಿಪಂಜರವಾಗಿ ಸಿಕ್ಕಿದ್ದ ಮಹಿಳೆ ಯಾರು? ಆಕೆಯನ್ನು ಕೊಂದವರು ಯಾರು ಎಂಬುದರ ಬಗ್ಗೆ ಪೊಲೀಸರು ತಲೆ ಕೆಡಿಸಿಕೊಂಡಿಲ್ಲವೇ? ಅಥವಾ ಸುರೇಶನನ್ನು ಸಿಕ್ಕಿಸಿಬಿಟ್ಟರೆ ಪ್ರಕರಣ ಮುಗಿಯಿತು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಅಂತಹ ತೀರ್ಮಾನಕ್ಕೆ ಪೊಲೀಸರು ಬರಲು ಹಂತಕರು ಪ್ರಭಾವಿಗಳಾಗಿದ್ದರೇ, ಅಥವಾ ಹಣವಂತರೇ? ಎಂಬ ಪ್ರಶ್ನೆಗಳು ಕೇಳಿಬರುತ್ತಿವೆ.



ಮಲ್ಲಿಗೆ ನಾಪತ್ತೆ ಪೊಲೀಸ್ ಪ್ರಕಟಣೆ

ನಮ್ಮ ತಂದೆ ಕುಡಿಯುವುದೇ ಇಲ್ಲ: ಮಲ್ಲಿಗೆಯ ಅಪ್ರಾಪ್ತ ಮಗನಂತೂ ಪೊಲೀಸರು ಹೇಳಿದಂತೆ ನಾನು ದೂರನ್ನು ಬರೆದಿದ್ದೇನೆ. ಮಾತ್ರವಲ್ಲದೇ, ನನ್ನ ತಂದೆಗೆ ಕುಡಿಯುವ ಅಭ್ಯಾಸವೇ ಇಲ್ಲ ಎಂದು ಹೇಳಿಬಿಟ್ಟ, ನಂತರ ಬಂದ ಸಾಕ್ಷಿದಾರರೂ ಕೂಡ ಮಲ್ಲಿಗೆ ಕೊಲೆ ಆಗಿಲ್ಲ. ಆಕೆ ವಿರಾಜಪೇಟೆ ತಾಲೂಕು ಅಥವಾ ಕೇರಳದಲ್ಲಿ ಬೇರೊಬ್ಬನ ಸಂಗಡ ಜೀವಂತ ಇದ್ದಾಳೆ. ಕೆಲವರು ಆಕೆಯನ್ನು ನೋಡಿ ನಮಗೆ ಹೇಳಿದ್ದಾರೆ ಎಂದು ನ್ಯಾಯಾಧೀಶರ ಮುಂದೆ ಸ್ಪಷ್ಟವಾಗಿ ನುಡಿದಿದ್ದರು.

ನ್ಯಾಯಾಲಯಕ್ಕೆ ಬಂದ ಎಲ್ಲಾ 8 ಸಾಕ್ಷಿದಾರರು ಮಲ್ಲಿಗೆ ಬದುಕಿದ್ದಾಳೆ ಎಂದು ಹೇಳುತ್ತಿದ್ದರಿಂದ ನ್ಯಾಯಾಧೀಶರು ತನಿಖಾಧಿಕಾರಿಗಳನ್ನು ಕರೆದು ಈ ಪ್ರಕರಣದ ನೈಜತೆ ಬಗ್ಗೆ ಒಮ್ಮೆ ಪ್ರಶ್ನಿಸಿದಾಗ ತಾವು ಸಲ್ಲಿಸಿರುವ ಆರೋಪ ಪಟ್ಟಿ ಸರಿಯಾಗಿದೆ. ತನಿಖೆ ಸರಿಯಾಗಿಯೇ ನಡೆದಿದೆ ಎಂದು ಹೇಳುವ ಮೂಲಕ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಸಮರ್ಥಿಸಿಕೊಂಡಿದ್ದರು.

ಮಡಿಕೇರಿಯಲ್ಲಿ ಮಲ್ಲಿಗೆ ಪ್ರತ್ಯಕ್ಷ: ಈ ಮಧ್ಯೆ, ಏಪ್ರಿಲ್ 1 ಅನ್ನು ಮೂರ್ಖರ ದಿನ ಎಂದು ಕರೆಯುವ ವಾಡಿಕೆ. ಆದರೆ ಅದೇ ದಿನ ಪತ್ನಿ ಕೊಂದ ಆರೋಪದಲ್ಲಿ 2 ವರ್ಷ ಜೈಲು ವಾಸ ಅನುಭವಿಸಿದ್ದ ಸುರೇಶನಿಗೆ ಪೊಲೀಸರು ಎಲ್ಲರನ್ನೂ ಮೂರ್ಖರನ್ನಾಗಿಸಿದ್ದಾರೆ ಎಂಬುದನ್ನು ಸಾಬೀತುಪಡಿಸುವ ದಿನವಾಗಿತ್ತು.

ಅಂದು ಸಂಜೆ 4.30ರ ಸುಮಾರಿನಲ್ಲಿ ಮಡಿಕೇರಿ ಹಳೇ ಬಸ್ ನಿಲ್ದಾಣದ ಬಳಿಯ ಹೋಟೆಲ್‌ವೊಂದರಲ್ಲಿ ಮಲ್ಲಿಗೆ ತನ್ನ ಪ್ರಿಯಕರ ಗಣೇಶ್‌ನೊಂದಿಗೆ ತಿಂಡಿ ತಿನ್ನುತ್ತಿರುವುದನ್ನು, ಕೊಲೆ ಪ್ರಕರಣದಲ್ಲಿ ಸಾಕ್ಷಿದಾರರೂ ಆಗಿದ್ದ ಸುರೇಶನ ಸಂಬಂಧಿಕರೊಬ್ಬರು ನೋಡಿ ಮೊಬೈಲ್ ಮೂಲಕ ಅದನ್ನು ಸುರೇಶನಿಗೆ ತಿಳಿಸಿದ್ದಾರೆ. ತಕ್ಷಣವೇ ಆತ ವಕೀಲ ಪಾಂಡು ಪೂಜಾರಿ ಅವರನ್ನು ಸಂಪರ್ಕಿಸಿ ಅವರ ಸೂಚನೆಯಂತೆ ಮಡಿಕೇರಿ ಟೌನ್ ಠಾಣೆ ಪೊಲೀಸ್ ಠಾಣೆಗೆ ತೆರಳಿ ಪ್ರಕರಣದ ಬಗ್ಗೆ ವಿವರಿಸಿ ಮಲ್ಲಿಗೆ ಮತ್ತು ಆಕೆಯ ಪ್ರಿಯಕರ ಗಣೇಶ್‌ನನ್ನು ಠಾಣೆಗೆ ಕರೆತಂದಿದ್ದಾನೆ. ಆಕೆಯನ್ನು ವಿಚಾರಣೆಗೊಳಪಡಿಸಿದ ಮಡಿಕೇರಿ ಟೌನ್ ಪೊಲೀಸರು ಅಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ಮಲ್ಲಿಗೆಯನ್ನು ಬೈಲುಕುಪ್ಪೆ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕೊಲೆಯಾಗಿದ್ದಾಳೆ ಎಂದು ಪೊಲೀಸರಿಂದ ನಂಬಿಸಲ್ಪಟ್ಟಿರುವ ಮಲ್ಲಿಗೆಯನ್ನು, ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂದು ವಕೀಲ ಪಾಂಡು ಪೂಜಾರಿ ಅವರು ಬೈಲುಕುಪ್ಪೆ ಮತ್ತು ಬೆಟ್ಟದಪುರದ ಠಾಣೆಗಳಿಗೆ ಹೋದರೆ ತಮಗೆ ಮಲ್ಲಿಗೆಯನ್ನು ಕುಶಾಲನಗರ ಪೊಲೀಸರು ಒಪ್ಪಿಸಲೇ ಇಲ್ಲ ಎಂದು ಹೇಳಿಬಿಟ್ಟರು.

ಎಸ್ಪಿ ಮೊರೆ: ಅಲ್ಲಿಂದ ಕುಶಾಲನಗರ ಗ್ರಾಮಾಂತರ ಠಾಣೆಗೆ ಅವರು ತೆರಳಿದರೆ ಅಲ್ಲಿನ ಸಿಬ್ಬಂದಿ ಆಕೆಯ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಕೈಚೆಲ್ಲಿಬಿಟ್ಟರು. ಅದೇ ವೇಳೆ ಕುಶಾಲನಗರ ಟೌನ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಬಿ.ಜಿ.ಪ್ರಕಾಶ್ ಇರುವುದರಿಂದ ಮಲ್ಲಿಗೆಯನ್ನು ಪೊಲೀಸರು ನಾಪತ್ತೆ ಮಾಡಿಬಿಡಬಹುದು ಎಂಬ ಸಂಶಯದಿಂದ ವಕೀಲ ಪಾಂಡು ಪೂಜಾರಿ, ಈ ಸಂಬಂಧ ಕೊಡಗು ಎಸ್ಪಿ ರಾಮರಾಜನ್ ಅವರೊಂದಿಗೆ ಮೊಬೈಲ್ ಮೂಲಕ ಸಂಪರ್ಕಿಸಿದರು. ಮಡಿಕೇರಿ ಠಾಣೆಯಿಂದ ಕುಶಾಲನಗರ ಠಾಣೆಗೆ ಮಲ್ಲಿಗೆಯನ್ನು ಕಳುಹಿಸಿರುವ ಮಾಹಿತಿ ಹೊಂದಿದ್ದ ರಾಮರಾಜನ್ ಅವರು ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದ್ದ ನಾಪತ್ತೆ ಪ್ರಕರಣವನ್ನು ಕ್ಲೋಸ್ ಮಾಡಲಾಗಿದೆ. ಅದನ್ನು ರೀ–ಓಪನ್ ಮಾಡಿ ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಇಷ್ಟೆಲ್ಲಾ ಆಗುವುದರೊಳಗಾಗಿ ಮಧ್ಯಾಹ್ನವಾಗಿಬಿಟ್ಟಿದೆ. ಕುಶಾಲನಗರ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದು ಅನುಮಾನ ಎಂದು ಭಾವಿಸಿದ ವಕೀಲ ಪಾಂಡು ಪೂಜಾರಿ ಅವರು ತಮ್ಮ ಗುರು, ಮೈಸೂರಿನ ಹಿರಿಯ ವಕೀಲ ಬಿ.ಜಿ.ರಾಘವೇಂದ್ರ ಅವರನ್ನು ಸಂಪರ್ಕಿಸಲಾಗಿ ತಕ್ಷಣವೇ ಅವರು ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಅಡ್ವಾನ್ಸ್‌ಡ್ ಅರ್ಜಿ ಸಲ್ಲಿಸಿ ಕೊಲೆಯಾಗಿದ್ದಾಳೆನ್ನಲಾದ ಮಹಿಳೆ ಜೀವಂತವಾಗಿ ಸಿಕ್ಕಿದ್ದಾಳೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಲ್ಲದೇ, ಏ.1 ಮತ್ತು 2ರಂದು ಮಧ್ಯಾಹ್ನದವರೆಗೆ ನಡೆದ ವಿದ್ಯಮಾನಗಳನ್ನು ವಿವರಿಸಿದ್ದಾರೆ.

ಇದನ್ನು ಆಲಿಸಿದ ನ್ಯಾಯಾಧೀಶರು ತಕ್ಷಣವೇ ಪತ್ತೆಯಾಗಿರುವ ಮಲ್ಲಿಗೆಯನ್ನು ತಮ್ಮ ಮುಂದೆ ಹಾಜರುಪಡಿಸಬೇಕೆಂದು ಬೆಟ್ಟದಪುರ ಪೊಲೀಸರಿಗೆ ಖಡಕ್ ಆದೇಶ ನೀಡಿದ್ದಾರೆ. ನ್ಯಾಯಾಧೀಶರ ಆದೇಶ ತಿಳಿಯುತ್ತಿದ್ದಂತೆಯೇ ವಕೀಲ ಪಾಂಡು ಪೂಜಾರಿ ಅವರು ಮಲ್ಲಿಗೆ ಪತಿ ಸುರೇಶ, ತಾಯಿ ಗೌರಿ, ಅತ್ತೆ, ಅಪ್ರಾಪ್ತ ಮಕ್ಕಳನ್ನು ಮೈಸೂರಿಗೆ ಕರೆತಂದಿದ್ದಾರೆ. ನಿನ್ನೆ ಸಂಜೆ 6 ಗಂಟೆಗೆ ಬೆಟ್ಟದಪುರ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಆಕೆ ತನ್ನ ಪತಿ, ತಾಯಿ, ಮಕ್ಕಳು, ಅತ್ತೆ ಇನ್ನಿತರೆ ಸಂಬಂಧಿಕರ ನ್ಯಾಯಾಧೀಶರ ಮುಂದೆ ಗುರುತಿಸಿದ್ದಲ್ಲದೇ, ತಾನು ಗಂಡನ ಮನೆ ತೊರೆದು ಗಣೇಶ್ ಎಂಬಾತನೊಂದಿಗೆ ಪೊನ್ನಂಪೇಟೆ ತಾಲೂಕು ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಕಳೆದ 6 ವರ್ಷದಿಂದ ವಾಸವಿದ್ದು, ಕಾಫಿ ತೋಟಗಳಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿಕೆ ನೀಡಿದ್ದಾಳೆ. ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಬಟ್ಟೆಗಳನ್ನು ತೋರಿಸಿದಾಗ ಇದು ತನ್ನ ಬಟ್ಟೆಗಳಲ್ಲ ಎಂದು ನಿರಾಕರಿಸಿದ್ದಾಳೆ.

ಗಂಡನಿಂದಲೇ ಹತ್ಯೆಯಾಗಿದ್ದಾಳೆ ಎಂದು ಪೊಲೀಸರು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದ ಮಲ್ಲಿಗೆ ಸತ್ತಿಲ್ಲ, ಬದುಕಿದ್ದಾಳೆ. ಆಕೆಯ ಗಂಡ ಅಮಾಯಕನಾಗಿದ್ದು, ವಿನಾ ಕಾರಣ 2 ವರ್ಷ ಜೈಲು ವಾಸ ಅನುಭವಿಸಿ, ಈಗಲೂ ಕೊಲೆ ಪ್ರಕರಣದ ಆರೋಪಿಯಾಗಿ ವಿಚಾರಣೆ ಎದುರಿಸುತ್ತಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಂಡ ನ್ಯಾಯಾಧೀಶರು, ತಕ್ಷಣವೇ ಮೈಸೂರು ಜಿಲ್ಲಾ ಎಸ್ಪಿ, ಸುರೇಶನ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದ ತನಿಖಾಧಿಕಾರಿ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್, ಈ ಪ್ರಕರಣದ ತನಿಖೆಯಲ್ಲಿ ಭಾಗಿಯಾಗಿದ್ದ ಎಎಸ್‌ಐ ಸೋಮಶೇಖರ, ಸಿಬ್ಬಂದಿಗಳಾದ ಜಿತೇಂದ್ರ ಕುಮಾರ, ಎಂ.ಪ್ರಕಾಶ್, ಮಹೇಶ್ ಕುಮಾರ್, ಯಾವುದೇ ಸಬೂಬು ಹೇಳದೇ ನ್ಯಾಯಾಲಯದ ಮುಂದೆ ಇಂದು (ಏ.3) ಹಾಜರಾಗಬೇಕು. ಈ ತುರ್ತು ನೋಟಿಸನ್ನು ತಕ್ಷಣವೇ ಇ–ಮೇಲ್ ಮೂಲಕ ಎಲ್ಲರಿಗೂ ರವಾನಿಸಬೇಕು ಎಂದು ಆದೇಶಿಸಿದ್ದರು.

ಅದರಂತೆ ಇಂದು ಬೆಳಗ್ಗೆ ಮೈಸೂರು ಎಸ್ಪಿ ವಿಷ್ಣುವರ್ಧನ್, ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಸೇರಿದಂತೆ ಎಲ್ಲರೂ ನ್ಯಾಯಾಧೀಶರ ಮುಂದೆ ಹಾಜರಿದ್ದರು. ಅವರಿಗೆ ಮಲ್ಲಿಗೆಯನ್ನು ತೋರಿಸಿದ ನ್ಯಾಯಾಧೀಶರು, ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿಯ ಬಗ್ಗೆ ಪ್ರಶ್ನಿಸಿದಾಗ ಎಲ್ಲರೂ ತಲೆ ತಗ್ಗಿಸಿ ನಿಂತಿದ್ದಾರೆ.

15 ದಿನದಲ್ಲಿ ಸಮಗ್ರ ವರದಿ ಸಲ್ಲಿಸಿ: ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸುಳ್ಳು ಆರೋಪ ಪಟ್ಟಿ ಸಲ್ಲಿಕೆಯಾಗಿದ್ದು ಹೇಗೆ ಮತ್ತು ಏಕೆ? ನ್ಯಾಯ ರೀತಿ ಪ್ರಕರಣದ ಇತ್ಯರ್ಥಕ್ಕೆ ಮಾರ್ಗೋಪಾಯ ಏನು ಎಂಬಿತ್ಯಾದಿ ಸಮಗ್ರವಾದ ವರದಿಯನ್ನು 15 ದಿನಗಳಲ್ಲಿ ಸಲ್ಲಿಸಬೇಕು ಎಂದು ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ್ ಅವರಿಗೆ ಆದೇಶ ನೀಡಿ ಪ್ರಕರಣದ ವಿಚಾರಣೆಯನ್ನು ಏ.17ಕ್ಕೆ ಮುಂದೂಡಿದ್ದಾರೆ.

ವರಿಷ್ಠರ ನಿರ್ಧಾರ

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸಿ, 2028ರಲ್ಲಿ ಮತ್ತೆ ಅಧಿಕಾರಕ್ಕೆ ತರುವುದಾಗಿ ತಿಳಿಸಿದ್ದಾರೆ.

ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿ ಜೊತೆಗೆ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಸಿದಂತೆ ಸಚಿವ ರಾಗಿ ತಮಗೂ ಮುಂದುವರೆಯಲು ಅವಕಾಶ ನೀಡಿ ಎಂದು ಕೋರಿದರೆನ್ನಲಾಗಿದೆ.

ರಾಜ್ಯಾಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ವೇಣುಗೋಪಾಲ್ ಒಂದು ಹಂತದ ಚರ್ಚೆ ನಡೆಸಿ ಖಂಡ್ರೆ ಅವರನ್ನು ಅಂತಿಮಗೊಳಿಸಿದ್ದಾರೆ. ಇದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರ ಹಸಿರು ನಿಶಾನೆ ಬಾಕಿ ಇದೆ ಸಿದ್ದರಾಮಯ್ಯ ಅವರ ಶಿಫಾರಸ್ಸನ್ನು ಖರ್ಗೆ ಮಾನ್ಯ ಮಾಡುವ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಅನುಮಾನಗಳು ವ್ಯಕ್ತವಾಗುತ್ತಿವೆ.

ಠಾಣೆಗೆ ಕಲ್ಲು ತೂರುತ್ತೇವೆಂದು ಅವಾಜ್ ಹಾಕಿ ಪೊಲೀಸರ ಮೇಲೆ ಹಲ್ಲೆ ಮಾಡಿದ್ದ 12 ಮಂದಿ ವಿರುದ್ಧ ಪ್ರಕರಣ ದಾಖಲು

ಮೈಸೂರು,ಏ.3(ಆರ್‌ಕೆ)– ಉದಯಗಿರಿ ಠಾಣೆಯಂತೆ ಎನ್.ಆರ್.ಠಾಣೆಗೂ ಕಲ್ಲು ತೂರುತ್ತೇವೆಂದು ಅವಾಜ್ ಹಾಕಿ ಪೊಲೀಸರ ಮೇಲೆ ಹಲ್ಲೆ ಮಾಡಿದ್ದ 12 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮಾದೇಶ, ಗಿರೀಶ್ ಅಲಿಯಾಸ್ ಬ್ಲಡ್, ರವಿಕುಮಾರ್, ಕಿರಣ್ ಅಲಿಯಾಸ್ ಬಾತು, ರಾಘವೇಂದ್ರ, ದಾದಾ, ಕೀರ್ತಿ, ನಾಗೇಂದ್ರ ಸೇರಿದಂತೆ ಒಟ್ಟು 12 ಮಂದಿ ವಿರುದ್ಧ ಎನ್.ಆರ್.ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಯುಗಾದಿ ಹಬ್ಬದಂದು ಮೈಸೂರಿನ ಗಾಂಧಿನಗರದಲ್ಲಿ ದುರ್ಗಾದೇವಿ ಮೆರವಣಿಗೆ ನಡೆಯುತ್ತಿದ್ದ ವೇಳೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಗಲಾಟೆಯಾಗಿತ್ತು. ಜಗಳ ಬಿಡಿಸಲು ಮುಂದಾದ ಪೊಲೀಸ್ ಸಿಬ್ಬಂದಿ ಮೇಲೆ ತಿರುಗಿ ಬಿದ್ದಿದ್ದ ಗುಂಪು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಉದಯಗಿರಿ ಠಾಣೆ ಮೇಲೆ ಕಲ್ಲು ತೂರಿದಂತೆ ಎನ್.ಆರ್. ಠಾಣೆ ಮೇಲೂ ಕಲ್ಲು ತೂರಬೇಕಾಗುತ್ತದೆ ಎಂದು ಅವಾಜ್ ಹಾಕಿದ್ದಲ್ಲದೆ, ಪೊಲೀಸರ ಮೇಲೂ ಹಲ್ಲೆ ನಡೆಸಿತ್ತು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಹೆಚ್ಚುವರಿ ಸಿಬ್ಬಂದಿ, ವೀಡಿಯೋ ರೆಕಾರ್ಡ್ ಮಾಡಿ ಗಲಾಟೆ ಮಾಡಿದ್ದ 12 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎನ್.ಆರ್.ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್ ತಿಳಿಸಿದ್ದಾರೆ.

ಆರೋಪಿಗಳೆಲ್ಲರೂ ಮೊಬೈಲ್ ನಂಬರ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಡೀಸೆಲ್ ದರ, ಹೆದ್ದಾರಿ ಸುಂಕ ಹೆಚ್ಚಳಕ್ಕೆ ಜಿಲ್ಲಾ ಟ್ರಕ್ಕರ್ ಅಸೋಸಿಯೇಷನ್ ಖಂಡನೆ

ಮೈಸೂರು, ಏ.3(ಜಿಎ)–ರಾಜ್ಯ ಸರ್ಕಾರದ ಡೀಸೆಲ್ ದರ ಏರಿಕೆ, ಕೇಂದ್ರ ಸರ್ಕಾರದ ಹೆದ್ದಾರಿ ಸುಂಕ ಹೆಚ್ಚಳ ಅವೈಜ್ಞಾನಿಕ ಎಂದು ಜಿಲ್ಲಾ ಟ್ರಕ್ಕರ್ ಅಸೋಸಿಯೇಷನ್ ಅಧ್ಯಕ್ಷ ಶ್ರೀನಿವಾಸ ರಾವ್ ಖಂಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಡೀಸೆಲ್ ಸೇರಿದಂತೆ ಹಳೆ ಲಾರಿಗಳಿಗೆ ಎಫ್‌ಸಿ ಚಾರ್ಜ್, ಬಿಡಿ ಭಾಗ, ಎಂಜಿನ್ ಆಯಿಲ್ ಇತ್ಯಾದಿ ಬೆಲೆಗಳನ್ನು ಹೆಚ್ಚಿಸಿದೆ. ಇನ್ನೂ ಕೇಂದ್ರ ಸರ್ಕಾರ ಟೋಲ್, ಇನ್ಸೂರೆನ್ಸ್ ಹೆಚ್ಚು ಮಾಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಕಿಡಿಕಾರಿದರು.

ಲಾರಿ ಮಾಲೀಕರು ಶೇ.60ರಷ್ಟು ತೆರಿಗೆ ಕಟ್ಟುತ್ತಿದ್ದಾರೆ. ಆದರೂ ಸರ್ಕಾರ ನಮಗೆ ಯಾವುದೇ ರೀತಿ ಸಹಾಯ ಮಾಡುತ್ತಿಲ್ಲ, ಸಮಸ್ಯೆ ಆಲಿಸುತ್ತಿಲ್ಲ. ಬದಲಿಗೆ ನಮ್ಮನ್ನೇ ದೋಚುತ್ತಿದ್ದಾರೆ. ದೇಶದಲ್ಲಿ ಲಾರಿ ಮಾಲೀಕರು ಸಹ ರೈತರ ಹಾಗೇ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಕೂಡಲೇ ರಾಜ್ಯ ಮತ್ತು ಕೇಂದ್ರ ಸರ್ಕಾರ ದರ ಏರಿಕೆ ಹಿಂಪಡೆಯಬೇಕು. ಇಲ್ಲದಿದ್ದರೆ, ರಾಜ್ಯವ್ಯಾಪಿ ಸಂಘಟನೆ ಸೇರಿ ಲಾರಿಗಳನ್ನು ಸ್ಥಗಿತಗೊಳಿಸಿ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಗೌರವಾಧ್ಯಕ್ಷ ಲಿಂಗರಾಜು, ಕಾರ್ಯದರ್ಶಿ ಮಹೇಶ್, ಉಪಾಧ್ಯಕ್ಷರಾದ ಅಸ್ಗರ್ ಅಲಿಖಾನ್, ರಮೇಶ್ ಇದ್ದರು.

ಪಾಲಿಕೆ ನೌಕರರ ಸಂಘದ ನೂತನ ಪದಾಧಿಕಾರಿಗಳು



ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್.ಯಶೋಧರ, ಉಪಾಧ್ಯಕ್ಷರಾಗಿ ಕೆ.ಸುಮಂಗಳ ಹಾಗೂ ಖಜಾಂಚಿಯಾಗಿ ನಸ್ರುಲ್ಲಾ ಅವಿರೋಧವಾಗಿ ಆಯ್ಕೆಯಾದರು. ಸದಸ್ಯರಾದ ಬಿ.ಪ್ರಸಾದ್, ಹೆಚ್.ಎಂ.ಶಿವಪ್ರಸಾದ್, ಕೆ.ವಿಶ್ವನಾಥ, ಎನ್.ಮಂಜುನಾಥ, ಬಿ.ರಾಜು, ಎಸ್.ಮೈತ್ರಿ, ವಿ.ರಾಜೇಶ್ವರಿ ಬಾಯಿ, ಎಂ.ಬಸವಣ್ಣ, ಡಿ.ಸುರೇಂದ್ರಕುಮಾರ್, ಎನ್.ಶಿವಕುಮಾರ್ ಉಪಸ್ಥಿತರಿದ್ದರು.

ಸಿದ್ದನಗೌಡ ಪಾಟೀಲ ಸಿಎಆರ್ ಡಿಸಿಪಿ

ಮೈಸೂರು, ಏ.3(ಆರ್‌ಕೆ)– ಮೈಸೂರು ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಡಿಸಿಪಿಯಾಗಿ ಬೆಳಗಾವಿ ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಸಿಎಆರ್ ಡಿಸಿಪಿಯಾಗಿದ್ದ ಎ.ಮಾರುತಿ ಅವರನ್ನು ಡಿಜಿ ಮತ್ತು ಐಜಿ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಬೇಸಿಗೆ ವಿಜ್ಞಾನ ಕಾರ್ಯಾಗಾರ

ಮೈಸೂರು, ಏ.3–ಮೈಸೂರ್ ಸೈನ್ಸ್ ಫೌಂಡೇಷನ್ 8 ದಿನಗಳ ಬೇಸಿಗೆ ವಿಜ್ಞಾನ ಕಾರ್ಯಾಗಾರವನ್ನು ಏ.13ರಿಂದ 20ರವರೆಗೆ ಸರಸ್ವತಿಪುರಂನಲ್ಲಿರುವ ಜ್ಞಾನೋದಯ ಪದವಿ ಪೂರ್ವ ಕಾಲೇಜಿನಲ್ಲಿ 7ನೇ ತರಗತಿಯಿಂದ ಪಿಯು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಪ್ರಮುಖವಾಗಿ ಪ್ರಾಯೋಗಿಕ ಅನುಭವವನ್ನು ನೀಡುವ ಸಲುವಾಗಿ ಶಿಬಿರವನ್ನು ಹಮ್ಮಿಕೊಂಡಿದ್ದು, ಕೆಲವೇ ಸೀಟುಗಳು ಮಾತ್ರ ಲಭ್ಯವಿದೆ. ಶಿಬಿರದಲ್ಲಿ ಪ್ರಮುಖವಾಗಿ ಭೌತವಿಜ್ಞಾನ, ರಸಾಯನ ಶಾಸ್ತ್ರ ಮತ್ತು ಜೀವ ವಿಜ್ಞಾನ ಪ್ರಯೋಗಾಲಯದ ಉಪಕರಣಗಳ ಪರಿಚಯ ಮತ್ತು ಪ್ರಯೋಗಾಲಯ ಉಪಕರಣಗಳನ್ನು ಬಳಸಿ ಸರಳ ಪ್ರಯೋಗಗಳು, ತಂತ್ರಾಂಶ ಬಳಸಿ ಭೌತವಿಜ್ಞಾನ ಮತ್ತು ರಸಾಯನ ಶಾಸ್ತ್ರ ವರ್ಚುಯಲ್ ಪ್ರಯೋಗಾಲಯ ಬಳಕೆ, ಖಗೋಳ ವಿಜ್ಞಾನ ಪ್ರಯೋಗಗಳು, ಗಣಿತ ಒರಿಗಾಮಿ, ಗಣಿತ ಪಜಲ್ ಲೆಕ್ಕಗಳನ್ನು ಬಿಡಿಸುವುದು, ಹರ್ಬೇರಿಯಂ ತಯಾರಿಕೆ, ಫೋಲ್ಡ್‌ಸ್ಕೋಪ್ ತಯಾರಿಕೆ, ಆಹಾರ ಕಲಬೆರಕೆ ಪತ್ತೆಹಚ್ಚುವ ಪ್ರಯೋಗಗಳು, ರಸಪ್ರಶ್ನೆ, ಪರಿಸರ ನಡಿಗೆ, ಹಮ್ಮಿಕೊಳ್ಳಲಾಗಿದೆ. ಶಿಬಿರವು ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಮಾಹಿತಿ, ನೋಂದಾಯಿಸಲು ಸಂತೋಷ್‌ಕುಮಾರ್ ಮೊ: 8105503863 ಮೂಲಕ ಸಂಪರ್ಕಿಸಬಹುದು.

ಹಳ್ಳಿಗಳೂ ನಗರಗಳಾಗಿ ಜನರ ಜೀವನ ಶೈಲಿ ಬದಲಾಗುತ್ತಿದೆ!

ನಮ್ಮ ಅಸ್ಮಿತೆಯ ಜಾನಪದ ಸಂಸ್ಕೃತಿ ಉಳಿಸಿ, ಬೆಳೆಸಬೇಕು: ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ



ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಗುರುವಾರ ಕರ್ನಾಟಕ ಬಯಲಾಟ ಅಕಾಡೆಮಿ ಆಯೋಜಿಸಿದ್ದ ಮೂಡಲಪಾಯ ಬಯಲಾಟ ಪರಂಪರೆ ಕುರಿತ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು,ಏ.3(ಬಿಎಲ್‌ಯು)– ಹಳ್ಳಿಗಳೂ ನಗರಗಳಾಗಿ ಜನರ ಜೀವನ ಶೈಲಿ ಬದಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅನಾದಿ ಕಾಲದಿಂದ ಬೆಳೆದು ಬಂದಿರುವ ನಮ್ಮ ಅಸ್ಮಿತೆಯ ಜಾನಪದವನ್ನು ಉಳಿಸಿ ಬೆಳೆಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ನೀಡಿದ್ದಾರೆ.

ನಗರದ ರಂಗಾಯಣದ ಭೂಮಿಗೀತದಲ್ಲಿ ಇಂದು ಬಾಗಲಕೋಟೆಯಲ್ಲಿರುವ ಕರ್ನಾಟಕ ಬಯಲಾಟ ಅಕಾಡೆಮಿ ಆಯೋಜಿಸಿದ್ದ ಮೂಡಲಪಾಯ ಬಯಲಾಟ ಪರಂಪರೆ ಕುರಿತ ವಿಚಾರ ಸಂಕಿರಣ ಮತ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ನಗರಗಳಾಗಿರುವ ಹಳ್ಳಿಗಳಲ್ಲಿ ಟಿ.ವಿ. ಮತ್ತು ಮೊಬೈಲ್‌ನಿಂದ ಜನರ ರೀತಿ ರಿವಾಜು, ಬದುಕಿನ ದೃಷ್ಟಿಕೋನವೇ ಬದಲಾಗಿದೆ ಎಂದರು.

ನಮ್ಮ ಪೂರ್ವಜರು ತಮ್ಮ ಬದುಕಿನ ದಾರಿ, ಸಂಪ್ರದಾಯ, ಸಂಸ್ಕಾರ, ಸಂಸ್ಕೃತಿ ಹಾಗೂ ಜೀವನ ಶೈಲಿಯನ್ನು ಜಾನಪದದ ಮೂಲಕ ಹಾಡುತ್ತಿದ್ದರು. ಹಬ್ಬ, ಜಾತ್ರೆ, ಮದುವೆ, ಸಂಭ್ರಮ ಸೇರಿದಂತೆ ತಮ್ಮ ಬದುಕಿನ ಪ್ರತಿಯೊಂದು ಆಚರಣೆಗಳನ್ನು ಜಾನಪದ ಹಾಡುಗಳ ಮೂಲಕ ವಿವರಿಸುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ರಾಮಾಯಣ ಮತ್ತು ಮಹಾಭಾರತದ ಪಾತ್ರಗಳನ್ನು ಜಾನಪದದ ಮೂಲಕ ಹಾಡುತ್ತಿದ್ದರು. ಹಬ್ಬ ಮತ್ತು ಮದುವೆಯ ಸಂದರ್ಭದಲ್ಲಿ ಎಲ್ಲರೂ ಒಟ್ಟಾಗಿ ಸೇರಿದಾಗ ಜಾನಪದಕ್ಕೆ ಹಲವು ರೂಪ ನೀಡುತ್ತಿದ್ದರು. ಈ ಮೂಲಕ ಜಾನಪದ ಪ್ರತಿಯೊಬ್ಬರ ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆಯಿತು ಎಂದು ಹೇಳಿದರು.

ಆದರೆ ಶಾಲಾ–ಕಾಲೇಜಿನ ಶಿಕ್ಷಣ ಆರಂಭವಾದ ಮೇಲೆ ಜಾನಪದ ಮರೆಯಾಗುತ್ತಾ ಬಂದಿತು. ಪ್ರತಿಯೊಂದು ವಿಚಾರ ಪುಸ್ತಕಗಳ ರೂಪ ಪಡೆಯಿತು. ಶಿಕ್ಷಣಕ್ಕೆ ಇರುವ ಬದಲಾವಣೆಯ ಶಕ್ತಿಯನ್ನು ಇದು ತೋರಿಸುತ್ತದೆ ಎಂದು ತಿಳಿಸಿದರು.

ಕರಾವಳಿ ಪ್ರದೇಶದಲ್ಲಿರುವ ಯಕ್ಷಗಾನ ರಾತ್ರಿಯಿಂದ ಬೆಳಗ್ಗೆ ತನಕ ಪ್ರದರ್ಶನ ಕಾಣುತ್ತಿತ್ತು. ಆದರೆ ಈಗ ಕೇವಲ ಎರಡು ಗಂಟೆಯೊಳಗೆ ಯಕ್ಷಗಾನ ಪ್ರದರ್ಶನ ಮುಗಿಸುತ್ತಾರೆ. ಇಂತಹ ಸಂದರ್ಭದಲ್ಲಿ ಯಕ್ಷಗಾನ, ಜಾನಪದ, ಮೂಡಲಪಾಯ ಸೇರಿದಂತೆ ಹಲವು ದೇಶಿ ಕಲೆಗಳ ಉಳಿಯಬೇಕು. ನಮ್ಮ ಮುಂದಿನ ಪೀಳಿಗೆಗೂ ಇದರ ಮಹತ್ವ ತಿಳಿಯುವಂತಾಗಬೇಕು. ಈ ಕಾರ್ಯವನ್ನು ಕರ್ನಾಟಕ ಬಯಲಾಟ ಅಕಾಡೆಮಿ ಸೇರಿದಂತೆ ಹಲವು ಸಂಸ್ಥೆಗಳು ಮಾಡಬೇಕು ಎಂದು ಪ್ರೊ.ಲೋಕನಾಥ್ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಅಕಾಡೆಮಿ ಸದಸ್ಯ ಸಂಚಾಲಕಿ ಪ್ರೊ.ಹೆಚ್.ಆರ್.ಚೇತನ, ಜಾನಪದ ಸಂಸ್ಕೃತಿ ವಿಶ್ವವಿದ್ಯಾಲಯದಂತಿದ್ದು, ಇದರ ಬಗ್ಗೆ ಸಂಶೋಧನೆಗಳು ನಡೆಯಬೇಕು ಎಂದು ಹೇಳಿದರು.

ಅನಕ್ಷರಸ್ಥರಾದ ನಮ್ಮ ಕೃಷಿಕರು ಹಲವು ಗೀತೆಗಳನ್ನು ರಚಿಸಿದ್ದಾರೆ. ಕೃಷಿ ಕೆಲಸ ಮುಗಿದು, ಬಿಡುವಾದಾಗ ಜಾನಪದ ಗೀತೆಗಳನ್ನು ಹಾಡುತ್ತಿದ್ದರು. ಹಳ್ಳಿ ಸೊಗಡಿನ ಜಾನಪದ ಸರಳ ಕಲೆಯಾಗಿದೆ. ಜಾನಪದ, ಮೂಡಲಪಾಯ ಬಯಲಾಟ ಸೇರಿದಂತೆ ಹಲವು ಐತಿಹಾಸಿಕ ಕಲೆಗಳನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ ಎಂದು ಪ್ರೊ.ಚೇತನ ಅಭಿಪ್ರಾಯಪಟ್ಟರು.

ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್.ದುರ್ಗಾದಾಸ್, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ, ಆಡಳಿತಾಧಿಕಾರಿ ಪ್ರೊ.ಕೆ.ತಿಮ್ಮಯ್ಯ, ಜಾನಪದ ವಿಭಾಗದ ಪ್ರಾಧ್ಯಾಪಕ ಪ್ರೊ.ವಿಜಯಲಕ್ಷ್ಮಿ ಹಾಗೂ ಅರುಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವರಲ್ಲಿ ಸಿದ್ದರಾಮಯ್ಯ ಮನವಿ



ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಾಕಿ ಇರುವ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ನೀಡುವಂತೆ ಮನವಿ ಸಲ್ಲಿಸಿದರು.

ಬೆಂಗಳೂರು, ಏ.3(ಕೆಎಂಶಿ)– ಕುಡಿಯುವ ನೀರಿನ ಬವಣೆ ತಪ್ಪಿಸಿ ಸಾಮಾಜಿಕ–ಆರ್ಥಿಕ ಸ್ಥಿತಿ ಸುಧಾರಿಸಲು ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಒತ್ತಾಯಿಸಿದ್ದಾರೆ.

ದೆಹಲಿಯಲ್ಲಿ ಜಲಶಕ್ತಿ ಸಚಿವರನ್ನು ಭೇಟಿ ಮಾಡಿದ ಸಿಎಂ, ಬಾಕಿ ಇರುವ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ನೀಡುವಂತೆ ಮನವಿಪತ್ರ ಸಲ್ಲಿಸಿದರು. ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟುವಿನಲ್ಲಿ 67 ಟಿಎಂಸಿ ನೀರು ಸಂಗ್ರಹಣಾ ಸಾಮರ್ಥ್ಯದ ಜಲಾಶಯ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಯೋಜನೆ ಸಿದ್ಧಪಡಿಸಿದೆ. ಯೋಜನೆ ಅನುಷ್ಠಾನದಿಂದ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರದ ಜೊತೆಗೆ ಈ ಭಾಗದ ಸಾಮಾಜಿಕ–ಆರ್ಥಿಕ ಉನ್ನತಿಗೂ ಸಹಕಾರಿಯಾಗಲಿದೆ. ಎಲ್ಲಕ್ಕೂ ಮಿಗಿಲಾಗಿ ಮಳೆ ಕೊರತೆ ವರ್ಷಗಳಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡು ಪಾಲಿನ ನೀರನ್ನು ಬಿಳಿಗುಂಡ್ಲುವಿನ ಮಾಪನಕೇಂದ್ರದ ಮೂಲಕ ಹರಿಸಲು ಸಹಕಾರಿಯಾಗಲಿದೆ. ಈ ಯೋಜನೆಯಿಂದ ವಾರ್ಷಿಕ 400 ಮೆಗಾವ್ಯಾಟ್ ಜಲ ವಿದ್ಯುತ್ ಉತ್ಪಾದನೆ ಮಾಡಲು ಉದ್ದೇಶಿಸಲಾಗಿದೆ. ಮೇಕೆದಾಟು ಯೋಜನೆ ಅನುಷ್ಠಾನದಿಂದ ಕರ್ನಾಟಕಕ್ಕೆ ಮಾತ್ರವಲ್ಲದೆ, ತಮಿಳುನಾಡಿಗೂ ಲಾಭದಾಯಕವಾಗಲಿದೆ. ಯೋಜನೆ ರೂಪಿಸಿ ಕೆಲವು ವರ್ಷಗಳೇ ಕಳೆದಿವೆ. ಆದರೂ, ಕೇಂದ್ರ ಜಲ ಆಯೋಗದ ಅನುಮತಿ ದೊರೆತಿಲ್ಲ. ನೀವು ಜಲ ಆಯೋಗಕ್ಕೆ ನಿರ್ದೇಶನ ನೀಡಿ ಯೋಜನೆಗೆ ಅನುಮತಿ ದೊರಕಿಸಿಕೊಡುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ಅಹೋರಾತ್ರಿ ಧರಣಿಯಲ್ಲಿ ಮೈಸೂರಿನ ಬಿಜೆಪಿ ಮುಖಂಡರು ಭಾಗಿ...



ರಾಜ್ಯ ಕಾಂಗ್ರೆಸ್ ವಿರುದ್ಧ ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಅಹೋರಾತ್ರಿ ಧರಣಿಯಲ್ಲಿ ಮೈಸೂರಿನ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಈ ವೇಳೆ ಮಾಧ್ಯಮ ವಕ್ತಾರ ದೇವರಾಜ್, ಮೈಸೂರು ಮಹಾನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಸಹಕಾರ ಪ್ರಕೋಷ್ಠಕ ಶ್ರೀನಿವಾಸ್, ಮೈಸೂರು ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ, ರಮೇಶ್, ಲಕ್ಷ್ಮಣ್, ಉಪೇಂದ್ರ ಧರಣಿಯಲ್ಲಿ ಪಾಲ್ಗೊಂಡಿದ್ದರು.



ಎನ್.ಬಿ.ಮಂಜುಗೆ ಅಭಿನಂದನೆ...

ಮೈಸೂರು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರಾಗಿ ಆಯ್ಕೆಯಾದ ಎನ್.ಬಿ. ಮಂಜು ಅವರನ್ನು ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿದರು. ಈ ವೇಳೆ ಗ್ರಾಪಂ ಸದಸ್ಯ ಪಿ.ಮಹದೇವ, ಸಾಹುಕಾರ್‌ಹುಂಡಿ ಸಿ.ಗೋಪಾಲಗೌಡ, ನಗರ ಕಾಂಗ್ರೆಸ್ ಕಾರ್ಯದರ್ಶಿ ಹರೀಶ್‌ರೆಡ್ಡಿ ಇದ್ದರು.

ಕೃತಕ ಬುದ್ಧಿಮತ್ತೆಯಿಂದ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿ



ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಗಣಕ ವಿಜ್ಞಾನ ವಿಭಾಗದಿಂದ 'ಪರಂ'ಫೆಸ್ಟ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರು,ಏ.3–ಜೆಎಸ್‌ಎಸ್ ಮಹಿಳಾ ಕಾಲೇಜಿನ (ಸ್ವಾಯತ್ತ) ನವಜ್ಯೋತಿ ಸಭಾಂಗಣದಲ್ಲಿ ಗಣಕವಿಜ್ಞಾನ ವಿಭಾಗದಿಂದ 'ಪರಂ'ಫೆಸ್ಟ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರು ಇನ್ಫೋಸಿಸ್‌ನ ಸಹ ಉಪಾಧ್ಯಕ್ಷ ಮಹಾಲಿಂಗೇಶ್ವರ ಎಸ್ ಧಾದೆದ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬದಲಾದ ಜಗತ್ತಿನಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಕೃತಕ ಬುದ್ಧಿಮತ್ತೆ, ಚಾಟ್ GPT ಇಂದು ತುಂಬಾ ಅಗತ್ಯವಾಗಿವೆ. ಈ ಮುಂದುವರೆದ ತಂತ್ರಜ್ಞಾನದಿಂದ ವೈದ್ಯಕೀಯ ಕ್ಷೇತ್ರದಲ್ಲಿ ಗಂಭೀರ ಕಾಯಿಲೆಗಳನ್ನು ಪತ್ತೆ ಹಚ್ಚುವ ಮಟ್ಟಕ್ಕೆ ಕೃತಕ ಬುದ್ಧಿಮತ್ತೆ ಬೆಳೆದಿದೆ. ಈ ಕೃತಕ ಬುದ್ಧಿಮತ್ತೆಯಿಂದ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸ್ಟಾರ್ಟ್ ಅಪ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ಬೆಂಗಳೂರಿನಲ್ಲಿ 1.5 ಲಕ್ಷ ಸ್ಟಾರ್ಟ್ ಅಪ್ ಕಂಪನಿಗಳಿದ್ದು ವಿಶ್ವದಲ್ಲೇ ಬೆಂಗಳೂರು ಎರಡನೇ ಸ್ಥಾನದಲ್ಲಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಮಾತನಾಡಿ, ಬದಲಾವಣೆ ಜಗದ ನಿಯಮ ಬದಲಾಗುತ್ತಿರುವ ಈ ಜಗತ್ತಿನಲ್ಲಿ ಸಾಧಿಸುವುದು ಬಹಳ ಮುಖ್ಯ. ಸಾಧನೆ ಎಂಬುದು ತನ್ನಿಂದ ತಾನೇ ಬರುವಂತದ್ದಲ್ಲ ಕನಸು, ಗಮನ, ಪರಿಶ್ರಮ ಮತ್ತು ಕಾರ್ಯ ಈ ನಾಲ್ಕು ಅಂಶಗಳಿಂದ ಮಾತ್ರ ಸಾಧನೆ ಸಾಧ್ಯ. ಮಾತಿಗಿಂತ ಕೃತಿ ಲೇಸು ಎಂಬಂತೆ ಮೌನವಾಗಿ ಸಾಧಿಸಿ ಗುರಿ ಮುಟ್ಟಬೇಕು. ವಿದ್ಯಾರ್ಥಿಗಳು ಅಂಕಗಳನ್ನು ಪಡೆಯುವುದರ ಜೊತೆಗೆ ಜೀವನ ಕೌಶಲ ಮತ್ತು ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಅರ್ಪಣಾ ಮನೋಭಾವ ಮತ್ತು ಬದ್ಧತೆಯಿಂದ ಯಶಸ್ಸು ಸಾಧಿಸಲು ಸಾಧ್ಯ. ನಾವು ಓದುವ ಕಾಲಘಟ್ಟದಲ್ಲಿದ್ದ ಅನಾನುಕೂಲತೆಗಳು ಇಂದಿನ ವಿದ್ಯಾರ್ಥಿಗಳಿಗೆ ಇಲ್ಲ. ಆದ್ದರಿಂದ ಇಂದಿನ ವಿದ್ಯಾರ್ಥಿಗಳು ತಂತ್ರಜ್ಞಾನಗಳನ್ನು ಬಳಸಿಕೊಂಡು ಜ್ಞಾನ ಸಂಪಾದನೆ ಮಾಡಿಕೊಳ್ಳುವುದರ ಜೊತೆಗೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸೃಜನಾತ್ಮಕವಾಗಿ ತೊಡಗಿಸಿಕೊಂಡು ಯಶಸ್ಸನ್ನು ಸಾಧಿಸಬೇಕು ಎಂದರು. ಪ್ರಾಚಾರ್ಯ ಡಾ.ರೇಚಣ್ಣ, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಬಿ.ಧ್ರುವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಾದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಹಾಗೂ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ 'ಶುಲ್ಕ ವಿನಾಯಿತಿ' ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು https://ssp.postmatric. karnataka.gov.in/ ಮೂಲಕ ಅರ್ಜಿ ಸಲ್ಲಿಸಬೇಕು. ಸರ್ಕಾರಿ ಆದೇಶಗಳ ಮಾಹಿತಿಗಾಗಿ https://bcwd.karnataka.gov.in ಅಥವಾ ಸಹಾಯವಾಣಿ ಸಂ:8050770005, ಇಮೇಲ್ ವಿಳಾಸ bcwdhelpline@gmail.com ಅಥವಾ ದೂ.ಸಂ: 1902 ಸಂಪರ್ಕಿಸಿ.

ದೇಶ - ವಿದೇಶ

ಭಾರತದ ಮೇಲೆ ಶೇ.26ರಷ್ಟು ಪ್ರತಿ ಸುಂಕ ವಿಧಿಸಿದ ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕಕ್ಕೆ ಆಮದು ಮಾಡಿಕೊಳ್ಳುವ ಭಾರತ ಸೇರಿ ವಿವಿಧ ದೇಶಗಳ ಉತ್ಪನ್ನಗಳ ಮೇಲೆ ಸುಂಕ ವಿಧಿಸಿದ್ದಾರೆ. ಭಾರತದ ಮೇಲೆ ಅಮೆರಿಕವು ಶೇ.26ರಷ್ಟು ಪ್ರತಿ ಸುಂಕ ವಿಧಿಸಿದೆ. ಕಾಂಬೋಡಿಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ.49ರಷ್ಟು ಮತ್ತು ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ.34ರಷ್ಟು ಸುಂಕ ಘೋಷಿಸಲಾಗಿದೆ. ನಮ್ಮ ದೇಶವನ್ನು ಇತರ ದೇಶಗಳು ಲೂಟಿ ಮಾಡಿವೆ. ಅಮೆರಿಕದ ತೆರಿಗೆದಾರರು 50 ವರ್ಷಗಳಿಗೂ ಹೆಚ್ಚು ಕಾಲ ವಂಚನೆಗೊಳಗಾಗಿದ್ದಾರೆ. ಆದರೆ ಇದು ಇನ್ನು ಮುಂದೆ ಹಾಗಾಗುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಜಗತ್ತಿನ ವಿವಿಧ ದೇಶಗಳ ಮೇಲೆ ಹೆಚ್ಚು ಸುಂಕ ವಿಧಿಸುವ ಕ್ರಮ ಅಮೆರಿಕದ ಒಳಿತಿಗಾಗಿ ಮಾಡಿದ ನಿರ್ಧಾರ. ಭಾರಿ ಸುಂಕ ವಿಧಿಸುವ ತನ್ನ ಯೋಜನೆ ಅಮೆರಿಕದ ಒಳಿತಿಗಾಗಿ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ. ಆದರೆ ಅದೇ ಸುಂಕವನ್ನು ವಾಹನ ಬಿಡಿಭಾಗಗಳ ಮೇಲೂ ಘೋಷಿಸಿದ್ದಾರೆ. ಆಟೋಮೊಬೈಲ್‌ಗಳ ಮೇಲಿನ ಹೊಸ ಸುಂಕ ಏ.3ರಿಂದ ಮತ್ತು ಆಟೋ ಬಿಡಿಭಾಗಗಳು ಮೇ 3ರಿಂದ ಜಾರಿಗೆ ಬರಲಿವೆ.

ಆಟವಾಡುತ್ತಲೇ ಸ್ನೇಹಿತನನ್ನು ಚಾಕುವಿನಿಂದ ಇರಿದ ಬಾಲಕ



ಟೆಕ್ಸಾಸ್: ಟೆಕ್ಸಾಸ್‌ನ ಫ್ರಿಸ್ಕೋದಲ್ಲಿ ನಡೆದ ಯುಐಎಲ್ ಡಿಸ್ಟ್ರಿಕ್ಟ್ 11-5A ಚಾಂಪಿಯನ್‌ಶಿಪ್ ಟ್ರ್ಯಾಕ್ ಮೀಟ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳ ನಡುವೆ ನಡೆದ ಜಗಳವು ಓರ್ವನ ಕೊಲೆಯಲ್ಲಿ ಅಂತ್ಯವಾಗಿದೆ. ಘಟನೆಯಿಂದಾಗಿ ಟ್ರ್ಯಾಕ್ ಮೀಟ್ ಸ್ಪರ್ಧೆಯನ್ನು ರದ್ದುಗೊಳಿಸಲಾಗಿದ್ದು, 17 ವರ್ಷದ ಬಾಲಕನನ್ನು ಕೊಲೆ ಆರೋಪದ ಮೇಲೆ ಪೊಲೀಸರು ಬಂಧಿಸಿದ್ದಾರೆ. ಟೆಕ್ಸಾಸ್‌ನ ಫ್ರಿಸ್ಕೊದಲ್ಲಿರುವ ಡೆವಿಡ್ ಕಿರ್ಕೆಂಡಾಲ್ ಕ್ರೀಡಾಂಗಣದಲ್ಲಿ ನಡೆದ ಪ್ರೌಢಶಾಲಾ ಟ್ರ್ಯಾಕ್ ಮತ್ತು ಫೀಲ್ಡ್ ಮೀಟ್‌ನಲ್ಲಿ ಇಬ್ಬರು ಬಾಲಕರ ನಡುವೆ ವಾಗ್ವಾದ ನಡೆದಿದೆ. ಆಗ ಆರೋಪಿಯು ಮತ್ತೋರ್ವನ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದಾನೆ. ಚಾಕು ಇರಿತದಿಂದ ತೀವ್ರವಾಗಿ ಗಾಯಗೊಂಡ ಬಾಲಕ ಮೈದಾನದಲ್ಲೇ ತನ್ನ ಅವಳಿ ಸಹೋದರನ ತೋಳುಗಳಲ್ಲಿ ಪ್ರಾಣ ಬಿಟ್ಟಿದ್ದಾನೆ.

ಘಟನೆಯಿಂದ ಟ್ರ್ಯಾಕ್ ಮೀಟ್ ಸ್ಪರ್ಧಾಕೂಟದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದರಿಂದ ಶಾಲಾ ಆಡಳಿತ ಮಂಡಳಿಯು ಸ್ಪರ್ಧೆಯನ್ನು ರದ್ದುಗೊಳಿಸಿತು. ವಿಷಯ ತಿಳಿದ ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಆರೋಪಿ ಬಾಲಕನನ್ನು ಬಂಧಿಸಿದರು.

ರಷ್ಯಾದಲ್ಲಿ ಹರಡುತ್ತಿದೆ ನಿಗೂಢ ವೈರಸ್!



ಮಾಸ್ಕೋ: ರಷ್ಯಾದಲ್ಲಿ ನಿಗೂಢ ವೈರಸ್ ಹರಡುತ್ತಿದೆ ಎಂದು ಅನೇಕ ಮಾಧ್ಯಮ ವರದಿಗಳು ಮತ್ತು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು ಹೇಳಿವೆ. ಈ ವೈರಸ್ ಕೋವಿಡ್‌ನಷ್ಟೇ ಅಪಾಯಕಾರಿ ಮತ್ತು ಜನರು ಇದರಿಂದ ಬಾಧಿತರಾದಾಗ ಅವರಿಗೆ ತೀವ್ರ ಜ್ವರ ಬರುತ್ತದೆ ಮತ್ತು ಕೆಮ್ಮುವಾಗ ರಕ್ತಸ್ರಾವವಾಗುತ್ತದೆ. ಈ ವೈರಸ್ ಮೇಲೆ ಶಕ್ತಿಶಾಲಿ ಪ್ರತಿಜೀವಕಗಳು ಸಹ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಲಾಗಿತ್ತು. ಬ್ರಿಟಿಷ್ ವೆಬ್‌ಸೈಟ್ ಡೈಲಿ ಮೇಲ್‌ನ ವರದಿ ಪ್ರಕಾರ ರಷ್ಯಾದಲ್ಲಿ ಹೊಸ ಕೋವಿಡ್ ತರಹದ ವೈರಸ್ ಹರಡುವಿಕೆಯ ವರದಿಗಳು ಹಲವಾರು ದಿನಗಳಿಂದ ಹೊರಬರುತ್ತಿದ್ದವು. ನಂತರ ರಷ್ಯಾದ ಸಾರ್ವಜನಿಕ ಆರೋಗ್ಯ ಸಂಸ್ಥೆಯೇ ಈ ಬಗ್ಗೆ ಮಾಹಿತಿ ನೀಡಬೇಕಾಯಿತು. ನಿಗೂಢ ವೈರಸ್ ಹರಡುವಿಕೆಯ ವರದಿಗಳನ್ನು ಸಂಸ್ಥೆ ಸಂಪೂರ್ಣವಾಗಿ ತಿರಸ್ಕರಿಸಿದೆ ಮತ್ತು ರಷ್ಯಾದಲ್ಲಿ ಯಾವುದೇ ಹೊಸ ವೈರಸ್ ಹರಡುವಿಕೆಯನ್ನು ವದಂತಿ ಎಂದು ಬಣ್ಣಿಸಿದೆ.

ವಾಸ್ತವವಾಗಿ ರಷ್ಯಾದ ಮಹಿಳೆ ಹಲವಾರು ವಾರಗಳಿಂದ ತೀವ್ರ ಜ್ವರ ಮತ್ತು ಕೆಮ್ಮಿನಿಂದ ಬಳಲುತ್ತಿದ್ದರು ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್ ಹೇಳಿಕೊಂಡಿದೆ.

ಭಾರತದಲ್ಲಿ ನುರಿತ ಚಾಲಕರ ಕೊರತೆ ಇದೆ



ನವದೆಹಲಿ: ಭಾರತ 22 ಲಕ್ಷ ನುರಿತ ಚಾಲಕರ ಕೊರತೆಯನ್ನು ಎದುರಿಸುತ್ತಿದೆ ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಗುರುವಾರ ಲೋಕಸಭೆಗೆ ತಿಳಿಸಿದ್ದಾರೆ. ಅಲ್ಲದೆ ಚಾಲಕರಿಗೆ ಸೂಕ್ತ ತರಬೇತಿ ಸೌಲಭ್ಯಗಳ ಕೊರತೆಯು ಅನೇಕ ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ಒತ್ತಿ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ, ಚಾಲಕರಿಗೆ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ 4,500 ಕೋಟಿ ರೂ. ಯೋಜನೆ ಪ್ರಾರಂಭಿಸಿದೆ ಎಂದರು. ದೇಶದಲ್ಲಿ ಸೂಕ್ತ ಚಾಲನಾ ತರಬೇತಿ ಸೌಲಭ್ಯಗಳ ಕೊರತೆಯೂ ಇದೆ. ಇದು ಅನೇಕ ಅಪಘಾತಗಳು ಮತ್ತು ಸಾವುಗಳಿಗೆ ಕಾರಣವಾಗಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ದೇಶಾದ್ಯಂತ ಚಾಲನಾ ತರಬೇತಿ ಸಂಸ್ಥೆಗಳನ್ನು ಹಂತ ಹಂತವಾಗಿ ಸ್ಥಾಪಿಸಲು 4,500 ಕೋಟಿ ರೂ.ಗಳ ಯೋಜನೆ ಆರಂಭಿಸಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂತಹ 1,600 ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಇದರಿಂದ 60 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಗಡ್ಕರಿ ಹೇಳಿದರು.

ಮುಂಬೈನಲ್ಲಿ ಡ್ರೋನ್, ಹಾಟ್ ಏರ್ ಬಲೂನ್ ನಿಷೇಧ



ಮುಂಬೈ: ಯಾವುದೇ ವಿಧ್ವಂಸಕ ಕೃತ್ಯಗಳನ್ನು ತಡೆಗಟ್ಟಲು ಮುಂಬೈ ಪೊಲೀಸರು ಡ್ರೋನ್‌ಗಳು, ರಿಮೋಟ್–ನಿಯಂತ್ರಿತ ಮೈಕ್ರೋಲೈಟ್ ವಿಮಾನಗಳು, ಪ್ಯಾರಾ ಗ್ಲೈಡರ್‌ಗಳು ಮತ್ತು ಹಾಟ್ ಏರ್ ಬಲೂನ್ ಹಾರಿಸುವುದನ್ನು ಒಂದು ತಿಂಗಳ ಕಾಲ ನಿಷೇಧಿಸಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163ರ ಅಡಿಯಲ್ಲಿ ಹೊರಡಿಸಲಾದ ನಿಷೇಧಾಜ್ಞೆಯು ಏ.4ರಿಂದ ಮೇ 5ರವರೆಗೆ ಜಾರಿಯಲ್ಲಿರುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಆದೇಶದ ಪ್ರಕಾರ ಭಯೋತ್ಪಾದಕರು ಮತ್ತು ಸಮಾಜ ವಿರೋಧಿ ಶಕ್ತಿಗಳು ತಮ್ಮ ದಾಳಿಗೆ ಡ್ರೋನ್‌ಗಳು, ರಿಮೋಟ್–ನಿಯಂತ್ರಿತ ಮೈಕ್ರೋಲೈಟ್ ವಿಮಾನಗಳು, ಪ್ಯಾರಾ ಗ್ಲೈಡರ್‌ಗಳನ್ನು ಬಳಸಬಹುದು ಮತ್ತು ವಿವಿಐಪಿಗಳನ್ನು ಗುರಿಯಾಗಿಸಬಹುದು ಅಥವಾ ಜನರ ಜೀವಕ್ಕೆ ಅಪಾಯವನ್ನುಂಟು ಮಾಡಬಹುದು. ಅಲ್ಲದೆ ಸಾರ್ವಜನಿಕ ಆಸ್ತಿಯನ್ನು ನಾಶಪಡಿಸಬಹುದು. ಈ ಮೂಲಕ ಮುಂಬೈ ಪೊಲೀಸ್ ಕಮಿಷನರೇಟ್ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರಬಹುದು.

ಮೈಸೂರು ಮಿತ್ರ | ಶುಕ್ರವಾರ 4 ಏಪ್ರಿಲ್ 2025

ಹಂತ ಹಂತವಾಗಿ ಕೊಡಗಿನ 23 ಪ್ರವಾಸಿತಾಣಗಳ ಅಭಿವೃದ್ಧಿ

29 ಮಾರ್ಗದರ್ಶಿಗಳಿಗೆ ತರಬೇತಿ, ಕೊಡಗಿನ ಕಿತ್ತಳೆ, ಜೇನು, ಸಾಂಬಾರ ಪದಾರ್ಥಗಳ ಮಾರಾಟಕ್ಕೆ ಕ್ರಮ

ಮಡಿಕೇರಿ,ಏ.3– ಪ್ರವಾಸೋದ್ಯಮದ 2024–25ನೇ ಸಾಲಿನ ಕಾರ್ಯ ಯೋಜನೆಯಡಿ ಕೊಡಗಿನ 23 ಪ್ರವಾಸಿತಾಣಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತದೆ ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕಿ ಅನಿತಾ ಭಾಸ್ಕರ್ ಮಾಹಿತಿ ನೀಡಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಸಾಧ್ಯತೆಗಳ ಕುರಿತು ಕೊಡಗು ಪತ್ರಕರ್ತರ ಸಂಘದಿಂದ ನಗರದ ಪ್ರವಾಸೋದ್ಯಮ ಇಲಾಖಾ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಸಂವಾದ'ದಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಗುರುತಿಸಲಾಗಿರುವ 23 ಪ್ರವಾಸಿ ಕೇಂದ್ರಗಳಲ್ಲಿ ಆರಂಭಿಕ ಹಂತವಾಗಿ ಇಂದು 6 ಪ್ರವಾಸಿ ಕೇಂದ್ರಗಳ ಅಭಿವೃದ್ಧಿಯ ವಿಸ್ತೃತ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಜಿಲ್ಲೆಗೆ ಸೀಮಿತವಾಗಿ 29 ಆಸಕ್ತ ಮಾರ್ಗದರ್ಶಿಗಳನ್ನು ಅಗತ್ಯ ತರಬೇತಿಯೊಂದಿಗೆ ಸಜ್ಜುಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದರು.

ಸಂಸ್ಕೃತಿ ನಿರೀಕ್ಷಿಸುವ ಪ್ರವಾಸಿಗರು: ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರು ಅಲ್ಲಿನ ಆತಿಥ್ಯಗಳೊಂದಿಗೆ, ಆಯಾ ಪ್ರದೇಶದ ಸಂಸ್ಕೃತಿ, ಕಲೆಯನ್ನು ಆಸ್ವಾದಿಸಲು ಬಯಸುತ್ತಾರೆ. ಈ ಹಿನ್ನೆಲೆ ಕೊಡಗಿನ ಪ್ರವಾಸೋದ್ಯಮಕ್ಕೆ ಪೂರಕವಾಗಿ, ಪ್ರವಾಸಿಗರ ನಿರೀಕ್ಷೆಗಳಿಗೆ ತಕ್ಕಂತೆ ಅವರಿಗೆ ಇಲ್ಲಿನ ಸಂಸ್ಕೃತಿಯ ಸೊಬಗಿನ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಹಾಗೂ ಇಲ್ಲಿನ ವಿಶಿಷ್ಟ ಖಾದ್ಯ ಪದಾರ್ಥಗಳ ಬಗ್ಗೆ ಅಗತ್ಯ ತರಬೇತಿಯನ್ನು ನೀಡುವುದು ಪ್ರವಾಸೋದ್ಯಮ ಇಲಾಖೆಯ ಕಾರ್ಯಯೋಜನೆಗಳಲ್ಲಿ ಅಡಕವಾಗಿದೆ ಎಂದು ಹೇಳಿದರು.

ಸಾರ್ವಜನಿಕ ಸಹಭಾಗಿತ್ವ: ಪ್ರವಾಸಿ ತಾಣಗಳ ಅಭಿವೃದ್ಧಿಯೊಂದಿಗೆ, ಪ್ರವಾಸಿ ಕೇಂದ್ರಗಳ ಬಳಿಯಲ್ಲಿ ಜಾಗವನ್ನು ಹೊಂದಿಕೊಂಡಿರುವವರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ಅಲ್ಲಿ ಪ್ರವಾಸಿಗರಿಗೆ ಪೂರಕವಾದ ಉದ್ಯಾನವನ, ಶೌಚಾಲಯ ನಿರ್ಮಾಣದಂತಹ ಮೂಲಸೌಲಭ್ಯ ಒದಗಿಸುವುದು ಇಲಾಖೆಯ ಉದ್ದೇಶವಾಗಿದೆ. ಆ ಮೂಲಕ ಸಮುದಾಯವನ್ನು ಪ್ರವಾಸೋದ್ಯಮದೊಂದಿಗೆ ಬೆಸೆದು ಪ್ರವಾಸೋದ್ಯಮದ ಅಭಿವೃದ್ಧಿಯನ್ನು ಕಾಣುವುದು ಪ್ರವಾಸೋದ್ಯಮ ಕಾರ್ಯಯೋಜನೆಯ ಭಾಗವಾಗಿದೆ ಎಂದು ತಿಳಿಸಿದರು.

ಕೊಡಗಿನ ಕಿತ್ತಳೆ ಕೇಂದ್ರದ ಚಿಂತನೆ: ಯಾವುದೇ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ತೆರಳುವಾಗ, ಆಯಾ ಪ್ರದೇಶದ ವಿಶಿಷ್ಟವಾದ ಯಾವುದೇ ವಸ್ತುವನ್ನು ಪಡೆಯುವ ಆಸಕ್ತಿ ತೋರುತ್ತಾರೆ. ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರು ಇಲ್ಲಿನ ಕಿತ್ತಳೆಯನ್ನು ಕೇಳುತ್ತಾರೆ. ಆದರೆ ಲಭ್ಯತೆ ಇಲ್ಲದ ಕೊರತೆ ಪ್ರಮುಖವಾಗಿ ಕಾಣುತ್ತದೆ. ಈ ಹಿನ್ನೆಲೆ ಕಿತ್ತಳೆ ಕೇಂದ್ರ ಮಡಿಕೇರಿ ರಾಜಾಸೀಟು ಬಳಿ ಕೂರ್ಗ್ ವಿಲೇಜ್‌ನಲ್ಲಿ ಇಂತಹ ಕಿತ್ತಳೆ ಹಣ್ಣಿನ ಮಳಿಗೆಯನ್ನು ತೆರೆಯುವಂತಾಗಬೇಕು. ಇದರೊಂದಿಗೆ ಕೊಡಗಿನ ಜೇನು, ಇಲ್ಲಿನ ಸಂಬಾರ ಪದಾರ್ಥಗಳು ದೊರಕುವಂತೆ ಮಾಡುವ ಅಗತ್ಯವಿದ್ದು, ಆ ನಿಟ್ಟಿನ ಪ್ರಯತ್ನಗಳನ್ನು ಇಲಾಖೆ ಮೂಲಕ ಮಾಡಲಾಗುತ್ತಿದೆ ಎಂದು ಹೇಳಿದರು.

ಮಾಂದಲ್‌ಪಟ್ಟಿ ಜಂಕ್ಷನ್ ಅಭಿವೃದ್ಧಿ: ಕೊಡಗಿನ ಗಾಳಿಬೀಡು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರಸಿದ್ಧ ಪ್ರವಾಸಿ ತಾಣ ಮಂದಲ್ ಪಟ್ಟಿ ಅರಣ್ಯ ಇಲಾಖಾ ವ್ಯಾಪ್ತಿಗೆ ಬರುತ್ತದೆ. ಅಲ್ಲಿಗೆ ತೆರಳುವ ಜಂಕ್ಷನ್ ಬಳಿ ಪ್ರವಾಸೋದ್ಯಮಕ್ಕೆ ಪೂರಕವಾಗಿ 1.62 ಕೋಟಿ ವೆಚ್ಚದ ಅಭಿವೃದ್ಧಿಯ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತಿದೆ. ಕ್ಷೇತ್ರದ ಶಾಸಕರ ಸಹಕಾರದೊಂದಿಗೆ ರಸ್ತೆಗಳ ಅಭಿವೃದ್ಧಿಗೂ ಪ್ರಯತ್ನಗಳು ನಡೆಯುತ್ತಿದೆ ಎಂದು ಹೇಳಿದರು.

ಸಂವಾದದಲ್ಲಿ ಪಾಲ್ಗೊಂಡು ಇಲಾಖಾ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ನೀಡಿದ ಅನಿತಾ ಭಾಸ್ಕರ್ ಅವರಿಗೆ ಕೊಡಗು ಪತ್ರಕರ್ತರ ಸಂಘದ ಪರವಾಗಿ ಶಕ್ತಿ ಪತ್ರಿಕೆಯ ಸಂಪಾದಕರಾದ ಜಿ.ಚಿದ್ವಿಲಾಸ್ ಅವರು ಅಭಿನಂದನಾ ಪತ್ರವನ್ನು ನೀಡಿ ಗೌರವಿಸಿದರು. ಸಂವಾದದಲ್ಲಿ ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ, ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ ಸೇರಿದಂತೆ ವಿವಿಧ ಪತ್ರಿಕಾ ಮಾಧ್ಯಮಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಪ್ರವಾಸೋದ್ಯಮ ಇಲಾಖಾ ಉಪ ನಿರ್ದೇಶಕಿ ಅನಿತಾ ಭಾಸ್ಕರ್ ಮಾಹಿತಿ ನೀಡುತ್ತಿರುವುದು.

"ಕಳೆದ 2024ನೇ ಸಾಲಿನಲ್ಲಿ ಕೊಡಗಿಗೆ 45.72 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. 2023ರಲ್ಲಿ ಈ ಸಂಖ್ಯೆ 43.69 ಲಕ್ಷಗಳಾಗಿತ್ತು. ಕೊಡಗಿನ ಬಹುಪಾಲು ಹೋಂ ಸ್ಟೇಗಳ ಹೆಸರು ಆತ್ಯಾಕರ್ಷಕವಾಗಿ ಗಮನ ಸೆಳೆಯುತ್ತದೆ. ಇಂತಹ ಹೆಸರಿನೊಂದಿಗೆ 'ಕೊಡಗನ್ನು ಸ್ವಚ್ಛವಾಗಿರಿಸಿಕೊಳ್ಳಿ', 'ಪ್ಲಾಸ್ಟಿಕ್ ಬಳಕೆ ಬೇಡ' ಎಂದು ಪ್ರವಾಸಿಗರನ್ನು ಜಾಗೃತಗೊಳಿಸುವ ಪ್ರಯತ್ನಗಳನ್ನು ಮಾಡಬೇಕಿದೆ.

–ಅನಿತಾ ಭಾಸ್ಕರ್, ಡಿ.ಡಿ. ಪ್ರವಾಸೋದ್ಯಮ ಇಲಾಖೆ

ಕೋಟಿ ವೆಚ್ಚದ ಅಭಿವೃದ್ಧಿ

ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ಸಹಕಾರದೊಂದಿಗೆ 1 ಕೋಟಿ ರೂ. ವೆಚ್ಚದಲ್ಲಿ ಪ್ರವಾಸಿ ಕೇಂದ್ರಗಳಾದ ಅಬ್ಬಿಫಾಲ್ಸ್, ಬರಪೊಳೆ, ಹೊನ್ನಮ್ಮನ ಕೆರೆ, ರಾಜಾಸೀಟನ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರವಾಸಿ ಕೇಂದ್ರಗಳ ಅಭಿವೃದ್ಧಿಯ ಪ್ರಯತ್ನಗಳ ನಡುವೆಯೇ ಹೊನ್ನಮ್ಮನ ಕೆರೆಯಲ್ಲಿ ಜಲ ಕ್ರೀಡೆಗಳ ಆಯೋಜನೆ, ಪೊನ್ನಂಪೇಟೆಯಲ್ಲಿ 'ಕಯಾಕಿಂಗ್' ಮೊದಲಾದ ಸಾಹಸ ಕ್ರೀಡೆಗಳನ್ನು ಪ್ರವಾಸಿಗರ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯರೂಪಕ್ಕೆ ತರುವ ಉದ್ದೇಶವಿರುವುದಾಗಿ ತಿಳಿಸಿದರು.

ಮುದ್ದಂಡ ಕಪ್ ಹಾಕಿ ನಮ್ಮೆಯಲ್ಲಿ ಭುವನ್ ಪೊನ್ನಣ್ಣ, ಹರ್ಷಿಕಾ ಪೂಣಚ್ಚ ಭಾಗಿ



ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದ ಚಲನಚಿತ್ರ ತಾರೆಯರು.

ಮಡಿಕೇರಿ,ಏ.3– ಪ್ರತಿಷ್ಠಿತ ಮುದ್ದಂಡ ಕಪ್ ಹಾಕಿ ನಮ್ಮೆಯ ಏ.3ರಂದು ಆಯೋಜಿಸಿದ ಪಂದ್ಯಾಟದಲ್ಲಿ ಉಳ್ಳಿಯಡ ತಂಡ ಪರವಾಗಿ ಆಟವಾಡಲು ಸ್ಯಾಂಡಲ್‌ವುಡ್ ನಟರಾದ ಉಳ್ಳಿಯಡ ಭುವನ್ ಪೊನ್ನಣ್ಣ ಚಿತ್ರ ನಟಿ ಹರ್ಷಿಕಾ ಪೂಣಚ್ಚ ಅವರುಗಳು ಮೈದಾನಕ್ಕಿಳಿದಿದ್ದರು.

ಹಾಕಿ ನಮ್ಮೆಯ 3ನೇ ಮೈದಾನವಾದ ಪೊಲೀಸ್ ಕವಾಯತು ಮೈದಾನದಲ್ಲಿ ಉಳ್ಳಿಯಡ ಡಾಟಿ ಪೂವಯ್ಯ ಜರ್ಸಿ ನಂಬರ್ 13ರಲ್ಲಿ ಕಾಣಿಸಿಕೊಂಡರೆ ಭುವನ್ ಪೊನ್ನಣ್ಣ ನಂ.6, ಹರ್ಷಿಕಾ ಪೂಣಚ್ಚ ನಂ.14, ಭುವನ್ ಪೊನ್ನಣ್ಣ ಅವರ ಸಹೋದರ ಉಳ್ಳಿಯಡ ರಾಘವ್ ಮಂದಣ್ಣ ನಂ.7 ಮತ್ತು ಅವರ ಪತ್ನಿ ಶಿಲ್ಪ ಪೂವಮ್ಮ ಅವರು ನಂ.12ರ ಜರ್ಸಿಯಲ್ಲಿ ಕಂಡುಬಂದರು. ತೋಲಂಡ ಮತ್ತು ಉಳ್ಳಿಯಡ ತಂಡಗಳ ನಡುವೆ ಪಂದ್ಯಾಟ ನಡೆಯಬೇಕಿತ್ತು. ಆದರೆ ತೋಲಂಡ ತಂಡ ಮೈದಾನಕ್ಕೆ ಬಾರದ ಹಿನ್ನೆಲೆಯಲ್ಲಿ 'ವಾಕ್ ಓವರ್' ಮೂಲಕ ಉಳ್ಳಿಯಡ ತಂಡ ಮುಂದಿನ ಹಂತಕ್ಕೆ ಅರ್ಹತೆ ಪಡೆಯಿತು. ಉಳ್ಳಿಯಡ ತಂಡವನ್ನು 3 ಮಂದಿ ಮಹಿಳಾ ಪಟುಗಳು ಪ್ರತಿನಿಧಿಸಿದ್ದು ವಿಶೇಷವಾಗಿತ್ತು.

ಸಂಚಾರಿ ನಿಯಮ ಪಾಲಿಸದ ಬೈಕ್ ಸವಾರನಿಗೆ 23,500 ರೂ. ದಂಡ

ಮಡಿಕೇರಿ,ಏ.3– ಸಂಚಾರಿ ನಿಯಮ ಮತ್ತು ಮೋಟಾರು ಕಾಯಿದೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರಪೇಟೆಯ ಸಿ.ಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ದ್ವಿಚಕ್ರ ವಾಹನ ಸವಾರನಿಗೆ 23,500 ರೂ. ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ. ಸೋಮವಾರಪೇಟೆ ಕಲ್ಕಂದೂರು ನಿವಾಸಿ ಅಬ್ದುಲ್ ಅಝೀಜ್ ಅವರ ಪುತ್ರ ಮಹಮ್ಮದ್ ರಮೀಜ್ ಕೆ.ಎ.ಎಂಬಾತ ಪೊಲೀಸರ ಪರಿಶೀಲನೆ ವೇಳೆ ದಾಖಲಾತಿಗಳನ್ನು ಹಾಜರುಪಡಿಸದೆ, ಕರ್ಕಶ ಸೈಲೆನ್ಸರ್ ಅಳವಡಿಸಿಕೊಂಡು ತಿರುಗಾಡುತ್ತಿರುವುದು ಕಂಡು ಬಂದಿತ್ತು. ಮಾತ್ರವಲ್ಲದೇ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನವನ್ನು ಅಪಾಯಕಾರಿಯಾಗಿ ಚಲಾಯಿಸುತ್ತಿರುವುದು, ವಾಹನದಲ್ಲಿ ಡಿಫೆಕ್ಟಿವ್ ನಂಬರ್ ಪ್ಲೇಟ್ ಅಳವಡಿಸಿರುವುದು ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸೋಮವಾರಪೇಟೆ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಗೋಪಾಲಕೃಷ್ಣ ಅವರು ಗುರುವಾರ ರೂ.23,500 ದಂಡ ವಿಧಿಸಿ ಎಚ್ಚರಿಕೆ ನೀಡಿದ್ದಾರೆ.

ನಾಳೆ ಡಾ.ಬಾಬು ಜಗಜೀವನ್ ರಾಮ್ ಜಯಂತಿ



ಮಡಿಕೇರಿ ಏ.3– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಮ್ ಅವರ 118ನೇ ಜನ್ಮ ದಿನಾಚರಣೆಯು ಏ.5 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಕಬಡ್ಡಿ ಪ್ರೀಮಿಯರ್ ಲೀಗ್‌ಗೆ ಚಾಲನೆ



'ರಾಮನಗರ ಫ್ರೆಂಡ್ಸ್' ಆಶ್ರಯದಲ್ಲಿ ಆಯೋಜಿಸಲಾಗಿದ್ದ ಮೂರನೇ ವರ್ಷದ ಕಬಡ್ಡಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ವಿರಾಜಪೇಟೆ, ಏ.3– ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರದಿಂದ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ಕೊಡಗು–ಮೈಸೂರು ಸಂಸದ ಯದುವೀರ್ ಒಡೆಯರ್ ಹೇಳಿದರು.

ವಿರಾಜಪೇಟೆ ಸಮೀಪದ ಹೆಗ್ಗಳ ರಾಮನಗರದ ಮೈದಾನದಲ್ಲಿ 'ರಾಮನಗರ ಫ್ರೆಂಡ್ಸ್' ಆಶ್ರಯದಲ್ಲಿ ಆಯೋಜಿಸಲಾಗಿದ್ದ ಮೂರನೇ ವರ್ಷದ ಕಬಡ್ಡಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಹೆಚ್ಚು ಅಭಿವೃದ್ಧಿಗೊಳಿಸುವಂತೆ ಜಲಜೀವನ್ ಮಿಷನ್ ಯೋಜನೆಯಲ್ಲಿ ಪ್ರತಿ ಮನೆಗಳಿಗೂ ನಲ್ಲಿ ನೀರಿನ ಯೋಜನೆ. ಕ್ರೀಡೆಗಳಿಗೆ ಪ್ರೋತ್ಸಾಹ ಸೇರಿದಂತೆ ಗ್ರಾಮೀಣ ಭಾಗದ ಜನರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ, ಎಲೆ ಮರೆಯ ಕಾಯಿಯಂತಿರುವ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಸರ್ಕಾರದ ಯೋಜನೆಯ ಸೌಲಭ್ಯಗಳು ದೊರಕುವಂತಾಗಬೇಕು. ಗ್ರಾಮೀಣ ಭಾಗದಲ್ಲಿ ಅನೇಕ ಪ್ರತಿಭೆಗಳಿದ್ದು ಅವರಿಗೆ ಪ್ರೋತ್ಸಾಹ ನೀಡುವಂತಾದಾಗ ಮಾತ್ರ ಗ್ರಾಮೀಣ ಭಾಗದಿಂದ ತಾಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿಯು ಭಾಗವಹಿಸುವಂತಾಗಬೇಕು. ಕ್ರೀಡಾಪಟುಗಳು ಗುರಿ ಮುಟ್ಟುವಂತ ಛಲ ಇರಬೇಕು. ಯಾರೂ ಅವಕಾಶಗಳಿಂದ ವಂಚಿತರಾಗಬಾರದು ಎಂದು ಶುಭ ಹಾರೈಸಿದರು.

ವಿರಾಜಪೇಟೆ ವಿನಾಯಕ ಟ್ರಾವಲ್ಸ್‌ನ ಹೇಮಂತ್, ರಾಮನಗರ ಕ್ರೀಡಾಕೂಟದ ಅಧ್ಯಕ್ಷ ವಿಜು, ಧನೇಶ್, ಲವೀಶ್, ವಿಷ್ಣು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ರಾಹುಲ್ ನಿರೂಪಿಸಿದರು.

ಕೊಡಗು ಎಸ್ಪಿ ಕಚೇರಿಯ ಮುಖ್ಯಪೇದೆಗೆ ಮುಖ್ಯಮಂತ್ರಿ ಪದಕ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಪದಕ ಸ್ವೀಕರಿಸುತ್ತಿರುವ ರಾಜೇಶ್.

ಮಡಿಕೇರಿ,ಏ.3– ಕೊಡಗು ಜಿಲ್ಲಾ ಪೊಲೀಸ್ ಕಚೇರಿಯ ತಾಂತ್ರಿಕ ವಿಭಾಗದ ಹೆಡ್ ಕಾನ್ಸ್‌ಟೇಬಲ್ ಸಿ.ಕೆ. ರಾಜೇಶ್ ಅವರಿಗೆ ಮುಖ್ಯಮಂತ್ರಿ ಪದಕ ಲಭಿಸಿದೆ.

2002ರಲ್ಲಿ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡು ಇಲಾಖೆಯಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ್ದು ಉತ್ತಮ ಸೇವೆಗಾಗಿ ರಾಜೇಶ್ ಅವರಿಗೆ 2016ರಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರಶಸ್ತಿ ದೊರಕಿದೆ. ಜಿಲ್ಲೆ, ಹೊರ ಜಿಲ್ಲೆಯ ಹಾಗೂ ಹೊರ ರಾಜ್ಯದ ಹಲವಾರು ಕ್ಲಿಷ್ಟಕರವಾದ ಪ್ರಕರಣಗಳನ್ನು ಭೇದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಇವರ ಉತ್ತಮ ಮತ್ತು ದಕ್ಷತೆಯ ಕರ್ತವ್ಯ ನಿರ್ವಹಣೆಗಾಗಿ ರಾಜ್ಯದ ಮುಖ್ಯಮಂತ್ರಿಗಳ ಪ್ರತಿಷ್ಠಿತ ಚಿನ್ನದ ಪದಕವನ್ನು ಪಡೆದಿದ್ದಾರೆ.

ಹಳ್ಳಕ್ಕೆ ಬಿದ್ದ ಕಾರು: ತಪ್ಪಿದ ಅನಾಹುತ



ಗುಂಡ್ಲುಪೇಟೆ ತಾಲೂಕಿನ ತಗ್ಗಲೂರು ಗೇಟ್ ಬಳಿ ಸೇತುವೆ ಹಳ್ಳಕ್ಕೆ ಇನ್ನೋವ ಕಾರು ಬಿದ್ದಿರುವುದು.

ಬೇಗೂರು : ಬೈಕ್‌ಗೆ ಡಿಕ್ಕಿ ಹೊಡೆಯುದನ್ನು ತಪ್ಪಿಸಲೋದ ಕಾರು ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಬಿದ್ದು ಭಾರಿ ಅನಾಹುತ ತಪ್ಪಿದ ಘಟನೆ ಬೇಗೂರು ಸಮೀಪದ ತಗ್ಗಲೂರು ಗೇಟ್ ಬಳಿ ನಡೆದಿದೆ.

ಇನ್ನೋವಾ ಕಾರು (ಕೆಎ03 ಎನ್‌ಎಚ್ 2630) ಬೆಂಗಳೂರಿನಿಂದ ಊಟಿಗೆ ಕುಟುಂಬ ಸಮೇತವಾಗಿ ಪ್ರವಾಸಕ್ಕೆ ತೆರಳುತ್ತಿದ್ದಾಗ ತಗ್ಗಲೂರು ಗೇಟ್ ಬಳಿ ಬೈಕ್ (ಕೆಎ26 ಇಎ 5486) ದಿಢೀರ್ ಅಡ್ಡ ಬಂದಾಗ ಕಾರು ನಿಯಂತ್ರಣ ತಪ್ಪಿ ಸೇತುವೆ ಹಳ್ಳಕ್ಕೆ ಬಿದ್ದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಕಾರಿನಲ್ಲಿದ್ದ ರಿಯಾಜ್, ಸುಲ್ತಾನ,ಕೌಶಿಕ್, ಮಹಮ್ಮದ್ ರಿಯಾಜ್, ಹನೀಫ್, ಪಾತಿಯ ಹಾಗೂ ಬೈಕ್ ಸವಾರ ಸುರೇಶ್ ಅವರಿಗೆ ಸಣ್ಣ ಪುಟ್ಟ ಗಾಯವಾಗಿದೆ. ಕಾರು ಹಳ್ಳಕ್ಕೆ ಬಿದ್ದರೂ ಪ್ರಾಣಾಪಾಯವಾಗಿಲ್ಲ.

ನೀರಿನಲ್ಲಿ ಮುಳುಗಿ ಯುವಕ ಸಾವು



ಕೊಳ್ಳೇಗಾಲ, ಏ.3– ತಾಲೂಕಿನ ಶಿವನಸಮುದ್ರ ವೆಸ್ಲಿ ಸೇತುವೆ ಬಳಿ ಈಜಲು ತೆರಳಿದ್ದ ಯುವಕನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ದುರಂತ ಗುರುವಾರ ಜರುಗಿದೆ. ಬೆಂಗಳೂರಿನ ಜೆ.ಪಿ.ನಗರ ಶಾಹಿಲ್ ಪಾಷ(23) ಮೃತ ದುರ್ದೈವಿ. ಈತ ಕುಟುಂಬ ಸಮೇತ ಊಟಿಗೆ ತೆರಳಲು ಆಗಮಿಸಿ ಮಾರ್ಗಮಧ್ಯೆ ಶಿವನಸಮುದ್ರ ದರ್ಗಾಕ್ಕೆ ಭೇಟಿ ನೀಡಿದ್ದ ವೇಳೆ ವೆಸ್ಲಿ ಸೇತುವೆ ಬಳಿ ಈಜಲು ತೆರಳಿದ್ದಾಗ ಈ ದುರಂತ ಸಂಭವಿಸಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಶವಪರೀಕ್ಷೆ ನಂತರ ಮೃತನ ವಾರಸುದಾರರಿಗೆ ಒಪ್ಪಿಸಲಾಯಿತು

ಸಿಡಿಮದ್ದು ಕಚ್ಚಿದ ಕರಡಿ ಬಲಿ



ತೆಳ್ಳನೂರು ಸಮೀಪದಲ್ಲಿ ಸಿಡಿಮದ್ದು ಸಿಡಿದು ಸಾವನ್ನಪ್ಪಿರುವ ಕರಡಿ.

ಕೊಳ್ಳೇಗಾಲ, ಏ.3– ತಾಲೂಕಿನ ತೆಳ್ಳನೂರು ಗ್ರಾಮದ ಅರಣ್ಯ ಪ್ರದೇಶದ ಸಮೀಪದಲ್ಲಿ ಸುಮಾರು ಆರು ವರುಷದ ಗಂಡು ಕರಡಿಯೊಂದು ಕಿಡಿಗೇಡಿಗಳು ಇರಿಸಿದ್ದ ಸಿಡಿಮದ್ದು ತಿಂದು ಸಾವಿಗೀಡಾಗಿರುವ ದುರಂತ ಘಟನೆ ಜರುಗಿದೆ.

ವಿಚಾರ ತಿಳಿದು ಸ್ಥಳಕ್ಕೆ ತೆರಳಿದ್ದ ಡಿಸಿಎಫ್ ಸುರೇಂದ್ರ, ಎಸಿಎಫ್ ಮರಿಸ್ವಾಮಿ, ಆರ್‌ಎಫ್‌ಓ ಸುಂದರ್ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಚಲುವರಾಜ್ ಹಾಗೂ ಸಿಬ್ಬಂದಿಗಳು ತೆರಳಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಹೆಚ್ಚಿನ ಮಾಹಿತಿ ಕಲೆ ಹಾಕಿದ್ದಾರೆ ಎನ್ನಲಾಗಿದೆ

ಈ ಸಂಬಂಧ ಅರಣ್ಯ ಇಲಾಖಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ಸಿಡಿಮದ್ದು ಇಟ್ಟ ಕಿಡಿಗೇಡಿಗಳ ಪತ್ತೆಗಾಗಿ ಮುಂದಿನ ಕ್ರಮ ಕೈಗೊಂಡಿದ್ದು ಸಿಡಿಮದ್ದು ತಿಂದು ಬಲಿಯಾದ ಮೃತ ಕರಡಿ ಮರಣೋತ್ತರ ಪರೀಕ್ಷೆಯನ್ನು ಪಶು ವೈದ್ಯಾಧಿಗಳಿಂದ ನೆರವೇರಿಸಿದ ಬಳಿಕ ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ದೇವರ ದಾಸಿಮಯ್ಯರ ತತ್ವಾದರ್ಶಗಳನ್ನು ರೂಢಿಸಿಕೊಳ್ಳಿ

ಕೊಳ್ಳೇಗಾಲ, ಏ.3– ದೇವರ ದಾಸಿಮಯ್ಯ ಅವರು ತಮ್ಮ ಅನೇಕ ವಚನಗಳ ಮೂಲಕ ಜೀವನಕ್ಕೆ ಅಗತ್ಯವಿರುವ ಸಂದೇಶಗಳನ್ನು ಸಾರಿ ಹೇಳಿದ್ದು ಯುವ ಪೀಳಿಗೆ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು. ಪಟ್ಟಣದಲ್ಲಿ ದೇವರ ದಾಸೀಮಯ್ಯ ಜಯಂತಿ ಹಿನ್ನೆಲೆ ದೇವರ ದಾಸಿಮಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ ನೆರವೇರಿಸಿ ಮಾತನಾಡಿ, ಶರಣರು, ಮಹನೀಯರು ತಮ್ಮ ಜೀವನದುದ್ದಕ್ಕೂ ಅನೇಕ ಸಂದೇಶಗಳನ್ನು ರವಾನಿಸಿದ್ದಾರೆ ಎಂದರು.

ಬಂಡೀಪುರದಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ಬೇಡ

ಚಾ.ನಗರದಲ್ಲಿ ರೈತರ ಪ್ರತಿಭಟನೆ



ಚಾಮರಾಜನಗರ ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸುತ್ತಿರುವ ರೈತರು.

ಚಾಮರಾಜನಗರ, ಏ.3– ಬಂಡೀಪುರದಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ನೀಡಬಾರದು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಂಡೀಪುರ ರಾತ್ರಿ ಸಂಚಾರಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಬಾರದು. ರಾಜ್ಯದಲ್ಲಿ ಪ್ರಸಕ್ತ ಸಾಲಿಗೆ ಪ್ರತಿ ಟನ್ ಕಬ್ಬಿಗೆ 5 ಸಾವಿರ ರೂ. ನಿಗದಿಗೆ ಕ್ರಮಕೈಗೊಳ್ಳಬೇಕು. ರಾಜ್ಯದಲ್ಲಿ ಆನ್‌ಲೈನ್ ಗೇಮ್‌ಗಳ ಹಾವಳಿ ಹೆಚ್ಚಾಗಿದ್ದು, ರಾಜ್ಯ ಸರ್ಕಾರ ಯುವಕರ ರಕ್ಷಣೆಗಾಗಿ ಆನ್‌ಲೈನ್ ಗೇಮ್‌ಗಳ ನಿಷೇಧ ಮಾಡಬೇಕು. ಮಲೆಯೂರಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನದ ಅವ್ಯವಹಾರದಲ್ಲಿ ಮೋಸ ಹೋಗಿದ್ದ ಹಲವು ರೈತರಿಗೆ ಮಾತ್ರ ಚಿನ್ನವನ್ನು ಬಿಡಿಸಿಕೊಡಲು ಕ್ರಮಕೈಗೊಂಡಿದ್ದು ಉಳಿದ ರೈತರ ಚಿನ್ನವನ್ನು ಕಾನೂನು ತೊಡಕುಗಳನ್ನು ಸರಿಪಡಿಸಿ ತಕ್ಷಣ ಕೊಡಿಸಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮ, ಸಕ್ರಮ ಯೋಜನೆ ಮರು ಜಾರಿಗೊಳಿಸಬೇಕು. ಹಾಲಿನ ಪ್ರೋತ್ಸಾಹ ಧನ 800 ಕೋಟಿಯಷ್ಟು ಹಣವನ್ನು ರಾಜ್ಯ ಸರ್ಕಾರ ನೀಡಬೇಕು. ಬ್ಯಾಂಕ್‌ಗಳಿಂದ ರೈತರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸಬೇಕು. ಜಿಲ್ಲೆಯ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ವಿಸ್ತೃತ ವರದಿ ಡಿಪಿಆರ್ ರಚಿಸಬೇಕು. ಅಂತರ್ಜಲ ವೃದ್ಧಿಗಾಗಿ ಉಳಿದಿರುವ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಮಹದೇಶ್ವರಬೆಟ್ಟದಲ್ಲಿ ಕ್ಯಾಬಿನೆಟ್ ನಡೆಸುತ್ತೇವೆ ಎಂದು ಹೇಳಿ ಸುಮಾರು ನಾಲ್ಕು ತಿಂಗಳಿಂದ ಕಾರ್ಯಕ್ರಮ ಮುಂದೂಡಲಾಗುತ್ತಿದ್ದು, ಜಿಲ್ಲೆಯ ಜನತೆಗೆ ರಾಜ್ಯ ಸರ್ಕಾರ ಸುಳ್ಳು ಹೇಳಿಕೆ ನೀಡುವುದನ್ನು ತಕ್ಷಣ ನಿಲ್ಲಿಸಬೇಕು ಎಂದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಮುಖಂಡರಾದ ಹಾಲಿನ ನಾಗರಾಜ್, ಬಸವಣ್ಣ, ಪುಟ್ಟಮಲ್ಲೇಗೌಡ, ಮಹದೇವಸ್ವಾಮಿ ಇನ್ನಿತರರಿದ್ದರು.

ಸಾಧಕರಿಗೆ ಕಾಡಿನ ಮಿತ್ರ, ರಾಜ್ಯ ಅರಣ್ಯ, ಪರಿಸರ ಪ್ರಶಸ್ತಿ ಪ್ರದಾನ

ಚಾಮರಾಜನಗರ, ಏ.3– ಜಿಲ್ಲೆಯ ಗುಂಡ್ಲುಪೇಟೆ ತಾಲೂಕು ಬೇಗೂರು ಗ್ರಾಮದಲ್ಲಿ ಯುವಚೇತನ ಯುವಜನ ಕೇಂದ್ರದ ವತಿಯಿಂದ ಬೇಗೂರು ಗ್ರಾಮದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಕಾಡಿನ ಮಿತ್ರ, ರಾಜ್ಯ ಅರಣ್ಯ ಪರಿಸರ ಪ್ರಶಸ್ತಿಯನ್ನು ಸಾಧಕರಿಗೆ ಪ್ರದಾನ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ನಂದಿದುರ್ಗದ ಡಾ. ಬಾಲುಗೌಡ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಅರಣ್ಯ ನಾಶದಿಂದ ಪ್ರಾಣಿಗಳ ವಲಸೆ ಹೆಚ್ಚಾಗಿದೆ. ಆದ್ದರಿಂದ ಮರ ಗಿಡಗಳನ್ನು ಬೆಳೆಸಿ, ಪ್ರಾಣಿಗಳನ್ನು ರಕ್ಷಣೆ ಮಾಡಬೇಕು ಎಂದು ಮಕ್ಕಳಿಗೆ ಅರಿವು ಮೂಡಿಸಿದರು.

ಡಾ. ರವಿಶಂಕರ್.ಜಿ ಮಾತನಾಡಿ, ಮಕ್ಕಳಿಗೆ ಮತ್ತು ಸಾಧಕರ ಸಾಧನೆ ಪ್ರೇರೇಪಣೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಂದಿನ ಮಕ್ಕಳು ಸಮಾಜ ಸೇವೆಯಲ್ಲಿ ಒಲವು ತೋರಬೇಕು, ಏಕೆಂದರೆ ಸಮಾಜ ಸೇವೆ ಒಂದು ಪಠ್ಯೇತರ ವಿಷಯ. ಅದನ್ನು ಎಲ್ಲಾ ಮಕ್ಕಳು ಜೀವನ ಕ್ರಮಗಳಲ್ಲಿ ಅನುಸರಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕು ಹಾಡಿ ಜನರ ಅಭಿವೃದ್ಧಿ, ಮಹಿಳಾ ಸಬಲೀಕರಣ, ಆದಿವಾಸಿ ಮಕ್ಕಳ ಶಿಕ್ಷಣಕ್ಕೆ ಒತ್ತುಕೊಟ್ಟು, ಅವರ ಅಭಿವೃದ್ಧಿಗೆ ಶ್ರಮಿಸುತ್ತ ಎಲ್ಲಾ ಸರ್ಕಾರಿ ಸೌಲಭ್ಯಗಳು ನೇರವಾಗಿ ಮನೆ ಬಾಗಿಲಿಗೆ ತಲುಪುವಂತೆ ಮಾಡುತ್ತಿರುವ ಶ್ರೀಮತಿ ನಂದಿನಿ ಅವರ ಸಮಾಜ ಸೇವೆಯನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭ ಅಧ್ಯಕ್ಷತೆಯನ್ನು ಸಂಸ್ಥೆಯ ಪ್ರಾಚಾರ್ಯರಾದ ಕೆ.ಸಿ.ರವಿಶಂಕರ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮೈಸೂರು ಜಿಲ್ಲಾ ಕನ್ನಡ ಜನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಪ್ರಸಾದ್ ಭಾಗವಹಿಸಿದ್ದರು. ಪ್ರಶಸ್ತಿ ಪುರಸ್ಕೃತರಾದ ಗುರುಪ್ರಸಾದ್ ಎಂ.ಎಸ್., ಬಸವರಾಜು ಬೊಕ್ಕಳ್ಳಿ, ಪರಿಸರ ಪ್ರೇಮಿ ಬೀರೇಶ್, ಖ್ಯಾತ ಜ್ಯೋತಿಷಿ ಸುಬ್ರಹ್ಮಣ್ಯ, ಸಮಾಜ ಸೇವಕ ಮಲ್ಲು, ಶ್ರೀಮತಿ ನಂದಿನಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಕಾಡಿನ ಮಿತ್ರ, ರಾಜ್ಯ ಅರಣ್ಯ ಪರಿಸರ ಪ್ರಶಸ್ತಿಯನ್ನು ಪಡೆದ ಸಾಧಕರು.

ಎತ್ತಿನಗಾಡಿಯಲ್ಲಿ ಬಂದು ಜಾನಪದ ಸಂಭ್ರಮ ಹೆಚ್ಚಿಸಿದ ಶಾಸಕ



ಜಾನಪದ ಮೇಳಕ್ಕೆ ಎತ್ತಿನಗಾಡಿಯಲ್ಲಿ ಆಗಮಿಸಿದ ಪುಟ್ಟರಂಗಶೆಟ್ಟಿ

ಚಾಮರಾಜನಗರ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಂದು ಆಯೋಜಿಸಲಾಗಿದ್ದ ಜಾನಪದ ವೈಭವ ಕಾರ್ಯಕ್ರಮ ಸಂಪೂರ್ಣವಾಗಿ ಗ್ರಾಮೀಣ ಸೊಗಡಿನಿಂದ ವಿಶೇಷ ಗಮನ ಸೆಳೆಯಿತು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಶ್ವೇತ ವರ್ಣದ ಶರ್ಟ್, ಪಂಚೆ ಧರಿಸಿ, ತಲೆಗೆ ರುಮಾಲಿನಿಂದ ಪೇಟ ಸುತ್ತಿಕೊಂಡು ಪ್ರವಾಸಿಮಂದಿರದಿಂದ ಸ್ವತಃ ಎತ್ತಿನಗಾಡಿ ಮೇಲೆ ನಿಂತು ಚಲಾಯಿಸಿಕೊಂಡು ಕಾರ್ಯಕ್ರಮ ಸ್ಥಳವಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಆಗಮಿಸಿದ್ದು ವಿಶೇಷವಾಗಿತ್ತು. ಕಬ್ಬು, ತಳಿರು ತೋರಣಗಳು, ನವಧಾನ್ಯಗಳಿಂದ ಸಿಂಗರಿಸಿದ್ದ ಜಾನಪದ ಹಿನ್ನೆಲೆಯ ವೇದಿಕೆಯಲ್ಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಂಬೂರಿ ನುಡಿಸುವ ಮೂಲಕ ಜಾನಪದ ವೈಭವಕ್ಕೆ ಚಾಲನೆ ನೀಡಿದರು. ಸಾಂಪ್ರದಾಯಿಕವಾಗಿ ದೀಪ ಹಚ್ಚುವ ಮೂಲಕ ಕಾರ್ಯಕ್ರಮ ಕಳೆಗಟ್ಟುವಂತೆ ಮಾಡಿದರು. ಕಾಲೇಜು ಪ್ರಾಂಶುಪಾಲರು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿ ಎಲ್ಲರು ಸಾಂಪ್ರದಾಯಿಕ ಧಿರಿಸುಗಳನ್ನು ಧರಿಸಿ ಜಾನಪದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುಟ್ಟರಂಗಶೆಟ್ಟಿ, ಜಾನಪದ ಕಲೆಗಳ ತವರೂರೆಂದೇ ನಮ್ಮ ಜಿಲ್ಲೆ ಹೆಸರುವಾಸಿಯಾಗಿದೆ. ಇಲ್ಲಿನ ಶೇ.70 ರಿಂದ 80 ರಷ್ಟು ಜನ ರೈತರೇ ಆಗಿದ್ದಾರೆ. ನಾನೂ ಸಹ ರೈತ ಕುಟುಂಬದಿಂದ ಬಂದಿದ್ದೇನೆ. ಇದರಿಂದ ಸಿಗುವ ಶಾಂತಿ, ನೆಮ್ಮದಿ ಇನ್ನೆಲ್ಲೂ ಸಿಗಲಾರದು ಎಂದರು.

ಪ್ರಾಂಶುಪಾಲ ಪ್ರೊ.ಪಿ.ಎಸ್.ಗುರುಪ್ರಸಾದ್, ದೊಡ್ಡಮೋಳೆಯ ಜಾನಪದ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ದೊಡ್ಡಗವಿಬಸಪ್ಪ, ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಲೋಕೇಶ, ಉಪನ್ಯಾಸಕರಾದ ಗುರುರಾಜ್, ಶಿವಸ್ವಾಮಿ, ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರಾದ ಜಿ. ಬಂಗಾರು, ಮತ್ತಿತ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮ ಬಳಿಕ ವಿದ್ಯಾರ್ಥಿಗಳು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿ ಜೊತೆಗೂಡಿ ದೇಸಿ ಆಟಗಳಾದ ಚೌಕಭಾರ (ಘಟ್ಟಮನೆ), ಅಳಿಗುಳಿ ಮನೆ, ಗೋಲಿ, ಬುಗುರಿ ಆಡಿ ಸಂಭ್ರಮಿಸಿದರು. ದೇಸಿ ಅಡುಗೆ ತಿನಿಸುಗಳನ್ನು ತಯಾರಿಸಿ ಖುಷಿಪಟ್ಟರು.

ಸೋಮಹಳ್ಳಿ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬೇಗೂರು : ಸಮೀಪದ ಸೋಮಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸೋಮಹಳ್ಳಿ ಎಸ್.ಶಿವನಾಗಪ್ಪ, ಉಪಾಧ್ಯಕ್ಷರಾಗಿ ಹಳ್ಳದ ಮಾದಹಳ್ಳಿ ಚಿಕ್ಕನಂಜಪ್ಪಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸೋಮಹಳ್ಳಿ ಎಸ್. ಶಿವನಾಗಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಹಳ್ಳದ ಮಾದಹಳ್ಳಿ ಚಿಕ್ಕನಂಜಪ್ಪ ಬಿಟ್ಟು ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಶಿವನಾಗಪ್ಪ, ಉಪಾಧ್ಯಕ್ಷರಾಗಿ ಚುನಾವಣಾಧಿಕಾರಿ ನಾಗೇಶ್ ಚಿಕ್ಕನಂಜಪ್ಪ ಅವಿರೋಧವಾಗಿ ಆಯ್ಕೆಯಾದರು ಎಂದು ಘೋಷಿಸಿದರು.

ನೂತನ ಅಧ್ಯಕ್ಷ ಸೋಮಹಳ್ಳಿ ಎಸ್.ಶಿವನಾಗಪ್ಪ ಮಾತನಾಡಿದರು. ತಾಪಂ ಮಾಜಿ ಅಧ್ಯಕ್ಷ ಎಸ್.ಎಸ್.ಮಧುಶಂಕರ್, ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಎಸ್.ಎಂ.ಸದಾಶಿವಪ್ಪ, ಗೌಡಿಕೆ ಸದಾನಂದಮೂರ್ತಿ, ಸಂಘದ ನೂತನ ನಿರ್ದೇಶಕರಾದ ಆರತಿ,ಎಸ್.ನಾಗರಾಜು, ನೀಲಮ್ಮ, ಬಿ.ಪರಶಿವಮೂರ್ತಿ, ಕೆ.ಸಿ.ಶಿವಪ್ಪ, ಶಿವಮೂರ್ತಿನಾಯಕ, ಗುರುಪ್ರಸಾದ್, ಕೂಸಪ್ಪ ಶೆಟ್ಟಿ ಹಾಗೂ ಕೋಟೆಕೆರೆ ಫ್ಯಾಕ್ಸ್ ಮಾಜಿ ಅಧ್ಯಕ್ಷ ಬಿ.ಸಿ.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಹಿರಿಬೇಗೂರು ಗುರುಸ್ವಾಮಿ, ಮುಖಂಡ ಸೋಮಹಳ್ಳಿ ರವಿ, ಸೂಪರ್‌ವೈಸರ್ ಕಾರ್ತಿಕ್, ಸಂಘದ ಸಿಇಒ ಮಹದೇವು ಸೇರಿದಂತೆ ಸಂಘದ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಮಿಕ್ಸಿಂಗ್ ಪ್ರೀತಿಯಲ್ಲಿ ಏರಿಳಿತಗಳು..



ಸ್ಯಾಂಡಲ್‌ವುಡ್‌ನಲ್ಲಿ ವಿಭಿನ್ನ ಪ್ರೇಮಕಥೆಗಳಿಗೆ ಕೊರತೆಯೇನೂ ಇಲ್ಲ, ಸಾಕಷ್ಟು ನಿರ್ದೇಶಕರು ನೂರಾರು ವಿಧದ ಲವ್ ಸ್ಟೋರಿಗಳನ್ನು ತೆರೆಯಮೇಲೆ ಮೂಡಿಸಿದ್ದಾರೆ. ಇದೀಗ ಪ್ರೀತಿ, ಪ್ರೇಮದ ಸುತ್ತ ನಡೆಯುವ ಏರಿಳಿತದ ಕಥಾಹಂದರವನ್ನಿಟ್ಟುಕೊಂಡು ಎನ್.ಪಿ. ಇಸ್ಮಾಯಿಲ್ ಅವರು ಮಿಕ್ಸಿಂಗ್ ಪ್ರೀತಿ ಎಂಬ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರಲು ಹೊರಟಿದ್ದಾರೆ. ಜತೆಗೆ ಚಿತ್ರ ನಿರ್ಮಾಣದ ಜವಾಬ್ದಾರಿಯನ್ನೂ ಸಹ ಹೊತ್ತಿದ್ದಾರೆ. ಪೊಲ್ಲಾಚಿ ಮಹಾಲಿಂಗಂ ಮತ್ತು ಕಣ್ಣನ್ ಅವರ ಸಹ ನಿರ್ಮಾಣವಿರುವ "ಮಿಕ್ಸಿಂಗ್ ಪ್ರೀತಿ" ಚಿತ್ರದ ಟ್ರೇಲರ್ ಹಾಗೂ ಆಡಿಯೋ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಕೃಷ್ಣೇಗೌಡ, ಸಿರಿ ಮ್ಯೂಸಿಕ್ ಸುರೇಶ್ ಚಿಕ್ಕಣ್ಣ, ಡಿವೈಎಸ್ಪಿ ರಾಜೇಶ್, ನಿರ್ದೇಶಕ ಡೇವಿಡ್ ಸೇರಿ ಚಿತ್ರದ ಟ್ರೇಲರ್ ರಿಲೀಸ್ ಮಾಡಿದರು. ಇಂಥ ಅಪರೂಪದ ಪ್ರೇಮಕಥೆಯ ನಾಯಕನಾಗಿ ಸಿಂಡೊ ಜೇಕಬ್ ಅವರು ನಟಿಸಿದ್ದು, ನಾಯಕಿಯರಾಗಿ ಸಂಹಿತಾ ವಿನ್ಯ, ಪಾವನ, ದಿವ್ಯ ಹಾಗೂ ಪ್ರಿಯಾಂಕ ಅಭಿನಯಿಸಿದ್ದಾರೆ.

ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಈ ಚಿತ್ರದ ಟೈಟಲ್ಲೇ ಆಕರ್ಷಕವಾಗಿದೆ, ಮಿಕ್ಸಿಂಗ್ ಪ್ರೀತಿ ಚಿತ್ರವು ತಾಂತ್ರಿಕವಾಗಿ ಶ್ರೀಮಂತಿಕೆಯಿಂದ ಕೂಡಿದೆ. ನಿರ್ದೇಶಕರು ಟ್ರೇಲರ್‌ನಲ್ಲಿ ಕಥೆಯ ಬಗ್ಗೆ ಹೆಚ್ಚು ಮಾಹಿತಿ ಬಿಟ್ಟುಕೊಟ್ಟಿಲ್ಲ. ಹಾಡುಗಳ ಚಿತ್ರಣ ಚೆನ್ನಾಗಿದೆ. ಪಕ್ಕದ ರಾಜ್ಯಗಳ ನಿರ್ಮಾಪಕರು ನಮ್ಮಲ್ಲಿಗೆ ಬಂದು ಕನ್ನಡ ಸಿನಿಮಾ ನಿರ್ಮಿಸಿರುವುದು ಖುಷಿಯಾಗಿದೆ ಎಂದರು.


ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಎನ್.ಪಿ. ಇಸ್ಮಾಯಿಲ್ ಮಾತನಾಡಿ, "ಮಿಕ್ಸಿಂಗ್ ಪ್ರೀತಿ" ಪೂರ್ತಿ ಲವ್‌ಜಾನರ್ ಚಿತ್ರವಾಗಿದ್ದು, ಅದಕ್ಕೇ ಚಿತ್ರಕ್ಕೆ 100% ಲವ್ ಎಂಬ ಅಡಿಬರಹ ನೀಡಿದ್ದೇವೆ. ಸಿನಿಮಾಗೆ ಇದೇ ಟೈಟಲ್ ಯಾಕಿಟ್ಟಿದ್ದೇವೆ ಅನ್ನೋದು ಚಿತ್ರ ನೋಡಿದಾಗ ಅರ್ಥವಾಗುತ್ತೆ, ಲವ್ ಜಾನರ್‌ನ ಚಿತ್ರವಾದರೂ ಮನರಂಜನೆಗೆ ಬೇಕಾದ ಎಲ್ಲಾ ಅಂಶಗಳೂ ಇದರಲ್ಲಿದ್ದು, ಚಿತ್ರವನ್ನು ಮೇ ತಿಂಗಳಲ್ಲಿ ತೆರೆಗೆ ತರುವ ಆಲೋಚನೆಯಿದೆ ಎಂದರು.

ನಿರ್ದೇಶಕ ಇಸ್ಮಾಯಿಲ್ ಅವರ ಕನ್ನಡ ಪ್ರೀತಿಗೆ ಧನ್ಯವಾದ ತಿಳಿಸಿದ ನಾಯಕಿಯರಾದ ಸಂಹಿತ ವಿನ್ಯಾ, ಪಾವನ, ದಿವ್ಯ ಹಾಗೂ ಪ್ರಿಯಾಂಕ ನಿರ್ದೇಶಕರಿಗೆ ವಿಶೇಷ ಉಡುಗೊರೆಯನ್ನು ನೀಡಿ, ತಮ್ಮ ಪಾತ್ರಗಳ ಬಗ್ಗೆ ವಿವರಿಸಿದರೆ, ನಾಯಕ ಸಿಂಡೊ ತನ್ನ ಪಾತ್ರವನ್ನು ಚಿಕ್ಕದಾಗಿ ವಿವರಿಸಿದರು.

ಸಂಗೀತ ನಿರ್ದೇಶಕರಾದ ರಾಜೇಶ್ ಮೋಹನ್ ಮತ್ತು ಗೋಣೇಶ್ವರನ್, ಗೀತರಚನೆಕಾರ ಹಾಗೂ ಗಾಯಕ ಸಚಿನ್, ಛಾಯಾಗ್ರಾಹಕ ಸಾದಿಕ್ ಕಬೀರ್, ನೃತ್ಯನಿರ್ದೇಶಕಿ ಡಯಾನ ಹಾಗೂ ಕಾರ್ಯಕಾರಿ ನಿರ್ಮಾಪಕ, ವಿತರಕ ಮರಿಸ್ವಾಮಿ "ಮಿಕ್ಸಿಂಗ್ ಪ್ರೀತಿ" ಚಿತ್ರದ ಕುರಿತಂತೆ ಮಾತನಾಡಿದರು.

45 ಟೀಸರ್‌ನಲ್ಲೇ ಕಥೆಯ ಸುಳಿವಿದೆ





ಯಾವುದೇ ಅದ್ಭುತ, ಆಶ್ಚರ್ಯಕರ ಸಂಗತಿಯಾದರೂ 45 ಸೆಕೆಂಡ್‌ಗಳಲ್ಲಿ ಸಂಭವಿಸಬಹುದು. ಇದನ್ನೇ ನಿರ್ದೇಶಕ ಅರ್ಜುನ್ ಜನ್ಯ ಅವರು 45 ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಇವರ ಪ್ರಯತ್ನಕ್ಕೆ ಶಿವಣ್ಣ, ಉಪೇಂದ್ರ, ರಾಜ್ ಬಿ.ಶೆಟ್ಟಿಯಂಥ ಮೂವರು ಸ್ಟಾರ್‌ಗಳು ಕೈಜೋಡಿಸಿದ್ದಾರೆ. ಯುಗಾದಿ ಹಬ್ಬದಂದು ಈ ಚಿತ್ರದ ಟೀಸರ್‌ನ್ನು ನಟ ಶಿವರಾಜಕುಮಾರ್ ಅನಾವರಣಗೊಳಿಸಿದರು.

ಡಿಕೆಡಿ ಟೈಮಲ್ಲಿ ಅರ್ಜುನ್ ಜನ್ಯ ನನಗೆ ಈ ಕಥೆಯನ್ನು 4ರಿಂದ 5 ನಿಮಿಷದಲ್ಲಿ ಹೇಳಿದರು. ಕಥೆ ಕೇಳಿ ನಾನೂ ಥ್ರಿಲ್ಲಾದೆ. ಕಥೆನ ಕೊಟ್ಟು ಬಿಡ್ತೇನೆ, ಯಾರಾದರೂ ನಿರ್ದೇಶನ ಮಾಡಲಿ ಎಂದು ಅರ್ಜುನ್ ಜನ್ಯ ಹೇಳಿದಾಗ ಇಷ್ಟು ಚೆನ್ನಾಗಿ ಕಥೆ ಮಾಡಿದ್ದೀರಿ, ನೀವೇ ನಿರ್ದೇಶಿಸಿ ಎಂದೆ. ನಿರ್ದೇಶಕನಾಗಬೇಕೆಂಬ ಯಾವ ನಿರೀಕ್ಷೆಯೂ ಅವರಲ್ಲಿರಲಿಲ್ಲ, ಉಪೇಂದ್ರ ಜತೆ ಪ್ರೀತ್ಸೇ, ಲವಕುಶ ಮಾಡಿದ್ದೆ, ಮೂರನೇ ಬಾರಿಗೆ ನಾವಿಬ್ಬರೂ ಜತೆಯಾಗಿದ್ದೇವೆ ಎಂದು ನಟ ಶಿವಣ್ಣ ಈ ಸಂದರ್ಭದಲ್ಲಿ ಹೇಳಿದರು.

ಸೂರಜ್ ಪ್ರೊಡಕ್ಷನ್ಸ್ ಅಡಿ ರಮೇಶ್‌ರೆಡ್ಡಿ ಅವರ ನಿರ್ಮಾಣದ ಈ ಚಿತ್ರಕ್ಕೆ ಅರ್ಜುನ್ ಜನ್ಯ ಅವರ ನಿರ್ದೇಶನವಿದ್ದು, ಈಗ ರಿಲೀಸಾಗಿರುವ ಟೀಸರ್‌ನಲ್ಲಿ ಚಿತ್ರಕಥೆಯ ಒಂದಷ್ಟು ಸುಳಿವನ್ನು ನೀಡಲಾಗಿದೆ,

ನಟ ಉಪೇಂದ್ರ ಮಾತನಾಡಿ, ಶಿವಣ್ಣ ಅವರಿಂದ ಎಷ್ಟೋ ಜನ ನಿರ್ದೇಶಕರು ಮೇಲೆ ಬಂದಿದ್ದಾರೆ. ಕೆಲವರು ಸೂಪರ್ ಸ್ಟಾರ್ ಆಗಿದ್ದಾರೆ. ಅರ್ಜುನ್ ಜನ್ಯ ಸಂಗೀತದಲ್ಲೇ ಸಿನಿಮಾನ ಸೂಪರ್‌ಹಿಟ್ ಮಾಡ್ತಾರೆ. ಇನ್ನು ಸಿನಿಮಾನ ಹೇಗೆ ಮಾಡಿರಬಹುದೆಂದು ನೀವೇ ಊಹಿಸಿ, ಅವರು ಬರೀ ಸಂಗೀತ ನಿರ್ದೇಶಕ ಮಾತ್ರವಲ್ಲ. ಒಳ್ಳೆಯ ನಟ ಕೂಡ. ಪ್ರತಿ ಕಲಾವಿದರಿಗೂ ಹೇಗೆ ನಟಿಸಬೇಕೆಂದು ಹೇಳುತ್ತಿರಲಿಲ್ಲ. ನಟಿಸಿ ತೋರಿಸುತ್ತಿದ್ದರು ಎಂದು ಹೇಳಿದರು.

ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ, ಈ ಚಿತ್ರವಾಗಲು ಶಿವಣ್ಣ ಮುಖ್ಯ ಕಾರಣರಾದರೆ, ಅಂದುಕೊಂಡ ಹಾಗೆ ಸಿನಿಮಾ ಮೂಡಿ ಬರಲು ನಿರ್ಮಾಪಕ ರಮೇಶ್ ರೆಡ್ಡಿ ಕಾರಣ. ಟೀಸರ್‌ನಲ್ಲಿ ಒಂದಷ್ಟು ಕಥೆಯನ್ನು ಹೇಳಲು ಟ್ರೈ ಮಾಡಿದ್ದೇವೆ. ಅದೇನೆಂದು ಪ್ರೇಕ್ಷಕರೇ ಗೆಸ್ ಮಾಡಲಿ. ಮುಂದಿನ ದಿನಗಳಲ್ಲಿ ಮತ್ತೊಂದು ಟೀಸರ್, ಆಡಿಯೋ ಹಾಗೂ ಟ್ರೇಲರನ್ನು ರಿಲೀಸ್ ಮಾಡುವ ಯೋಚನೆಯಿದೆ ಎಂದರು.

ನಿರ್ಮಾಪಕ ರಮೇಶ್ ರೆಡ್ಡಿ ಮಾತನಾಡಿ, ಚಿತ್ರ ಇಷ್ಟು ಚೆನ್ನಾಗಿ ಮೂಡಿಬರಲು ಜನ್ಯ ಹಾಗೂ ಅವರ ಟೀಮ್ ಕಾರಣ, ನನಗೆ ತಿಳಿದ ಹಾಗೆ ಈ ರೀತಿಯ ಚಿತ್ರ ಇಡೀ ಭಾರತದಲ್ಲಿ ಈವರೆಗೂ ಬಂದಿಲ್ಲ ಎಂದು ಹೇಳಿದರು. ನಿರ್ಮಾಪಕ ಕೆ.ಮಂಜು, ಸಂಜಯ್‌ಗೌಡ, ಇಂದ್ರಜಿತ್ ಲಂಕೇಶ್, ಕೆ.ವಿ.ಎನ್.ಸುಪ್ರೀತ್, ಆನಂದ್ ಆಡಿಯೋ ಶ್ಯಾಮ್ , ಶ್ರೇಯಸ್ ಮಂಜು ಚಿತ್ರದ ಕುರಿತಂತೆ ಮಾತನಾಡಿದರು.

ಅಶ್ವಿನಿ ಪುನೀತ್‌ರಿಂದ ಅಪ್ಪು ಕಪ್ ಶಟಲ್ ಬ್ಯಾಡ್ಮಿಂಟನ್ ಟ್ರೋಫಿ ಬಿಡುಗಡೆ




ಇತ್ತೀಚಿನ ದಿನಗಳಲ್ಲಿ ಸಿನಿಮಾ ತಾರೆಯರು ಕ್ರಿಕೆಟ್, ಬ್ಯಾಡ್ಮಿಂಟನ್ ಹೀಗೆ ಕ್ರೀಡಾ ಕ್ಷೇತ್ರದಲ್ಲೂ ಸಹ ಹೆಚ್ಚು ಹೆಚ್ಚು ಪಾಲ್ಗೊಳ್ಳುತ್ತಿದ್ದಾರೆ. ಅದರ ಭಾಗವಾಗಿ ಮತ್ತೊಂದು ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಚೇತನ್ ಸೂರ್ಯ, ಅರ್ಜುನ್ ಹಾಗೂ ಪಾರಿತೋಷ್ ಸೇರಿ ಆಯೋಜಿಸುತ್ತಿರುವ ಸೆಲೆಬ್ರಿಟಿ ಶಟಲ್ ಬ್ಯಾಡ್ಮಿಂಟನ್ ಲೀಗ್-1 ಉದ್ಘಾಟನೆ ಹಾಗೂ ಲೋಗೊ ಲಾಂಚ್ ಸಮಾರಂಭ ಖಾಸಗಿ ಹೋಟೆಲ್‌ನಲ್ಲಿ ನೆರವೇರಿತು. ಶ್ರೀಮತಿ ಅಶ್ವಿನಿ ಪುನೀತ್ ರಾಜಕುಮಾರ್ ಹಾಗೂ ಬ್ಯಾಡ್ಮಿಂಟನ್ ಪ್ಲೇಯರ್ ಶ್ರೀಕಾಂತ್ ಕಿಡಂಬಿ ಅವರುಗಳು ಲೋಗೊ ಹಾಗೂ ಟ್ರೋಫಿಯನ್ನು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಪುನೀತ್ ರಾಜಕುಮಾರ್ ಅವರ 50ನೇ ಹುಟ್ಟುಹಬ್ಬವನ್ನು ಸಹ ಆಚರಿಸಲಾಯಿತು. ವಿಧಾನಪರಿಷತ್ ಸದಸ್ಯರಾದ ಗೋವಿಂದರಾಜು, ಶರವಣ, ನಟ ಅನಿರುದ್ ಜತ್ಕರ್, ನಟಿ ರಾಗಿಣಿ ದ್ವಿವೇದಿ, ಸಾ.ರಾ. ಗೋವಿಂದು, ಪತ್ರಕರ್ತ ಸದಾಶಿವ ಶೆಣೈ ಇತರರು ಈ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ಪುನೀತ್ ರಾಜಕುಮಾರ್ ಚಿತ್ರದ ಹಾಡುಗಳಿಗೆ ನೃತ್ಯ ತಂಡದವರು ಹೆಜ್ಜೆ ಹಾಕಿದರು.

ಈ ಟೂರ್ನಿಯ ಬಗ್ಗೆ ಮಾಹಿತಿ ನೀಡಿದ ಚೇತನ್ ಸೂರ್ಯ, ನಾವು ಕಳೆದ 2 ವರ್ಷಗಳಿಂದ ಅಪ್ಪುಕಪ್ ಹೆಸರಲ್ಲಿ ಶಟಲ್ ಬ್ಯಾಡ್ಮಿಂಟನ್ ಟೂರ್ನಿ ಆಯೋಜಿಸುತ್ತಾ ಬಂದಿದ್ದೇವೆ. ಆಗಿನಿಂದಲೂ ಅಶ್ವಿನಿ ಪುನೀತ್ ರಾಜಕುಮಾರ್ ಅವರು ನಮಗೆ ಬೆಂಬಲ ನೀಡುತ್ತಿದ್ದಾರೆ. ಶರವಣ ಅವರ ಸಹಕಾರ ಆಗಿನಿಂದಲೂ ಇದೆ ಈ ಬಾರಿ ಇಂಟರ್‌ಸ್ಟೇಟ್ ಸೆಲೆಬ್ರಿಟಿ ಶಟಲ್ ಬ್ಯಾಡ್ಮಿಂಟನ್ ಲೀಗ್ ಆಯೋಜಿಸಲಾಗಿದ್ದು, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕೇರಳ ಸೇರಿ ನಾಲ್ಕು ರಾಜ್ಯಗಳ ಸೆಲೆಬ್ರಿಟಿಗಳು ಈ ಲೀಗ್‌ನಲ್ಲಿ ಆಡಲಿದ್ದಾರೆ. ಮುಂದಿನ ಸಲ ಇನ್ನೂ ಹೆಚ್ಚಿನ ರಾಜ್ಯಗಳು ಸೇರ್ಪಡೆಯಾಗಲಿವೆ. ಕರ್ನಾಟಕ ವಾರಿಯರ್ಸ್, ಚೆನ್ನೈ ಸೂಪರ್‌ಸ್ಟಾರ್ಸ್, ಕೇರಳ ರಾಕರ್ಸ್ ಹಾಗೂ ತೆಲುಗು ಫೈಟರ್ಸ್ ಎಂಬ ನಾಲ್ಕು ತಂಡಗಳಿವೆ. ನನ್ನ ಜೊತೆಗೆ ಅರ್ಜುನ್ ಹಾಗೂ ಪಾರಿತೋಷ್ ಈ ಸಲ ಕೈ ಜೋಡಿಸಿದ್ದು, ಜೂನ್ ತಿಂಗಳಲ್ಲಿ ಈ ಪಂದ್ಯಾವಳಿಗಳು ನಡೆಯಲಿವೆ ಎಂದರು.

ಕರ್ನಾಟಕ ವಾರಿಯರ್ಸ್ ತಂಡದ ಪ್ರಮೋದ್ ಶೆಟ್ಟಿ, ರವಿಚೇತನ್, ಮನೋರಂಜನ್ ರವಿಚಂದ್ರನ್ ಹಾಗೂ ವಿಕ್ರಮ್ ರವಿಚಂದ್ರನ್, ಚೆನ್ನೈ ಸೂಪರ್ ಸ್ಟಾರ್ಸ್ ತಂಡದ ಶಿವಕುಮಾರ್, ವಿಕ್ರಾಂತ್, ಭರತ್, ಬಿ.ಆರ್. ಕೃಷ್ಣ, ತೆಲುಗು ಫೈಟರ್ಸ್ ತಂಡದ ಶರತ್, ನಿತೀಶ್, ಕೇರಳ ರಾಕರ್ಸ್ ತಂಡದ ಮಂಜುನಾಥ್, ನಟರಾದ ಸಂತೋಷ್ ಹಾಗೂ ರಾಜೀವ್ ಉಪಸ್ಥಿತರಿದ್ದರು.

ಬ್ರಾಟ್ ಉಡಾಫೆ ಮಗನಾದ ಡಾರ್ಲಿಂಗ್‌ಕೃಷ್ಣ





ಕೌಸಲ್ಯ ಸುಪ್ರಜಾರಾಮಾ ಖ್ಯಾತಿಯ ನಿರ್ದೇಶಕ ಶಶಾಂಕ್ ಹಾಗೂ ನಾಯಕ ಡಾರ್ಲಿಂಗ್ ಕೃಷ್ಣ ಅವರು ಬ್ರಾಟ್ ಎಂಬ ಚಿತ್ರದ ಮೂಲಕ ಮತ್ತೊಮ್ಮೆ ಜತೆಯಾಗಿದ್ದಾರೆ. ಮಂಜುನಾಥ್ ಕಂದಕೂರ್ ಅವರ ನಿರ್ಮಾಣದ ಈ ಚಿತ್ರದ ಟೈಟಲ್ ಲಾಂಚ್ ಸಮಾರಂಭ ಇತ್ತೀಚೆಗೆ ನೆರವೇರಿತು.

ಟೈಟಲ್ ಬಗ್ಗೆ ಸ್ಪಷ್ಟನೆ ನೀಡಿದ ನಿರ್ದೇಶಕ ಶಶಾಂಕ್, ಬ್ರಾಟ್ ಪರೋಡಿ ಮಗ ಹಾಗೂ ತಂದೆಯ ಸಂಘರ್ಷದ ಕಥೆ. ಅತೀ ಹೆಚ್ಚು ತರಲೆ ಮಾಡುವವರಿಗೆ ಬ್ರಾಟ್ ಎನ್ನುತ್ತಾರೆ. ಅದರಲ್ಲೂ 16 ವರ್ಷದೊಳಗಿನ ಮಕ್ಕಳಿಗೆ ಈ ಪದವನ್ನು ಹೆಚ್ಚಾಗಿ ಬಳಸುತ್ತಾರೆ. ಚಿತ್ರದ ಕಥೆ ಅದೇ ಕಂಟೆಂಟ್ ಒಳಗೊಂಡಿದ್ದರಿಂದ ಈ ಶೀರ್ಷಿಕೆ ಇಟ್ಟಿದ್ದೇವೆ. ಕನ್ನಡ ಸೇರಿದಂತೆ 5 ಭಾಷೆಗಳಲ್ಲಿ ಈ ಚಿತ್ರ ಬಿಡುಗಡೆಯಾಗುತ್ತಿದೆ. ಎಲ್ಲ ಭಾಷೆಗಳಿಗೂ ಬ್ರಾಟ್ ಶೀರ್ಷಿಕೆಯೇ ಕಾಮನ್ ಆಗಿರುತ್ತದೆ, ಇದುವರೆಗೆ ಯಾರೂ ಈ ಟೈಟಲ್ ಬಳಸಿಲ್ಲ. ನಾನು ಈವರೆಗೂ ಕೈ ಹಾಕಿರದ ಜಾನರ್ ಈ ಚಿತ್ರದಲ್ಲಿದೆ, ನಮ್ಮ ಚಿತ್ರದ ಶೀರ್ಷಿಕೆಯನ್ನು ವಿಶೇಷವಾಗಿ ಹಾಡಿನ ಮೂಲಕ ಅನಾವರಣಗೊಳಿಸಿದ್ದೇವೆ. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನದ 3 ಹಾಡುಗಳು ಚಿತ್ರದಲ್ಲಿದ್ದು, ಆನಂದ್ ಆಡಿಯೋ ಮೂಲಕ ರಿಲೀಸಾಗಲಿವೆ, ಬ್ರಾಟ್, ತಂದೆ-ಮಗನ ಸಂಘರ್ಷದ ಕಥೆ. ತಂದೆಗೆ ಮಗನೇ ಬ್ರಾಟ್. ತಂದೆಯಾಗಿ ಅಚ್ಯುತಕುಮಾರ್ ಅಭಿನಯಿಸುತ್ತಿದ್ದಾರೆ. ಮನೀಶಾ ಚಿತ್ರದ ನಾಯಕಿ. ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು ಉಳಿದ ತಾರಾಗಣದಲ್ಲಿದ್ದಾರೆ. ಈಗಾಗಲೇ ಶೇ.80ರಷ್ಟು ಚಿತ್ರೀಕರಣ ಮುಗಿದಿದೆ ಎಂದರು.

ಡಾರ್ಲಿಂಗ್ ಕೃಷ್ಣ ಮಾತನಾಡುತ್ತ, ಕನ್ನಡದಲ್ಲೇ ತೀರ ಅಪರೂಪ ಎನಿಸುವ ಕಥೆ ಈ ಚಿತ್ರದಲ್ಲಿದೆ. ಲವ್, ಫ್ಯಾಮಿಲಿ ಚಿತ್ರಗಳಲ್ಲೇ ನಟಿಸುತ್ತಿದ್ದ ನನಗೂ ಇದು ಹೊಸ ಜಾನರ್, ಈ ಚಿತ್ರಕ್ಕಾಗಿ ನಾನು ಮೊದಲ ಬಾರಿಗೆ ವರ್ಕ್‌ಶಾಪ್ ಸಹ ಮಾಡಿದ್ದೇನೆ. ನಾಯಕಿ ಮನಿಶಾ ಕೂಡ ಕನ್ನಡದವರೇ, ನಿರ್ಮಾಪಕರು ಯಾವುದೇ ಕೊರತೆ ಬಾರದ ಹಾಗೆ ನೋಡಿಕೊಂಡಿದ್ದಾರೆ ಎಂದರು.

ನಿರ್ಮಾಪಕ ಮಂಜುನಾಥ್ ಕಂದಕೂರ್ ಮಾತನಾಡುತ್ತ, ಶಶಾಂಕ್ ನನಗೆ ಹೇಳಿದ ಈ ಕಥೆ ತುಂಬಾ ಇಷ್ಟವಾಯಿತು. ಹಾಗಾಗಿ ಐದು ವರ್ಷಗಳ ನಂತರ ಮತ್ತೆ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದೇನೆ ಎಂದರು. ನಾಯಕಿ ಮನಿಶಾ ಮಾತನಾಡಿ, ನಾನು ಈಗಾಗಲೇ ಒಂದು ತೆಲುಗು ಚಿತ್ರದಲ್ಲಿ ನಟಿಸಿದ್ದೆ, ಕನ್ನಡದಲ್ಲಿದು ಮೊದಲ ಚಿತ್ರ. ಒಬ್ಬ ಮಧ್ಯಮ ವರ್ಗದ ಹುಡುಗಿಯಾಗಿ ಈ ಚಿತ್ರದಲ್ಲಿ ನಟಿಸಿದ್ದೇನೆ ಎಂದರು,

ಸಿನಿಪದಬಂಧ-571



ಉಮ್ಮತ್ತೂರು ಇಂದುಶೇಖರ್
ಮೊ.9880820462

1			■	2				3		■
	■	■	■		■	■	■		■ 5	4
5		■	6		■	7				
	■	■	■	8			■		■	
9		10	■		■		■	11		
	■		■		■		■		■	
12				■	■		■	■	13	■
	■		■	14						
	■	15		■	■		■	■		■
■	■		■	16			■	17		
■	18			■	■	■	■	■		■

ಎಡದಿಂದ ಬಲಕ್ಕೆ

1. ಗೀತಾ ಸರ್ಪಸ್ತ್ರ 3
2. ಶ್ರೀನಾಥ್ - ಆರತಿ ಚಳಿಗಾಲದಲ್ಲಿ ಕಂಡ ಸ್ವಪ್ನ! 6
5. ವಿಷ್ಣು, ಅಂಬಿ, ದೇವು, ಶಶಿ, ರಾಮ್‌ಕುಮಾರ್ ಅಭಿನಯದ ಚಿತ್ರ ಇಲ್ಲಿ ತಿರುಗಿದೆ 2
6. ಪಿಶಾಚಿಗೆ ಅಂಟಿಕೊಂಡಿರುವ ಹಣ 2
7. ಕುಮಾರ್ ಬಂಗಾರಪ್ಪ - ಶಿವರಂಜಿನಿಯ ಶಾಶ್ವತ ಪ್ರೀತಿ 5
8. ಹೇಮರೆಡ್ಡಿ _ _ _ 3
9. ಮನ್ಮಥ ಇಲ್ಲಿ ತಿರುಗಿದ್ದಾನೆ 3
11. ಸರದ ನಡುವೆ ನಡೆದ ಯುದ್ಧ 3
12. ರಾಜ್‌ಕುಮಾರನ ಬೆಟ್ಟದ ಹೆಣ್ಣು 4
14. ಶಶಿಕುಮಾರ್ ಅಭಿನಯದಲ್ಲಿ ಸಿಂಹ ಕೋಪಗೊಂಡಿದೆ 7
15. ಸ್ವರ್ಗಕ್ಕೆ ದಾರಿ ತೋರಿದವಳು 2
16. ಅಂಬಿ ಅಭಿನಯದ ನಮ್ಮ ದೇಶದ ರಾಜಧಾನಿ 3
17. ರಾಂಗ್ ನಂಬರ್ ಚಿತ್ರದ ನಾಯಕಿ 3
18. ಯಮನ ಜೊತೆ ಬಂದ ಸೇವಕ 3

ಮೇಲಿನಿಂದ ಕೆಳಕ್ಕೆ

1. ರಾಘವೇಂದ್ರ ರಾಜ್‌ಕುಮಾರ್ - ಮಾಲಾಶ್ರೀ ಅಭಿನಯಕ್ಕೆ ಎಂ. ಎಸ್. ರಾಜಶೇಖರ್ ನಿರ್ದೇಶಕ 9
2. ಹೆಂಡತಿಯಪ್ಪನ ಪುತ್ರಿ 6
3. ದಮಯಂತಿ, ಪ್ರತಿಭಾ ಅಭಿನಯಕ್ಕೆ ಉಗ್ರ ನರಸಿಂಹ ನಿರ್ದೇಶನವಿದೆ 6
4. " _ _ _ _ _ ಕೋಟಿ ತರಹ ಬರೆದರೆ ಮುಗಿಯದ ಕಾವ್ಯವಿದು..... ", 5
7. ತಾಯಿಯ ಮಡಿಲಲ್ಲಿ ಎನ್ನುವರ್ಥದ ರಮೇಶ್ ಚಿತ್ರ 8
10. ಚಿತ್ರದುರ್ಗ ಎಂದೊಡನೆ ನೆನಪಾಗುವ ವೀರ 7
13. ಶಂಕರ್‌ನಾಗ್ - ದೀಪಿಕಾಳ ನೂತನ ಬದುಕು 5

ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಸಿನಿ ಪದಬಂಧ 570ರ ಉತ್ತರ

ಯು	ಗಾ	ದಿ	■	ಅಂ	ದ	ರ್	ಬಾ	ಹ	ರ್	■
ಗ	■	■	■	ಗೈ	■	■	■	ಸಿ	■	ಮ
ಯು	ಗ	■	ಲಾ	ಲಿ	■	ತ	ವ	ರು	ಮ	ನೆ
ಗ	■	■	■	ಅ	ದ್ದೂ	ರಿ	■	ತೋ	■	ಅ
ಗ	ರ	ಸಾ	■	ಪ್ಸ	■	ಕೆ	■	ರ	ವ	ಳಿ
ಳೀ	■	ಹು	■	ರೆ	■	ರೆ	■	ಣ	■	ಯ
ಸಾ	ಹು	ಕಾ	ರ	■	■	ಏ	■	■	ದೋ	■
ಗ	■	ರ್	■	ತ	ವ	ರಿ	ನ	ಕಾ	ಣಿ	ಕೆ
ಲಿ	■	ಜಾ	ಕಿ	■	■	ಮೇ	■	■	ಸಾ	■
■	■	ನ	■	ಅ	ಬ	ಲೆ	■	ಸಂ	ಗ	ಮ
■	ಅ	ಕಿ	ರ	■	■	■	■	■	ಲಿ	■

ವಿಜೇತರು: ವಿ.ಸುಗಂಧರಾಜ್, #1824, 1ನೇ ಮಹಡಿ, 1ನೇ ಮುಖ್ಯ ರಸ್ತೆ, ಕೆ.ಬ್ಲಾಕ್, ಕುವೆಂಪುನಗರ, ಮೈಸೂರು-23

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಈ ವಾರ ನಿಂಬಿಯಾ ಬನಾದ ಮ್ಯಾಗ..



ಅಣ್ಣಾವ್ರ ಮೊಮ್ಮಗ ಷಣ್ಮುಖ ಗೋವಿಂದರಾಜ್ ನಾಯಕನಾಗಿ ಅಭಿನಯಿಸಿರುವ ನಿಂಬಿಯಾ ಬನಾದ ಮ್ಯಾಗ ಚಿತ್ರ ಇಂದು ಬಿಡುಗಡೆಯಾಗಿದೆ. ಮೊನ್ನೆ ಚಿತ್ರದ ಟ್ರೈಲರ್‌ನ್ನು ಡಾ॥ರಾಜಕುಮಾರ್ ಪುತ್ರಿ ಲಕ್ಷ್ಮೀ ಗೋವಿಂದರಾಜು ಬಿಡುಗಡೆ ಮಾಡಿದರು. ಅಶೋಕ್ ಕಡಬ ಅವರ ನಿರ್ದೇಶನದ 5ನೇ ಚಿತ್ರ ಇದಾಗಿದ್ದು, ವಿ.ಮಾದೇಶ್ ಅವರು ಚಿತ್ರವನ್ನು ನಿರ್ಮಿಸಿದ್ದಾರೆ, ಈ ಸಂದರ್ಭದಲ್ಲಿ ಮತ್ತೊಬ್ಬ ಪುತ್ರಿ ಪೂರ್ಣಿಮಾ ರಾಮ್‌ಕುಮಾರ್ ಹಾಗೂ ಹಿರಿಯ ನಿರ್ಮಾಪಕ ಚಿನ್ನೇಗೌಡ್ರು, ನಾಯಕಿ ತನುಶ್ರೀ, ನಿರ್ಮಾಪಕರಾದ ವಿ.ಮಾದೇಶ್, ಮೇಘಮಾಲೆ ಸುನಾದ್‌ರಾಜ್ ಉಪಸ್ಥಿತರಿದ್ದರು.

ಮಲೆನಾಡ ಭಾಗದಲ್ಲಿ ತಾಯಿ ಮಗನ ಸುತ್ತ ನಡೆಯುವ ಹೃದಯಸ್ಪರ್ಶಿ ಕಥಾಹಂದರ ಈ ಚಿತ್ರದಲ್ಲಿದೆ, 2-3 ವರ್ಷದವನಿದ್ದಾಗ ಕಳೆದುಹೋದ ಮಗ, 25 ವರ್ಷಗಳ ನಂತರ ಮರಳಿ ಬಂದಾಗ ಆ ತಾಯಿಗಾಗುವ ಆನಂದ ಅಷ್ಟಿಷ್ಟಲ್ಲ, ಆನಂತರ ನಡೆಯುವ ಘಟನೆಗಳೇ ಚಿತ್ರದ ಕುತೂಹಲ. ನಿಂಬಿಯಾ ಬನಾದ ಮ್ಯಾಗ ಪೇಜ್ - 1 ಹಾಗೂ ಪೇಜ್-2 ಎಂದು ಎರಡು ಭಾಗಗಳಲ್ಲಿ ಮೂಡಿಬರಲಿದೆ,

ಮಲೆನಾಡಲ್ಲಿ ತಾಯಿ ಮಗನ ಸುತ್ತ ನಡೆಯುವ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಆಗುಂಬೆ, ಶೃಂಗೇರಿ, ತೀರ್ಥಳ್ಳಿ, ಚಿಕ್ಕಮಗಳೂರು ಸುತ್ತಮುತ್ತ 35 ದಿನಗಳವರೆಗೆ ಚಿತ್ರೀಕರಿಸಲಾಗಿದೆ, ಈಗಾಗಲೇ ಡಾ॥ರಾಜಕುಮಾರ್ ಕುಟುಂಬದವರೆಲ್ಲ ಈ ಸಿನಿಮಾ ನೋಡಿ ಸಂತೋಷ ವ್ಯಕ್ತಪಡಿಸಿದ್ದಾರೆ. ಶಿವರಾಜ್‌ಕುಮಾರ್ ಅವರಿಗೂ ಸದ್ಯದಲ್ಲೇ ಚಿತ್ರವನ್ನು ತೋರಿಸುತ್ತೇವೆ ಎಂದು ನಿರ್ದೇಶಕ ಅಶೋಕ್ ಕಡಬ ಹೇಳಿದರು,

ಈ ಚಿತ್ರದಲ್ಲಿ ನಾಯಕ ಷಣ್ಮುಖ ಜತೆ ನಾಯಕಿಯಾಗಿ ನಟಿ ತನುಶ್ರೀ ಅಭಿನಯಿಸಿದ್ದಾರೆ. 25 ವರ್ಷಗಳ ನಂತರ ಮೇಘಮಾಲೆ ಖ್ಯಾತಿಯ ಸುನಾದ್‌ರಾಜ್ ನಾಯಕನ ತಂದೆಯಾಗಿ ಕಾಣಿಸಿಕೊಂಡಿದ್ದಾರೆ. ತ್ರಿಶಾ(ಚೆನ್ನೈ), ಪಂಕಜ್ ನಾರಾಯಣ್, ಸಂಗೀತ, ಭವ್ಯ, ರಾಮಕೃಷ್ಣ, ಮೂಗು ಸುರೇಶ್, ಪದ್ಮಾ ವಾಸಂತಿ ನಿಂಬಿಯಾ ಬನಾದ ಮ್ಯಾಗ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಈ ಚಿತ್ರದ ಮೂರು ಹಾಡುಗಳಿಗೆ ಆರೋನ್ ಕಾರ್ತಿಕ್ ಸಂಗೀತ ಸಂಯೋಜಿಸಿದ್ದು, ಪಳನಿ ಡಿ.ಸೇನಾಪತಿ ಹಿನ್ನೆಲೆ ಸಂಗೀತ ನೀಡಿದ್ದಾರೆ. ಸಿದ್ದು ಕಾಂಚನಹಳ್ಳಿ ಅವರ ಛಾಯಾಗ್ರಹಣ, ರವಿತೇಜ ಅವರ ಸಂಕಲನ ಹಾಗೂ ಮದನ್ ಹರಿಣಿ ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ.

ಮೈಸೂರು ಮಿತ್ರ

ಮೈಸೂರಲ್ಲಿ ಏ.5, 6 ರಂದು 'ಜವಾರಿ ಕಾಳು ಮೇಳ'

ಮೈಸೂರು, ಏ.3(ಎಂಕೆ)– ಮೈಸೂರಿನಲ್ಲಿ ಮೊದಲ ಬಾರಿಗೆ ನೂರಕ್ಕೂ ಹೆಚ್ಚು ಬಗೆಯ ದೇಸಿ ಬೇಳೆ ಕಾಳುಗಳ 'ಜವಾರಿ ಕಾಳು ಮೇಳ' ಆಯೋಜಿಸಲಾಗಿದೆ.



ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ, ವಿಶ್ವ ಅಗ್ರೋ ಟೆಕ್ ಮತ್ತು ಬಯೋಟೆಕ್ ಸಂಯುಕ್ತಾಶ್ರಯದಲ್ಲಿ ಏ.5 ಮತ್ತು 6 ರಂದು ಎರಡು ದಿನಗಳ 'ಜವಾರಿ ಕಾಳು ಮೇಳ' ನಡೆಯಲಿದೆ.

ಬೇಳೆ ಕಾಳುಗಳು ಭಾರತೀಯ ಆಹಾರ ಸಂಸ್ಕೃತಿಯ ಬೆನ್ನೆಲುಬಾಗಿದ್ದು, ಮೇಳದಲ್ಲಿ ಬಣ್ಣಬಣ್ಣದ ಬೀನ್ಸ್‌ಗಳಿಂದ ಹಿಡಿದು ಕರ್ನಾಟಕದ ಅವರೆ, ಮಡಕೆ ಕಾಳು ಮತ್ತು ಪಿಳ್ಳೆ ಪೆಸರು, ಪಶ್ಚಿಮ ಬಂಗಾಳದ ಮಸೂರ್, ಒಡಿಶಾದ ಹಲಸಂದೆ, ಮಹಾರಾಷ್ಟ್ರದ ತೊಗರಿ, ಆಂಧ್ರ ಪ್ರದೇಶದ ಹುರುಳಿಕಾಳು, ತಮಿಳುನಾಡಿನ ತಟ್ಟಪೈರು, ಮಧ್ಯಪ್ರದೇಶದ ಹೆಸರು, ಉತ್ತರಪ್ರದೇಶದ ಉದ್ದಿನಕಾಳು ಮತ್ತು ರಾಜಸ್ಥಾನದ ವಲಾರ್ ಪಾಪಡಿ ಮೊದಲಾದ ಕಾಳುಗಳು ಭಾರತದ ಬೀಜ ವೈವಿಧ್ಯತೆಯನ್ನು ಕಾಣಬಹುದಾಗಿದೆ.

ಅಪರೂಪದ ರೆಕ್ಕೆ ಅವರೆ, ಅಕ್ಕಿ ಅವರೆ, ಚಪ್ಪರದವರೆ, ಚುಕ್ಕಿ ಶೇಂಗಾ, ತಮ್ಮೇ ಬೀಜ, ಕಪ್ಪು ಮತ್ತು ಹಸಿರು ಕಡಲೆ, ಕಪ್ಪು ಹುರುಳಿ ಮೊದಲಾದ ಕಾಳುಗಳ ಜೊತೆಗೆ ಜಿಐ ಟ್ಯಾಗ್ ಪಡೆದ ಗುಲ್ಬರ್ಗಾ ತೊಗರಿ ಮತ್ತು ಉತ್ತರ ಕರ್ನಾಟಕದ ಜವಾರಿ ತೊಗರಿ ಪ್ರದರ್ಶನವೂ ಇರಲಿದೆ.

ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ರೈತರು ಮತ್ತು ಬೀಜ ಸಂರಕ್ಷಕರು ಜವಾರಿ ಕಾಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ತರಲಿದ್ದು, ಬೆಳಗಾವಿಯ ಬೀಜ ಸಂರಕ್ಷಕ ಶಂಕರ ಲಂಗಟಿ ಮೂತ್ರಕೋಶ ಕಲ್ಲು ಕರಗಿಸುವ ಔಷಧೀಯ ಗುಣಲಕ್ಷಣ ಹೊಂದಿರುವ ಕಪ್ಪು ಕಡಲೆ ಮತ್ತು ಅಪರೂಪದ ಹಸಿರು ಕಡಲೆ ತಳಿಯನ್ನು ಪರಿಚಯಿಸಲಿದ್ದಾರೆ. ಧಾರವಾಡದ ದೇವಧಾನ್ಯ ರೈತ ಕಂಪನಿಯ ಕಪ್ಪು ಹುರುಳಿಕಾಳು, ಹಾವೇರಿಯ ಮಹಿಳಾ ಗುಂಪಿನ 18 ಪ್ರಕಾರದ ಕಡಲೆ ಕಾಯಿ ತಳಿಗಳನ್ನು ಪ್ರದರ್ಶನದಲ್ಲಿರಲಿವೆ.

ರಾಜ್ಯ ಪ್ರಶಸ್ತಿ ವಿಜೇತ ಚಿತ್ರ ನಟಿ ಮತ್ತು ರಂಗಕರ್ಮಿ ಅಕ್ಷತಾ ಪಾಂಡವಪುರ ಮೇಳ ಉದ್ಘಾಟಿಸಲಿದ್ದು, ಕಾಳು ಸಂರಕ್ಷಣೆಯ ಪ್ರಾತ್ಯಕ್ಷಿಕೆ ಮತ್ತು ಬೇಳೆ ಮಾಡುವ ಯಂತ್ರಗಳ ಪರಿಚಯ ಮಾಡಿಕೊಡಲಾಗುತ್ತದೆ. ಅಲ್ಲದೆ ಸಾವಯವ ಉತ್ಪನ್ನಗಳು, ಸಿರಿಧಾನ್ಯ, ದೇಸಿ ಬೀಜಗಳು, ಹಣ್ಣು-ತರಕಾರಿ ಮತ್ತು ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಬಾಯಿ ಚಪ್ಪರಿಸಲು ಜವಾರಿ ಕಾಳಿನ ಬಗೆ ಬಗೆಯ ಅಡುಗೆ ಖಾದ್ಯಗಳು ಇರಲಿದೆ ಎಂದು ಸಹಜ ಸಮೃದ್ಧ ಬಳಗದ ಕೃಷ್ಣ ಪ್ರಸಾದ್ ತಿಳಿಸಿದ್ದಾರೆ.

ನನ್ನ ಹತ್ಯೆಗೆ ಸಂಚು ನಡೆಸಿದ್ದೇಕೆಂಬುದು ತನಿಖೆಯಿಂದಲೇ ತಿಳಿಯಬೇಕು

ಮೈಸೂರಲ್ಲಿ ಸಚಿವ ಕೆ.ಎನ್.ರಾಜಣ್ಣ ಪುತ್ರ, ಎಂಎಲ್‌ಸಿ ರಾಜೇಂದ್ರ ಪ್ರತಿಕ್ರಿಯೆ

ಮೈಸೂರು,ಏ.3(ಪಿಎಂ)– ನನ್ನ ಹತ್ಯೆಗೆ ಸಂಚು ರೂಪಿಸಿ ಸುಪಾರಿ ನೀಡಿದ್ದ ಸಂಬಂಧ ತನಿಖೆ ನಡೆಯುತ್ತಿದ್ದು, ಹತ್ಯೆ ಸಂಚು ಮಾಡಿದ್ದು ಏಕೆಂಬುದು ತನಿಖೆಯಿಂದಲೇ ಹೊರಬರಬೇಕಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ಪ್ರತಿಕ್ರಿಯಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನನ್ನ ಮೇಲೆ ಹನಿಟ್ರ್ಯಾಪ್ ನಡೆದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಸಿಐಡಿ ತನಿಖೆಗೆ ಕೊಟ್ಟಿರುವುದು ನಮ್ಮ ತಂದೆಯವರಿಗೆ ಸಂಬಂಧಿಸಿದ ಹನಿಟ್ರ್ಯಾಪ್ ವಿಚಾರ. ಕಳೆದ ನಾಲ್ಕೈದು ದಿನಗಳಿಂದ ಈ ಸಂಬಂಧ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ನನ್ನ ಹತ್ಯೆಗೆ ಸುಪಾರಿ ನೀಡಿ ಸಂಚು ನಡೆಸಿದ್ದ ಸಂಬಂಧ ತನಿಖೆ ನಡೆಯುತ್ತಿದೆ. ಈ ಸಂಬಂಧ ಕೆಲವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ ಎಂದರು. ಸುಪಾರಿ ಹತ್ಯೆ ಸಂಬಂಧ ಒಂದು ಆಡಿಯೋ ಸಹ ವೈರಲ್ ಆಗಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ಬಗ್ಗೆ ಚರ್ಚೆ ನಿಮ್ಮ ಮಾಧ್ಯಮಗಳಲ್ಲೇ ನಡೆಯುತ್ತಿದೆ. ಹಲವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ ಎಂದರು.

ಎಲ್ಲಾ ಮಾಹಿತಿಯನ್ನು ಡಿಜಿ, ತುಮಕೂರು ಎಸ್‌ಪಿ ಅವರಿಗೆ ಕೊಟ್ಟಿದ್ದೇನೆ ಎಂದರಲ್ಲದೆ, ನಿಮ್ಮನ್ನು ಹತ್ಯೆ ಮಾಡಲು ಏಕೆ ಗುರಿ ಮಾಡಿದ್ದರು ಎಂಬ ಪ್ರಶ್ನೆಗೆ ಉತ್ತರಿಸಿ, ಗೊತ್ತಿಲ್ಲ, ಅದು ತನಿಖೆಯಿಂದಲೇ ಹೊರಬರಬೇಕು ಎಂದು ಹೇಳಿದರು.

ಒಂದನೇ ಪುಟದಿಂದ

ಬಲಿಪಶು ಮಾಡಿದ್ದಾರೆ!: ಪಾಂಡು ಪೂಜಾರಿ

ಇನ್ಸ್‌ಪೆಕ್ಟರ್ ಆಗಿ ಬಿ.ಜಿ.ಪ್ರಕಾಶ್ ಇರುವ ಕಾರಣದಿಂದ ಅವರ ಪ್ರಭಾವ ಕೆಲಸ ಮಾಡಿರಬಹುದು ಎಂಬ ಸಂಶಯದಿಂದ ನನ್ನ ಗುರುಗಳಾದ ಬಿ.ಜಿ.ರಾಘವೇಂದ್ರ ಅವರ ಮೂಲಕ ನ್ಯಾಯಾಲಯಕ್ಕೆ ಅಡ್ವಾನ್ಸ್ ಅರ್ಜಿ ಹಾಕಿಸಿದ್ದೆ. ಒಂದು ವೇಳೆ ಅದಾಗದಿದ್ದರೆ ಮಲ್ಲಿಗೆ ನಮಗೆ ಸಿಗುತ್ತಿದ್ದಳೇ, ಇಲ್ಲವೇ ಎಂದು ಹೇಳಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಅದು. ಈ ಪ್ರಕರಣದಲ್ಲಿ ತನಿಖಾಧಿ ಕಾರಿಗಳು ಹಾಗೂ ತನಿಖಾ ಸಿಬ್ಬಂದಿ ಆರೋಪಿಗಳಾಗುತ್ತಾರೆ. ಅಮಾಯಕನ ಮೇಲೆ ಆರೋಪ ಪಟ್ಟಿ ಸಲ್ಲಿಸುವುದು ಅಪರಾಧವೇ. ಡಿಎನ್‌ಎ ವರದಿ ಬಂದು ಸತ್ತಿರುವವರು ಯಾರು ಎಂಬುದು ಗೊತ್ತಾಗುವ ಮುನ್ನವೇ ಪೊಲೀಸರು ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ ಎಂದರೆ ಅವರು ನ್ಯಾಯಾಲಯವನ್ನೇ ವಂಚಿಸಿದ್ದಾರೆ ಎಂದೇ ಭಾವಿಸಬೇಕಾಗುತ್ತದೆ. ಈ ವಿಚಾರವನ್ನು ನ್ಯಾಯಾಧೀಶರ ಮುಂದೆ ಹೇಳಿದ್ದೇನೆ. ಇದರ ಜೊತೆಗೆ ಪರಿಶಿಷ್ಟ ಜಾತಿ ದೌರ್ಜನ್ಯ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಆರೋಪವೂ ಪೊಲೀಸರ ಮೇಲೆ ಬರುತ್ತದೆ. ಅಸ್ಥಿಪಂಜರವನ್ನು ಸುರೇಶನಿಂದಲೇ ಅಂತ್ಯಸಂಸ್ಕಾರ ಮಾಡಿಸಿದ್ದಾರೆ. ಈಗ ಅದನ್ನು ಹೊರ ತೆಗೆದು ಪರೀಕ್ಷೆಗೊಳಪಡಿಸಬೇಕಾಗುತ್ತದೆ. ಹತ್ಯೆಗೀಡಾಗಿದ್ದ ಮಹಿಳೆ ಯಾರು, ಆಕೆಯನ್ನು ಕೊಂದವರು ಯಾರು ಎಂಬುದು ಪತ್ತೆಯಾಗಬೇಕಾಗುತ್ತದೆ. ಆ ಪ್ರಕರಣದ ಆರೋಪಿಗಳು ಯಾರು ಎಂಬುದು ತನಿಖಾಧಿಕಾರಿಗಳಿಗೆ ಗೊತ್ತಿತ್ತೇ ಅಥವಾ ಯಾವುದಾದರೂ ಪ್ರಭಾವಕ್ಕೆ ಒಳಗಾಗಿದ್ದರೆ ಎಂಬುದರ ಬಗ್ಗೆಯೂ ತನಿಖೆ ನಡೆಯಬೇಕಾಗುತ್ತದೆ.

ಮುಗಿಸಿ ಬಿಡುತ್ತಾರೇನೋ ಎಂದು ಭಯವಾಗ್ತಿದೆ!

ಗೊತ್ತಿದ್ದರೂ, ಅವರನ್ನು ಹಿಡಿಯುವ ಕೆಲಸ ಮಾಡಲಿಲ್ಲ. ಒಂದು ವರ್ಷ ಆದ ಮೇಲೆ ಅವಳು ಸತ್ತು ಹೋಗಿದ್ದಾಳೆ ಎಂದು ರೆಕಾರ್ಡ್ ಮಾಡಿಬಿಡೋಣ. ಆಮೇಲೆ ನೀನು ಬೇರೆ ಮದುವೆ ಆಗು ಎಂದು ಹೇಳುತ್ತಿದ್ದರು. ಇನ್ಸ್‌ಪೆಕ್ಟರ್ ಪ್ರಕಾಶ್ ಅವರು ನನ್ನನ್ನು ಕಿಡ್ನಾಪ್ ಮಾಡಿಕೊಂಡು ಬಂದರು ಎಂದು ಹೇಳಬಹುದು. ನನ್ನನ್ನು ಅವರು ಹಿಡಿದುಕೊಂಡದ್ದು ಮನೆಯವರಿಗೇ ಗೊತ್ತಿರಲಿಲ್ಲ. ಒಂದು ಕೊಠಡಿಯಲ್ಲಿ ಲಾಕ್ ಮಾಡಿಬಿಟ್ಟು, ಮನೆಯವರನ್ನು ಕರೆಸಿ ಏನೇನೋ ಬರೆಸಿಕೊಂಡರು. ನಾನು ಕೊಲೆ ಮಾಡಿಲ್ಲ, ಹೆಂಡತಿ ಗಣೇಶನ ಜೊತೆ ಇದ್ದಾಳೆ ಎಂದು ಹೇಳಿದರೆ 'ನೀನು ಮಲ್ಲಿಗೆಯನ್ನು ಬೆಟ್ಟದಪುರದಲ್ಲಿ ಕೊಲೆ ಮಾಡಿ ಗಣೇಶನನ್ನು ತಿತಿಮತಿಯಲ್ಲಿ ಕೊಲೆ ಮಾಡಿದ್ದೀಯೆ' ಎಂದು ಹೇಳುತ್ತಿದ್ದರು. ಒಂದು ವೇಳೆ ಯಾರಾದರೂ ಗಂಡಸಿನ ಶವ ಸಿಕ್ಕಿದ್ದರೆ ಅದು ಗಣೇಶ, ಅವನನ್ನು ನಾನೇ ಕೊಲೆ ಮಾಡಿದ್ದೇನೆ ಎಂದು ಹೇಳಿಬಿಡುತ್ತಿದ್ದರು. 8 ದಿನಗಳ ಕಾಲ ಪ್ರತೀ ದಿನವೂ ನನ್ನನ್ನು ಹೊಡೆದು ಚಿತ್ರಹಿಂಸೆ ನೀಡಿದರು. ಕೊನೆಗೆ ಅಸ್ಥಿಪಂಜರವನ್ನು ನನ್ನಿಂದಲೇ ಹೂತು ಹಾಕಿಸಿದರು. ಹೂವನ್ನು ತಂದು ನನ್ನ ಕೈಗೆ ಕೊಟ್ಟು, ಇದು ನಿನ್ನ ಹೆಂಡತಿಯೇ ಕಣೋ, ಪೂಜೆ ಮಾಡು ಎಂದು ಮಾಡಿಸಿದರು. ನನ್ನನ್ನು ಎನ್‌ಕೌಂಟರ್ ಮಾಡಿ ಬಿಸಾಕುವುದಾಗಿ ಹೆದರಿಸುತ್ತಿದ್ದರು. ಪಾಂಡು ಪೂಜಾರಿ ವಕೀಲರು ಯಾವುದೇ ಹಣ ತೆಗೆದುಕೊಳ್ಳದೇ ನನಗೆ ಬಹಳ ಸಹಾಯ ಮಾಡಿದ್ದಾರೆ. ಪೊಲೀಸರೆಲ್ಲರೂ ಹೀಗೇ ಇರುತ್ತಾರಾ ಎಂದು ನನಗೆ ಬೇಸರವಾಗುತ್ತಿದೆ.

ಒಂದೇ ಕುಟುಂಬದ ನಾಲ್ವರು ದುರ್ಮರಣ

ಸ್ಥಳ(ಎಕ್ಸಿಟ್ ಪಾಯಿಂಟ್)ದಲ್ಲಿ ಚಾಲಕ ಗೊಂದಲಕ್ಕೀಡಾಗಿದ್ದಾರೆ. ನಿಧಾನವಾಗಿ ಸರ್ವಿಸ್ ರಸ್ತೆ ಕಡೆಗೆ ಹೋಗುತ್ತಿದ್ದವರು, ಇದ್ದಕ್ಕಿದ್ದಂತೆ ನಿರ್ಧಾರ ಬದಲಿಸಿ ಕಾರನ್ನು ಎಕ್ಸ್‌ಪ್ರೆಸ್ ವೇಗೆ ತಿರುಗಿಸಿದ್ದಾರೆ. ಇದೇ ವೇಳೆಗೆ ವೇಗವಾಗಿ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಐರಾವತ ಬಸ್(ಕೆ.ಎ–57, ಎಫ್–1721) ಡಿಕ್ಕಿ ಹೊಡೆದಿದೆ. ಬಸ್ ಹಾಗೂ ಡಿವೈಡರ್ ನಡುವೆ ಸಿಲುಕಿ ಕಾರು ಸಂಪೂರ್ಣ ನಜ್ಜು ಗುಜ್ಜಾಗಿದೆ. ಘಟನೆಯಲ್ಲಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರೆ ಇನ್ನಿಬ್ಬರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಭೀಕರ ರಸ್ತೆ ಅಪಘಾತದಿಂದಾಗಿ ಕೆಲಕಾಲ ಹೆದ್ದಾರಿ ಸಂಚಾರ ಅಸ್ತವ್ಯಸ್ತವಾಗಿತ್ತು. ಅಪ್ಪಚ್ಚಿಯಾದ ಕಾರಿನಲ್ಲಿ ಸಿಲುಕಿದ್ದ ದೇಹಗಳನ್ನು ಜೆಸಿಬಿ ಸಹಾಯದಿಂದ ಹೊರ ತೆಗೆಯಲಾಯಿತು. ಕಾರಿನಲ್ಲಿದ್ದ ದಾಖಲೆಗಳ ನೆರವಿನಿಂದ ಮೃತರ ಗುರುತು ಪತ್ತೆಹಚ್ಚಿ, ಅವರ ಸಂಬಂಧಿಕರಿಗೆ ವಿಷಯ ತಿಳಿಸಲಾಯಿತು. ದೇಹಗಳನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ. ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಇನ್ನಿತರ ಪೊಲೀಸ್ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು. ಈ ಸಂಬಂಧ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿ ಸಭೆ

ನಬಾರ್ಡ್ ಬ್ಯಾಂಕ್ ಸಾಲ ತೀರಿಸಲು ಸರ್ವ ಸದಸ್ಯರ ಒಪ್ಪಿಗೆ

ತಿ.ನರಸೀಪುರ, ಏ.3– ನಬಾರ್ಡ್ ಬ್ಯಾಂಕ್‌ಗೆ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಬಾಕಿ ಉಳಿಸಿಕೊಂಡಿರುವ 2 ಕೋಟಿ ರೂ. ಸಾಲವನ್ನು ಬ್ಯಾಂಕ್‌ನ ನಿಶ್ಚಿತ ಠೇವಣಿ ಹಣದಿಂದ ತೀರಿಸಲು ಬ್ಯಾಂಕ್ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿತು.



ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕರನ್ನು ಬ್ಯಾಂಕ್‌ನಿಂದ ಸನ್ಮಾನಿಸಲಾಯಿತು.

ಪಟ್ಟಣದ ಸಹಕಾರ ಬ್ಯಾಂಕ್ ಸಭಾಂಗಣದಲ್ಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿ ಸದಸ್ಯರ ಚೊಚ್ಚಲ ಸಭೆಯಲ್ಲಿ ನಬಾರ್ಡ್‌ನಿಂದ ಪಡೆದಿದ್ದ ಸಾಲವನ್ನು ಬ್ಯಾಂಕ್‌ನ ಸ್ವಂತ ಬಂಡವಾಳದಿಂದ ಇಟ್ಟಿರುವ ಠೇವಣಿ ಹಣದಿಂದ ಪಾವತಿಸಿ ಸಾಲ ಮುಕ್ತವಾಗಲು ಚರ್ಚೆ ನಡೆದು ಸರ್ವ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ ಮಾತನಾಡಿ, ನಬಾರ್ಡ್ ಸಾಲದ ಆಧಾರದ ಮೇಲೆ ಬ್ಯಾಂಕ್ ನಡೆಯುತ್ತಿದ್ದು, ನಷ್ಟದಲ್ಲಿದೆ. ಹಾಗಾಗಿ ಸ್ವಂತ ಬಂಡವಾಳದೊಂದಿಗೆ ವ್ಯವಹರಿಸಬೇಕಾದ ಅನಿವಾರ್ಯತೆ ಬ್ಯಾಂಕಿಗಿದೆ. ಹೀಗಾಗಿ ನಬಾರ್ಡ್‌ನಿಂದ ಮಾಡಿರುವ 4.25 ಕೋಟಿ ರೂ.ಗಳ ಪೈಕಿ 2.25 ಕೋಟಿ ಸಾಲ ತೀರಿಸಲಾಗಿದ್ದು, ಉಳಿಕೆ 2 ಕೋಟಿ ರೂ.ಗಳನ್ನು ಪಾವತಿಸಿದರೆ ಮತ್ತೆ ಹತ್ತಾರು ಕೋಟಿ ಸಾಲ ಸಿಗಲಿದೆ. ಹಾಗಾಗಿ ಬೇರೆ ಯಾವುದೇ ಮೂಲದಿಂದಲೂ ಸಾಲ ತೀರಿಸಲು ಸಾಧ್ಯವಿಲ್ಲ. ಆದ್ದರಿಂದ ಬ್ಯಾಂಕ್‌ನಲ್ಲಿರುವ 1.2 ಕೋಟಿ ನಿಶ್ಚಿತ ಠೇವಣಿ ಹಣದಿಂದ ಸಾಲ ಪಾವತಿಸಲು ಸದಸ್ಯರು ಒಪ್ಪಿಗೆ ಸೂಚಿಸುವಂತೆ ಮನವಿ ಮಾಡಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಮಾಜಿ ಅಧ್ಯಕ್ಷ ವಜ್ರೇಗೌಡ ನಾನೂ 20 ವರ್ಷ ಬ್ಯಾಂಕ್ ಅಧ್ಯಕ್ಷನಾಗಿದ್ದೆ. ಆ ವೇಳೆ ಬ್ಯಾಂಕ್‌ಗೆ ಲಾಭ ತಂದುಕೊಟ್ಟು 1.2 ಕೋಟಿ ರೂ. ನಿಶ್ಚಿತ ಠೇವಣಿ ಇಟ್ಟಿದ್ದೇನೆ. ಈಗ ಅದನ್ನು ನಬಾರ್ಡ್ ಬ್ಯಾಂಕ್‌ಗೆ ಜಮೆ ಮಾಡಿದರೆ, ಬ್ಯಾಂಕ್ ಸಿಬ್ಬಂದಿಗೆ ಹಣ ಎಲ್ಲಿಂದ ತರುತ್ತೀರಾ, ಬ್ಯಾಂಕ್‌ನ ಇತರೆ ಖರ್ಚು ವೆಚ್ಚಗಳು ಹೇಗೆ ಎಂದು ಪ್ರಶ್ನಿಸಿದರು.

ಇದಕ್ಕುತ್ತರಿಸಿದ ಅಧ್ಯಕ್ಷ ಮಹದೇವಣ್ಣ ಇದೀಗ ನಬಾರ್ಡ್ ಬ್ಯಾಂಕ್ ಸಾಲ ತೀರಿಸಬೇಕಾದ ಪರಿಸ್ಥಿತಿ ಎದುರಾಗಿರುವುದರಿಂದ ಮೊದಲು ನಿಶ್ಚಿತ ಠೇವಣಿಯಿಂದ ನಬಾರ್ಡ್‌ಗೆ ಸಾಲ ಸಂದಾಯ ಮಾಡೋಣ. ನಂತರ 10 ಕೋಟಿ ರೂ. ಸಾಲ ತರುತ್ತೇನೆ. ಆ ಹಣದಲ್ಲಿ ಮತ್ತೆ 1.2 ಕೋಟಿ ರೂ. ಯಥಾಸ್ಥಿತಿ ಡಿಪಾಸಿಟ್ ಮಾಡೋಣ. ಈಗ ಸಾಲ ತೀರಿಸದಿದ್ದರೇ ಬಡ್ಡಿ ಕಟ್ಟುತ್ತಲೇ ಇರಬೇಕಾಗುತ್ತದೆ ಎಂದರು.

ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ಯಾವುದೋ ಹಣವನ್ನು ಮತ್ತ್ಯಾವುದಕ್ಕೋ ಉಪಯೋಗಿಸುವುದು ಸರಿಯಲ್ಲ. ಸ್ವಂತ ಬಂಡವಾಳದ ಮೂಲಕ ಸಾಲ ತೀರಿಸಬೇಕು. ನಾನು ಅಧ್ಯಕ್ಷನಾಗಿದ್ದ ವೇಳೆ ಬ್ಯಾಂಕ್ ಲಾಭದಾಯಕ ಸ್ಥಿತಿಯಲ್ಲಿತ್ತು. ರಾಜ್ಯದ 181 ಬ್ಯಾಂಕ್ ಪೈಕಿ ನಾವು ಮಾತ್ರ ಷೇರುದಾರರಿಗೆ ಡಿವಿಡೆಂಟ್ ಕೊಡುತ್ತಿದ್ದೆವು. ಡೆತ್ ಫಂಡ್ ಸಹ ಕೊಟ್ಟಿದ್ದೇವೆ. ನಬಾರ್ಡ್‌ನವರು ಬೇರೆ ಕಡೆಯಿಂದ 7.18 ಕೋಟಿ ರೂ. ಸಾಲ ನೀಡಿದ್ದಾರೆ. ಈಗ ನಾವು ಆ ಮೊತ್ತವನ್ನು ರೈತರಿಗೆ ಸಾಲವಾಗಿ ಕೊಟ್ಟಿದ್ದೇವೆ. ಕೊಟ್ಟಿರುವ ಸಾಲ ವಸೂಲಿಯಾದರೂ 12.54 ಲಕ್ಷ ರೂ. ಸಂಗ್ರಹವಾಗುತ್ತೆ. ಈ ಪೈಕಿ 22 ಲಕ್ಷ ರೂ. ಸಿಬ್ಬಂದಿ ವೆಚ್ಚಕ್ಕೆ ತಗಲುತ್ತದೆ. ಇದರಿಂದ 10 ಲಕ್ಷ ರೂ. ನಷ್ಟವಾಗುತ್ತಿದೆ ಎಂದರು.

ಮೊದಲ ಬಾರಿಗೆ ಮೈಸೂರು ಎಂಸಿಡಿಸಿಸಿ ಬ್ಯಾಂಕ್‌ಗೆ ಸ್ಪರ್ಧಿಸುವ ಅಥವಾ ಮತದಾನ ಮಾಡುವ ಅವಕಾಶ ದೊರಕಿದ ಹಿನ್ನೆಲೆಯಲ್ಲಿ ಬ್ಯಾಂಕ್‌ನಿಂದ ಒಬ್ಬರು ಡೆಲಿಕೇಟ್‌ರನ್ನು ಆಯ್ಕೆ ಮಾಡುವ ಸಂಬಂಧ ಚರ್ಚೆ ನಡೆಯಿತು. ಅಧ್ಯಕ್ಷ ಮಹದೇವಣ್ಣ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದರೆ, ತಮಗೂ ಒಂದು ಅವಕಾಶ ಮಾಡಿಕೊಡುವಂತೆ ನಿರ್ದೇಶಕ ಲಿಂಗಪ್ಪಾಜಿ ಮನವಿ ಮಾಡಿದರು. ಏ.20 ಡೆಲಿಕೇಟ್ ಆಯ್ಕೆಗೆ ಅಂತಿಮ ದಿನವಾಗಿರುವ ಹಿನ್ನೆಲೆಯಲ್ಲಿ ಆಯ್ಕೆಯ ಜವಾಬ್ದಾರಿಯನ್ನು ಅಧ್ಯಕ್ಷರಿಗೆ ಬಿಡಲಾಯಿತು. ಬ್ಯಾಂಕ್ ವ್ಯವಸ್ಥಾಪಕ ಮಹೇಶ್ ಮಾತನಾಡಿ ಬ್ಯಾಂಕಿಗೆ ಸ್ವಂತ ಬಂಡವಾಳ ಸಂಗ್ರಹಿಸುವ ಹಿನ್ನೆಲೆಯಲ್ಲಿ ಮತ್ತೆ ಪಿಗ್ಮಿ ಹಣ ಸಂಗ್ರಹಕ್ಕೆ ನಿರ್ದೇಶಕರ ಒಪ್ಪಿಗೆ ಕೋರಿದರು. ಬನ್ನೂರು, ತಲಕಾಡು, ಸೋಸಲೆ, ಕಸಬಾ, ಮೂಗೂರು ಹೋಬಳಿಯಲ್ಲಿ ಪಿಗ್ಮಿ ಸಂಗ್ರಹಕ್ಕೆ ಹೆಚ್ಚುವರಿ ಏಜೆಂಟ್ ನೇಮಿಸಿಕೊಳ್ಳುವಂತೆ ನಿರ್ದೇಶಕರು ಸಲಹೆ ನೀಡಿದರು.

ಜಿಲ್ಲಾ ವ್ಯವಸ್ಥಾಪಕ ಮುತ್ತುರಾಜ್, ಬ್ಯಾಂಕ್ ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ, ಸದಸ್ಯರಾದ ಎಂ.ಶಿವಮೂರ್ತಿ, ಎನ್.ಅನಿಲ್ ಕುಮಾರ್, ಎಂ.ಮಲ್ಲಿಕಾರ್ಜುನಸ್ವಾಮಿ, ಎನ್.ಲಿಂಗಪ್ಪಾಜಿ, ಟಿ.ಎಸ್.ಪ್ರಸನ್ನ, ಹೆಮ್ಮಿಗೆ ಸೋಮಣ್ಣ, ಬನ್ನೂರು ಆರ್.ಮಹೇಶ್, ಶಂಭುದೇವನಪುರ ಮಹೇಶ್, ಶಿವಕುಮಾರ್, ರಾಜಮಣಿ, ಎಂ.ನಾಗರತ್ನ ಹಾಜರಿದ್ದರು.

ರೈತರಿಗೆ ಸಾಲ ವಿತರಣೆ ವಿಚಾರಕ್ಕೆ ಗರಂ

ತಮ್ಮ ಗಮನಕ್ಕೆ ಬಾರದೇ ಬ್ಯಾಂಕ್‌ನಿಂದ ರೈತರಿಗೆ ಸಾಲ ವಿತರಣೆ ಮಾಡಲಾಗುತ್ತಿದೆ ಎಂದು ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಗರಂ ಆದರು. ನನ್ನ ಕ್ಷೇತ್ರದಲ್ಲಿ ರೈತರಿಗೆ ಸಾಲ ವಿತರಿಸುವ ಸಂದರ್ಭ ನನ್ನ ಗಮನಕ್ಕೆ ತಂದು ಸಾಲ ವಿತರಿಸಬೇಕು. ಇಲ್ಲದಿದ್ದರೆ ಮುಂದೆ ನಡೆಯುವ ಸಭೆಯಲ್ಲಿ ಏನು ಮಾಡಬೇಕೆಂದು ನನಗೂ ಗೊತ್ತಿದೆ ಎಂದು ಕಿಡಿಕಾರಿದ ಅವರು ಮುಂದಿನ 5 ವರ್ಷಗಳ ಕಾಲ ನಾನು ತೀಟೆ ಮಾಡುತ್ತಲೇ ಇರುತ್ತೇನೆ. ನಿಮಗೆ ಬೇಕಾದ ನಿಮ್ಮ ದೊಡ್ಡಪ್ಪ-ಚಿಕ್ಕಪ್ಪರಿಗೆ ಲೋನ್ ಕೊಡಿ ಬೇಡ ಅನ್ನಲ್ಲ. ಆದರೆ ನನ್ನ ಗಮನಕ್ಕೆ ತಂದು ಕೊಡಿ. ನನಗೆ ಗೌರವ ಕೊಡಿ. ಎರಡರಷ್ಟು ನನ್ನಿಂದ ಗೌರವ ಪಡೆಯಿರಿ ಎಂದರು.

ತಂತ್ರಜ್ಞಾನ ಮುಂದುವರೆದರೂ ಮನುಷ್ಯನ ಆಲೋಚನಾ ಶಕ್ತಿ ಹೆಚ್ಚು

ಸಾಹಿತಿ ಡಾ.ಕಿರಣ್ ಸಿಡ್ಲೆಹಳ್ಳಿ

ಹೆಚ್.ಡಿ.ಕೋಟೆ, ಏ.3– ಕನ್ನಡ ಸಾಹಿತ್ಯ ಮೊದಲಿಗೆ ಕಾವ್ಯಗಳಲ್ಲಿ ಉಗಮವಾಯಿತು. ಆನಂತರ ಗದ್ಯ ಪ್ರಬಂಧ, ಲಲಿತ ಪ್ರಬಂಧಗಳು ಬಂದವು. ರಾಮಾಯಣ, ಮಹಾಭಾರತದಂತಹ ಮಹಾ ಕಾವ್ಯಗಳು ಕೂಡ ಸಾಹಿತ್ಯದ ಮೂಲಕವೇ ರಚನೆಯಾಗಿದೆ. ಹೀಗಾಗಿ ವಿಜ್ಞಾನ ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಮನುಷ್ಯನ ಆಲೋಚನಾ ಶಕ್ತಿ ಹೆಚ್ಚು ಎಂದು ಸಾಹಿತಿ ಡಾ.ಕಿರಣ್ ಸಿಡ್ಲೆಹಳ್ಳಿ ತಿಳಿಸಿದರು.



ಕಾರ್ಯಕ್ರಮದಲ್ಲಿ ಮುಖ್ಯಪೇದೆ ರಮೇಶ್‌ರಾವ್ ಅವರನ್ನು ಸನ್ಮಾನಿಸಲಾಯಿತು.

ಪಟ್ಟಣದ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆದ ವಿದ್ವಾನ್ ಎಂ.ಜಿ.ನಂಜುಂಡಾರಾಧ್ಯರ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿರಿಯ ಕವಿಗಳು ಬದುಕಿದರು ಬದುಕಿದಂತೆ ಬರೆದರು ಅದು ಶ್ರೇಷ್ಠ ಸಾಹಿತ್ಯವಾಯಿತು. ಮೊದಲಿಗೆ ಜನಪದ, ಮಹಾಕಾವ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ, ಹೊಸಗನ್ನಡ ಹೀಗೆ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರವಾಗಿ ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜೊತೆಗೆ ಐತಿಹಾಸಿಕ ಹಿನ್ನೆಲೆ ಮತ್ತು ಪ್ರಮುಖ ಸ್ಥಳಗಳ ವೈಶಿಷ್ಟ್ಯತೆ ಬಗ್ಗೆ ತಿಳಿದುಕೊಳ್ಳಬೇಕು ಎಂದರು.

ಮುಖ್ಯಮಂತ್ರಿ ಪದಕ ಪುರಸ್ಕಾರ ಪಡೆದ ಗುಪ್ತಚಾರ ವಿಭಾಗದ ಮುಖ್ಯಪೇದೆ ರಮೇಶ್‌ರಾವ್ ಅಭಿನಂದನೆ ಸ್ವೀಕರಿಸಿ ಮಾತನಾಡಿ, ನಾವು ಶಿಕ್ಷಣ ಪಡೆಯುವ ಸಂದರ್ಭ ತುಂಬಾ ಕಷ್ಟವಿತ್ತು ಆದರೆ ನಿಮಗೆ ಎಲ್ಲಾ ಸೌಲಭ್ಯಗಳು ಇದ್ದು ನಿಮ್ಮ ತಂದೆ ತಾಯಿ ನಿಮ್ಮ ಬಗ್ಗೆ ಕನಸು ಕಟ್ಟಿಕೊಂಡಿರುತ್ತಾರೆ. ಅದನ್ನು ಈಡೇರಿಸಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಪುರಸಭೆ ಅಧ್ಯಕ್ಷೆ ಎಂ.ಶಿವಮ್ಮ, ಕಾಲೇಜಿನ ಪ್ರಾಂಶುಪಾಲ ಡಾ.ಕುಮಾರಸ್ವಾಮಿ, ಉಪನ್ಯಾಸಕರಾದ ಬಸಪ್ಪ, ರಮೇಶ, ಕಸಾಪ ಗೌರವ ಕಾರ್ಯದರ್ಶಿ ಮಾ.ಶಿ.ಗಿರೀಶ್ ಮೂರ್ತಿ, ಸದಸ್ಯರಾದ ಸ್ವಾಮಿ, ರಘುರಾವ್, ಚಾಕಹಳ್ಳಿ ಕೃಷ್ಣ ಇದ್ದರು.

ಅಕ್ಕನಿಗೆ ಹಿಂಸೆ ನೀಡುತ್ತಿದ್ದ ಬಾವನ ಕೊಂದ ಬಾಮೈದ

ತಿ.ನರಸೀಪುರ, ಏ.3– ಮದ್ಯಪಾನ ಮಾಡಿ ಅಕ್ಕನಿಗೆ ಹಿಂಸೆ ನೀಡುತ್ತಿದ್ದ ಬಾವನನ್ನು ಬಾಮೈದನೇ ಅಲ್ಯೂಮಿನಿಯಂ ಪಾತ್ರೆಯಿಂದ ಹೊಡೆದು ಹತ್ಯೆ ಮಾಡಿರುವ ಘಟನೆ ತಾಲೂಕಿನ ಚಂದಹಳ್ಳಿಯಲ್ಲಿ ನಡೆದಿದೆ.



ಮುರಳಿ

ಗ್ರಾಮದ ರೇಮಮ್ಮ ಅವರ ಪುತ್ರ, ಆಟೋ ಚಾಲಕ ಮುರಳಿ ಹತ್ಯೆಯಾದವರು. ಮಾಡ್ರಹಳ್ಳಿ ಗ್ರಾಮದ ಶ್ರೀನಿವಾಸ್ ಹತ್ಯೆ ಆರೋಪಿ.

ವಿವರ: ಚಂದಹಳ್ಳಿ ಗ್ರಾಮದ ನಿವಾಸಿ ಮುರಳಿಗೆ ಮಾಡ್ರಹಳ್ಳಿ ಗ್ರಾಮದ ಸಿಂಧು ಎಂಬಾಕೆಯನ್ನು ಮದುವೆ ಮಾಡಿಕೊಡಲಾಗಿತ್ತು. ಆರಂಭದಲ್ಲಿ ಅನ್ಯೋನ್ಯವಾಗಿದ್ದ ದಂಪತಿ ನಂತರದ ದಿನಗಳಲ್ಲಿ ನಿತ್ಯ ಜಗಳವಾಡುತ್ತಿದ್ದರು ಎನ್ನಲಾಗಿದೆ. ಕುಡಿತದ ದಾಸನಾಗಿದ್ದ ಮುರಳಿ ನಿತ್ಯ ಮದ್ಯಪಾನ ಮಾಡಿ ಹೆಂಡತಿಯೊಂದಿಗೆ ಜಗಳವಾಡಿ, ಹಲ್ಲೆ ನಡೆಸುತ್ತಿದ್ದ. ಈ ಸಂಬಂಧ ಊರಿನ ಯಜಮಾನರು ನ್ಯಾಯ ಪಂಚಾಯಿತಿ ಮಾಡಿ ಮುರಳಿಗೆ ಸಾಕಷ್ಟು ಬುದ್ಧಿವಾದ ಹೇಳಿದರೂ ಆತ ಮತ್ತೆ ಮದ್ಯಪಾನ ಮಾಡಿ ಜಗಳವಾಡುತ್ತಿದ್ದ. ಇದರಿಂದ ಬೇಸತ್ತ ಸಿಂಧು ತಲಕಾಡು ಠಾಣೆಗೆ ಗಂಡನ ವಿರುದ್ಧ ದೂರು ನೀಡಿ ತನ್ನ ತವರು ಮಾಡ್ರಹಳ್ಳಿಯಲ್ಲಿ ವಾಸವಿದ್ದಳು. ಈ ನಡುವೆ ಮುರಳಿ ತನ್ನ ತಾಯಿ ರೇವಮ್ಮ ಸಿಂಧುಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ತಿಳಿಸಿ ಮಾಡ್ರಹಳ್ಳಿಯಿಂದ ಕರೆದುಕೊಂಡು ಬಂದಿದ್ದ ಎನ್ನಲಾಗಿದೆ.

ಆದರೆ ಮತ್ತೆ ತನ್ನ ಹಳೇ ಚಾಳಿ ಮುಂದುವರೆಸಿದ ಮುರಳಿ ತಿ.ನರಸೀಪುರ ಆಸ್ಪತ್ರೆಗೆ ಹೋಗಿದ್ದ ಸಿಂಧು ಜೊತೆ ಜಗಳವಾಡಿದ್ದಾನೆ. ಇದರಿಂದ ಬೇಸತ್ತ ಸಿಂಧು ತಿ.ನರಸೀಪುರ ಪೊಲೀಸ್ ಠಾಣೆ ಹಾಗೂ ಮೈಸೂರು ಮಹಿಳಾ ಠಾಣೆಗೆ ದೂರು ನೀಡಿದ್ದರು. ನರಸೀಪುರ ಹಾಗೂ ಮೈಸೂರು ಮಹಿಳಾ ಠಾಣೆಗೆ ಮುರಳಿಯನ್ನು ಕರೆಸಿಕೊಂಡಿದ್ದ ಪೊಲೀಸರು ಬುದ್ಧಿವಾದ ಹೇಳಿ ಕಳುಹಿಸಿದ್ದರು. ಇದರಿಂದ ಆಕ್ರೋಶಗೊಂಡ ಮುರಳಿ ತನ್ನ ಹೆಂಡತಿ ಹಾಗೂ ಅಮ್ಮನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಈ ವೇಳೆ ಸಿಂಧು ತನ್ನ ತಮ್ಮ ಶ್ರೀನಿವಾಸನಿಗೆ ಫೋನ್ ಮಾಡಿ ವಿಚಾರ ತಿಳಿಸಿದ್ದಾಳೆ. ಇದರಿಂದ ಕೋಪಗೊಂಡ ಶ್ರೀನಿವಾಸ್ ತನ್ನ ಇಬ್ಬರು ಸ್ನೇಹಿತರೊಂದಿಗೆ ಆಗಮಿಸಿ ಅಲ್ಯೂಮಿನಿಯಂ ಪಾತ್ರೆಯಿಂದ ಹೊಡೆದು ಮುರಳಿ ಹತ್ಯೆ ಮಾಡಿ ಮೋರಿಗೆ ಎಸೆದು ಹೋಗಿದ್ದಾರೆ ಎಂದು ಮುರಳಿ ತಾಯಿ ತಲಕಾಡು ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ತಲಕಾಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೂತನ ವಾಣಿಜ್ಯ ಮಳಿಗೆಗಳ ಉದ್ಘಾಟನೆ



ಟಿಎಪಿಸಿಎಂಎಸ್ ವಾಣಿಜ್ಯ ಮಳಿಗೆ ನಾಮಫಲಕವನ್ನು ಶಾಸಕ ಹರೀಶ್‌ಗೌಡ ಅನಾವರಣಗೊಳಿಸಿದರು.

ಹುಣಸೂರು, ಏ.3– ನಗರದ ಟಿಎಪಿಸಿಎಂಎಸ್ ವತಿಯಿಂದ ನಿರ್ಮಿಸಲಾದ 9 ನೂತನ ವಾಣಿಜ್ಯ ಮಳಿಗೆಗಳನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿ, ನಾಮಫಲಕ ಅನಾವರಣಗೊಳಿಸಿದರು.

ನಂತರ ಮಾತನಾಡಿದ ಅವರು ಹಿಂದೆ ಮೊದಲ ಹಂತದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ 9 ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಇದೀಗ ಮತ್ತೆ 50 ಲಕ್ಷ ರೂ. ವೆಚ್ಚದಲ್ಲಿ 9 ಮಳಿಗೆಗಳನ್ನು ನಿರ್ಮಿಸಿ ಉದ್ಘಾಟಿಸಲಾಗಿದೆ. ಟಿಎಪಿಸಿಎಂಎಸ್‌ನ 18 ವಾಣಿಜ್ಯ ಮಳಿಗೆಗಳಿಂದ ಸಂಘಕ್ಕೆ ಹೆಚ್ಚಿನ ಆದಾಯ ಬರಲಿದೆ ಎಂದ ಅವರು ಶೀಘ್ರ ರೈತಭವನ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳುವ ಜೊತೆಗೆ ಸಂಘದ ಪ್ರಗತಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಸಂಘದ ಅಧ್ಯಕ್ಷ ಹೆಚ್.ಟಿ.ಬಾಬು ಮಾತನಾಡಿ, ಸರ್ಕಾರದ ಯಾವುದೇ ಅನುದಾನವಿಲ್ಲದೆ ನಮ್ಮ ಟಿಎಪಿಸಿಎಂಎಸ್ ಹಾಗೂ ಜಿ.ಡಿ.ಹರೀಶ್‌ಗೌಡರ ಸಹಕಾರದಿಂದ 1 ಕೋಟಿ ರೂ. ವೆಚ್ಚದಲ್ಲಿ 18 ಮಳಿಗೆಗಳನ್ನು ನಿರ್ಮಿಸಲಾಗಿದೆ. ನನ್ನ ಅವಧಿಯಲ್ಲಿ ಮಳಿಗೆಗಳು ಉದ್ಘಾಟನೆಗೊಂಡಿರುವುದಕ್ಕೆ ಸಂತೋಷವಾಗಿದೆ. ಶಾಸಕರ ಸಹಕಾರವನ್ನು ಎಂದು ಮರೆಯಲಾಗದು ಎಂದರು.

ಉಪಾಧ್ಯಕ್ಷ ರೇವಣ್ಣ, ನಿರ್ದೇಶಕರಾದ ಇಂದುಕಲಾ, ಸುಜಾತ, ಮಂಗಳಗೌರಿ, ನಾಗರಾಜು, ಕೆಂಪೇಗೌಡ, ವೆಂಕಟೇಶ್, ರಮೇಶ್, ಚಂದ್ರಶೇಖರ್, ಪ್ರೇಮಕುಮಾರ್, ಬಾಬು, ಕಾರ್ಯದರ್ಶಿ ಹೇಮಲತಾ ಇದ್ದರು.

ಪಿಎಲ್‌ಡಿ ಬ್ಯಾಂಕ್‌ಗೆ ಚೆಲುವಪ್ಪ ನಿರ್ದೇಶಕ

ನಂಜನಗೂಡು, ಏ.3– ನಗರದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ ಚೆಲುವಪ್ಪ ಆಯ್ಕೆಯಾಗಿದ್ದಾರೆ.



ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ ಚೆಲುವಪ್ಪ ಆಯ್ಕೆಯಾಗಿದ್ದಾರೆ.

ಒಟ್ಟು 11 ಸದಸ್ಯ ಬಲದ ಪಿಎಲ್‌ಡಿ ಬ್ಯಾಂಕ್‌ನಲ್ಲಿ 10 ಸ್ಥಾನಗಳಿಗೆ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು. ಸಾಲಗಾರರ ಕ್ಷೇತ್ರದ ಒಂದು ಸ್ಥಾನಕ್ಕೆ ಚೆಲುವಪ್ಪ ಮತ್ತು ಬಿ.ಎಂ.ಮೂರ್ತಿ ನಡುವೆ ಸ್ಪರ್ಧೆ ಏರ್ಪಟ್ಟು ಚುನಾವಣೆ ನಡೆಸಲಾಗಿತ್ತು. ಬಳಿಕ ಪಿಎಲ್‌ಡಿ ಬ್ಯಾಂಕ್‌ನಲ್ಲಿ ನಡೆದ ಮತ ಎಣಿಕೆಯಲ್ಲಿ ಚೆಲುವಪ್ಪ 21 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರೆ ಪ್ರತಿಸ್ಪರ್ಧಿ 10 ಮತಗಳನ್ನು ಪಡೆದು ಪರಾಭವಗೊಂಡರು.

ನೂತನ ನಿರ್ದೇಶಕ ಚೆಲುವಪ್ಪ ಮಾತನಾಡಿ, ಸತತ 6ನೇ ಬಾರಿಗೆ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆ ಮಾಡಿರುವ ನನ್ನ ಎಲ್ಲಾ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಾನು ಸಹಕಾರ ಸಂಘಗಳ ಏಳಿಗೆಗಾಗಿ ಶ್ರಮಿಸುತ್ತೇನೆ. ಜೊತೆಗೆ ಸಹಕಾರ ಇಲಾಖೆಯಿಂದ ರೈತರಿಗೆ ದೊರಕುವ ಸವಲತ್ತುಗಳನ್ನು ಅರ್ಹ ರೈತರಿಗೆ ತಲುಪಿಸುವ ಕೆಲಸ ಮಾಡುತ್ತೇನೆ ಎಂದರು.

ಇದೇ ವೇಳೆ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚೆನ್ನಪ್ಪ, ತಾಪಂ ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ಕೆಂಪಣ್ಣ, ಮಂಜುನಾಥ್, ದೊರೆಸ್ವಾಮಿ ನಾಯಕ, ಮಹದೇವನಾಯಕ, ಶಿವಪ್ಪ ದೇವರು, ಮಹದೇವು, ಜಯಣ್ಣ, ರಾಜು ಇತರರಿದ್ದರು.

ಹುಣಸೂರು ನಗರಸಭೆ ಸಾಮಾನ್ಯ ಸಭೆ

ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಸದಸ್ಯರು

ಹುಣಸೂರು, ಏ.3– ನಗರದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ನಗರಸಭೆ ಅಧಿಕಾರಿಗಳನ್ನು ಸದಸ್ಯರು ತರಾಟೆ ತೆಗೆದುಕೊಂಡರು.



ನಗರಸಭೆ ಸಾಮಾನ್ಯ ಸಭೆ ನಡೆಯಿತು.

ಸಭೆಯಲ್ಲಿ ಸದಸ್ಯ ಮೊಹಮ್ಮದ್ ಯೂನಿಸ್ ಮಾತನಾಡಿ, ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ಲಕ್ಷ್ಮಣ ತೀರ್ಥ ನದಿಗೆ ಸೇರದಂತೆ 26 ಕೋಟಿ ರೂ. ವೆಚ್ಚದಲ್ಲಿ ಶುದ್ಧೀಕರಿಸುವ ಯೋಜನೆಗೆ ಚಾಲನೆ ನೀಡಿದ್ದರೂ ನೀರು ಸರಬರಾಜು ಮಂಡಳಿ ಕಾಮಗಾರಿ ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸದ ಪರಿಣಾಮ ನದಿಗೆ ತ್ಯಾಜ್ಯ ಸೇರುತ್ತಿದೆ ಎಂದು ಆರೋಪಿಸಿದರು.

ರಾಷ್ಟ್ರೀಯ ಹಸಿರು ನ್ಯಾಯಪೀಠದಿಂದ 71 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದರೂ ಅನುದಾನ ಬಳಕೆಗೆ ಸಂಬಂಧಿಸಿದಂತೆ ನಗರಸಭೆ ಠರಾವು ಹೊರಡಿಸಿ ಒಳಚರಂಡಿ ನಿರ್ಮಾಣಕ್ಕೆ ಹಣ ಬಳಸಿಕೊಳ್ಳದೆ 4 ತಿಂಗಳಿಂದ ಅಧಿಕಾರಿಗಳು ಮೈ ಮರೆತಿದ್ದಾರೆ ಎಂದು ವಿಪಕ್ಷ ಮುಖಂಡ ಸ್ವಾಮಿಗೌಡ ಆರೋಪಿಸಿದರು.

ಕುಡಿಯುವ ನೀರು ಯೋಜನೆ ವಿಭಾಗದ ಇಂಜಿನಿಯರ್ ಅಪ್ಸರ್ ಉತ್ತರಿಸಿ, ರಾಷ್ಟ್ರೀಯ ಹಸಿರು ನ್ಯಾಯಾಲಯದ ಸೂಚನೆ ಮೇರೆಗೆ ಈಗಾಗಲೇ ನಗರದ ಶಬ್ಬೀರ್ ನಗರ, ದಾವಣಿ ಬೀದಿ ಮತ್ತು ಕಲ್ಕುಣಿಕೆ ಬಡಾವಣೆ ಬಳಿ ಸೆಲ್ಲಿಂಗ್ ಟ್ಯಾಂಕ್ ನಿರ್ಮಿಸಿ ಸಿವಿಲ್ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, 120 ಹೆಚ್‌ಪಿ ಸಾಮರ್ಥ್ಯದ ಮೋಟಾರ್ ಅಳವಡಿಸಬೇಕಿದೆ ಕಲ್ಕುಣಿಕೆ ಬಡಾವಣೆ ಬಳಿ 30 ಹೆಚ್‌ಪಿ ಮೋಟರ್ ಅಳವಡಿಸಿದ್ದು, ಸಾಮರ್ಥ್ಯ ಕಡಿಮೆ ಇದೆ. ಹೀಗಾಗಿ ಹೆಚ್ಚುವರಿ ತ್ಯಾಜ್ಯ ನೀರು ನದಿಗೆ ಸೇರಿದೆ ಎಂದರು.

ನಗರಸಭೆ ಎಇಇ ಶರ್ಮಿಳಾ ಉತ್ತರಿಸಿ, 120 ಹೆಚ್‌ಪಿ ಸಾಮರ್ಥ್ಯದ ಮೋಟಾರ್ ಖರೀದಿಗೆ ಟೆಂಡರ್ ಪ್ರಕ್ರಿಯೆ ಮುಗಿದು ಗುಜರಾತ್ ಮೂಲದ ಕಂಪನಿಗೆ ಟೆಂಡರ್ ನೀಡಿದೆ. ಈ ತಿಂಗಳ ಅಂತ್ಯದಲ್ಲಿ ಎಲ್ಲವೂ ಸರಿಯಾಗಲಿದೆ ಎಂದರು.

ನಗರದಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆ ಪ್ರಗತಿಯಲ್ಲಿದ್ದು, ರಸ್ತೆಗಳಲ್ಲಿ ಮನಸೋ ಇಚ್ಛೆ ಗುಂಡಿ ತೆಗೆದಿದ್ದಾರೆ. ಸಾರ್ವಜನಿಕರಿಗೆ ಓಡಾಡಲು ಸಮಸ್ಯೆಯಾಗಿದ್ದರೂ, ಕುಡಿಯುವ ನೀರು ಸರಬರಾಜು ಮಂಡಳಿ ಗಂಭೀರವಾಗಿ ಪರಿಗಣಿಸಿ ಡಾಂಬರ್ ಮಾಡಿಸಿಲ್ಲ ಎಂದು ಸದಸ್ಯ ಗಣೇಶ್ ಕುಮಾರಸ್ವಾಮಿ, ರಮೇಶ್ ಆಕ್ಷೇಪಿಸಿದರು.

ನಗರಸಭೆ ವ್ಯಾಪ್ತಿ ರಸ್ತೆ ಬೀದಿ ದೀಪಗಳಿಲ್ಲದೆ ಸಾರ್ವಜನಿಕರು ನೆಮ್ಮದಿಯಿಂದ ಓಡಾಡಲು ಆಗುತ್ತಿಲ್ಲ. ಶ್ರೀರಂಗಪಟ್ಟಣಕ್ಕೆ ಸೇರಿದ ಸೂರ್ಯ ಎಲೆಕ್ಟ್ರಿಕಲ್ ಏಜೆನ್ಸಿ 10 ವರ್ಷದಿಂದ ಗುತ್ತಿಗೆ ಪಡೆದು ಕೆಟ್ಟದಾಗಿ ನಿರ್ವಹಣೆ ಮಾಡುತ್ತಿದ್ದು, ಅವರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದು ಸದಸ್ಯ ಶ್ರೀನಾಥ್ ಹೇಳಿದರು.

ಅಧ್ಯಕ್ಷ ಶರವಣ ಮಾತನಾಡಿ, ಸೂರ್ಯ ಎಲೆಕ್ಟ್ರಿಕಲ್ ಏಜೆನ್ಸಿ ಮತ್ತು ಗುತ್ತಿಗೆದಾರ ಸುಲ್ತಾನ್ ಅವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಅಲ್ಲದೇ ನಗರಸಭೆ ವತಿಯಿಂದ 800 ಬೀದಿ ದೀಪ ಖರೀದಿಸಲು ತೀರ್ಮಾನಿಸಲಾಗಿದೆ ಎಂದರು.

ಸದಸ್ಯ ಮಾಲೀಕ್ ಪಾಷ ಆಯುಕ್ತರು ನಗರಸಭೆಗೆ ನಿಯೋಜನೆಗೊಂಡು 3 ವರ್ಷ ಕಳೆದರೂ ಒಂದು ವಾರ್ಡ್‌ಗೂ ಭೇಟಿ ನೀಡಿ ಸಮಸ್ಯೆ ಆಲಿಸಿಲ್ಲ ಎಂದರು ಆಕ್ರೋಶ ವ್ಯಕ್ತಪಡಿಸಿದರು.

ಅನುಮೋದನೆ: 2025–26ನೇ ಸಾಲಿನಲ್ಲಿ ನಗರಸಭೆಯು ಶೇ.3ರಷ್ಟು ಕಂದಾಯ ಹೆಚ್ಚಿಸಿ ಸಾರ್ವಜನಿಕರಿಂದ ತೆರಿಗೆ ಸಂಗ್ರಹಿಸಲು ಸರ್ವ ಸದಸ್ಯರು ಅನುಮೋದಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಆಶಾ, ಸ್ಥಾಯಿ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಹಾಗೂ ಆಯುಕ್ತೆ ಮಾನಸ ಹಾಜರಿದ್ದರು.

ಕಾಂಗ್ರೆಸ್–ಜೆಡಿಎಸ್ ಸದಸ್ಯರ ಜಟಾಪಟಿ

ನಗರಸಭೆ ಸದಸ್ಯ ಸತೀಶ್ ಕುಮಾರ್ ಸದಸ್ಯತ್ವ ಅಸಿಂಧುಗೊಳಿಸುವ ವಿಚಾರಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಸದಸ್ಯ ಸತೀಶ್ ಕುಮಾರ್ ಅವರು 2021–22ರಲ್ಲಿ ಅಂದಿನ ಆಯುಕ್ತ ರಮೇಶ್ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಕಡತ ತಿದ್ದಿದ್ದಾರೆ ಎಂಬ ವಿಷಯಕ್ಕೆ ನ್ಯಾಯಾಲಯದ ಮೆಟ್ಟಿಲೇರಲಾಗಿತ್ತು. ಈ ಸಂಬಂಧ ನ್ಯಾಯಾಲಯ ಪ್ರಾದೇಶಿಕ ಆಯುಕ್ತರ ಕಚೇರಿಗೆ ಪತ್ರ ಬರೆದು ಸದಸ್ಯರ ಸಮಗ್ರ ಅಭಿಪ್ರಾಯ ಸಂಗ್ರಹಿಸಿ ವರದಿ ನೀಡುವಂತೆ ಸೂಚಿಸಿತ್ತು. ಆಯುಕ್ತೆ ಮಾನಸ ಸಭೆಯಲ್ಲಿ ವಿಷಯ ಮಂಡಿಸಿ ಚರ್ಚಿಸಿ ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯ ಸಂಗ್ರಹಿಸಿದರು. ಈ ವೇಳೆ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಕೈ ಕೈ ಮಿಲಾಯಿಸುವ ಹಂತ ತಲುಪಿತ್ತು. ಈ ಸಂದರ್ಭ ಅಧ್ಯಕ್ಷ ಶರವಣ ಪರಿಸ್ಥಿತಿ ತಿಳಿಗೊಳಿಸಿದರು. ಸಭೆಯಲ್ಲಿದ್ದ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲ ಮಾಹಿತಿ ತಪ್ಪಾಗಿದೆ. ಸತೀಶ್ ಕುಮಾರ್ ಕಡತ ತಿದ್ದಿರುವುದಾಗಲೀ ಅಪಹರಿಸಿರುವುದಾಗಲಿ ಮಾಡಿಲ್ಲ ಎಂಬುದು ಕಂಡುಬಂದಿದೆ ಎಂದು ಸಭೆಗೆ ತಿಳಿಸಿ ಕಡತದಲ್ಲಿ ದಾಖಲಿಸಿ ಗೊಂದಲಕ್ಕೆ ಅಂತ್ಯ ಹಾಡಿದರು.



ಹೈದರಾಬಾದ್ ಹ್ಯಾಟ್ರಿಕ್ ಸೋಲು: ಕೆಕೆಆರ್‌ಗೆ ಗೆಲುವು



ಕೋಲ್ಕತ್ತಾ, ಏ.3– ವೆಂಕಟೇಶ್ ಅಯ್ಯರ್, ಅಂಗರಿಕ್ಷ್ ರಘುವಂಶಿ ಅವರ ಅರ್ಧಶತಕ ಹಾಗೂ ಸಂಘಟಿತ ಬೌಲಿಂಗ್ ದಾಳಿ ನೆರವಿನಿಂದ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್‌ರೈಡರ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 80 ರನ್‌ಗಳ ಭರ್ಜರಿ ಜಯ ಗಳಿಸಿದೆ.

ಇದರೊಂದಿಗೆ ಕೆಕೆಆರ್ ತಾನಾಡಿರುವ 4 ಪಂದ್ಯಗಳ ಪೈಕಿ ತಲಾ 2 ಗೆಲುವು, ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 4 ಅಂಕಗಳಿಸಿ 5ನೇ ಅಲಂಕರಿಸಿದರೇ, ಅತ್ತ ಹೈದರಾಬಾದ್ ಹ್ಯಾಟ್ರಿಕ್ ಸೋಲು ಅನುಭವಿಸಿದೆ.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಕೋಲ್ಕತ್ತಾ ನಿಗದಿತ ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ್ದ ಸನ್‌ರೈಸರ್ಸ್ ಹೈದರಾಬಾದ್ 16.4 ಓವರ್‌ಗಳಲ್ಲಿ 120 ರನ್‌ಗೆ ಆಲೌಟಾಯಿತು. ತಂಡದ ಪರ ನಿತಿಶ್ ಕುಮಾರ್ ರೆಡ್ಡಿ 19, ಕಮಿಂದು ಮೇಂಡಿಸ್ 27, ಹೆನ್ರಿಚ್ ಕ್ಲಾಸೆನ್ 33, ನಾಯಕ ಪ್ಯಾಟ್ ಕಮ್ಮಿನ್ಸ್ 14ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಕೋಲ್ಕತ್ತಾ ಪರ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದ ವೈಭವ್ ಅರೋರ, ವರುಣ್ ಚಕ್ರವರ್ತಿ ತಲಾ 3, ಆಂಡ್ರೆ ರಸೆಲ್ 2, ಹರ್ಷಿತ್ ರಾಣ, ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತಾ ನೈಟ್ ರೈಡರ್ಸ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ 1, ಸುನೀಲ್ ನರೇನ್ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. 3ನೇ ವಿಕೆಟ್‌ಗೆ ಜೊತೆಯಾದ ಅಜಿಂಕ್ಯಾ ರಹಾನೆ ಹಾಗೂ ಅಂಗರಿಕ್ಷ್ ರಘುವಂಶಿ 81ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಆದರೆ 27ಎಸೆತಗಳಲ್ಲಿ 4 ಸಿಕ್ಸರ್, 1 ಬೌಂಡರಿ ಒಳಗೊಂಡ 38ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಂಗರಿಕ್ಷ್ ರಘುವಂಶಿ 50 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ವೆಂಕಟೇಶ್ ಅಯ್ಯರ್ 29 ಎಸೆತಗಳಲ್ಲಿ 3 ಸಿಕ್ಸರ್, 7 ಬೌಂಡರಿ ಒಳಗೊಂಡ ಬಿರುಸಿನ 60 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ಇವರಿಗೆ ಉತ್ತಮ ಸಾಥ್ ನೀಡಿದ ರಿಂಕು ಸಿಂಗ್ ರಿಂಕು ಸಿಂಗ್ 4 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ ಅಜೇಯ 32 ರನ್ ಗಳಿಸಿದರು.

ಹೈದರಾಬಾದ್ ಪರ ಮೊಹಮ್ಮದ್ ಶಮಿ, ಪ್ಯಾಟ್ ಕಮ್ಮಿನ್ಸ್, ಜೀಶನ್ ಅನ್ಸಾರಿ, ಹರ್ಷಲ್ ಪಟೇಲ್, ಕಮಿಂಡು ಮೆಂಡಿಸ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ವೈಭವ್ ಅರೋರ ಪಂದ್ಯ ಪುರುಷ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಪಂಜಾಬ್	2	2	0	0	4
ಡೆಲ್ಲಿ	2	2	0	0	4
ಬೆಂಗಳೂರು	3	2	1	0	4
ಗುಜರಾತ್	3	2	1	0	4
ಕೋಲ್ಕತ್ತಾ	4	2	2	0	4
ಮುಂಬೈ	3	1	2	0	2
ಲಕ್ನೋ	3	1	2	0	2
ಚೆನ್ನೈ	3	1	2	0	2
ರಾಜಸ್ಥಾನ್	3	1	2	0	2
ಹೈದರಾಬಾದ್	4	1	3	0	2

ಇಂದಿನ ಪಂದ್ಯ

ಲಕ್ನೋ ಸೂಪರ್ ಜಯಂಟ್ಸ್
V/S
ಮುಂಬೈ ಇಂಡಿಯನ್ಸ್

ಸಮಯ: ಸಂಜೆ 7.30

ಸ್ಥಳ : ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಕ್ನೋ

ಕ್ಯಾತಮಾರನಹಳ್ಳಿ ವಿವಾದಿತ ಸ್ಥಳದಲ್ಲಿ ಅರೆಬಿಕ್ ಶಾಲೆ ಆರಂಭ: ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅನುಮತಿ

- ಶಾಲೆ ನಡೆಸಲು ಯಾರೂ ಅಡ್ಡಿ ಮಾಡಬಾರದು
- ಶಾಲೆ ಬಳಿ ಪೊಲೀಸ್ ಬಂದೋಬಸ್ತ್ ಮಾಡಬೇಕು
- ಆದೇಶ ಉಲ್ಲಂಘಿಸಿದರೆ ಕಾನೂನು ಕ್ರಮದ ಎಚ್ಚರಿಕೆ
- ಜಿಲ್ಲಾಡಳಿತ ಕೈಗೊಂಡ ಆದೇಶ ಹೈಕೋರ್ಟ್‌ಗೆ ಸಲ್ಲಿಕೆ

ಮೈಸೂರು, ಏ.3(ಬಿಎಲ್‌ಯು)– ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೆಬಿಕ್ ಶಾಲೆ ನಡೆಸಲು ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್‌ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಆದೇಶ ನೀಡಿದ್ದಾರೆ.


ಜಿ.ಲಕ್ಷ್ಮಿಕಾಂತ

ಗಲಾಟೆಗೆ ಕಾರಣವಾಗಿದ್ದ ವಿವಾದಿತ ಸ್ಥಳಕ್ಕೆ ಜಿಲ್ಲಾಡಳಿತ ಬೀಗ ಹಾಕಿ ಯಥಾಸ್ಥಿತಿ ಕಾಪಾಡಿತ್ತು. ಈ ಸಂಬಂಧ ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್ ಹೈಕೋರ್ಟ್ ಮೊರೆ ಹೋಗಿತ್ತು.

ಕ್ಯಾತಮಾರನಹಳ್ಳಿಯ ಈ ಸ್ಥಳದಲ್ಲಿ ಮದರಸಾ ಮೂಲಕ ನಮ್ಮ ಸಮುದಾಯದ ವಿದ್ಯಾರ್ಥಿಗಳು ಅರೆಬಿಕ್ ಶಿಕ್ಷಣವನ್ನು ಮತ್ತು ಅಡಲ್ಟ್ ಎಜುಕೇಷನ್ ಮೂಲಕ ಹಿರಿಯರಿಗೆ ಶಿಕ್ಷಣ ನೀಡಲು ಮಾತ್ರ ಬಳಸಿಕೊಳ್ಳಲಾಗುವುದು. ಈ ಸ್ಥಳದಲ್ಲಿ ಯಾವುದೇ ರೀತಿಯ ಮಸೀದಿ ಅಥವಾ ಪ್ರಾರ್ಥನಾ ಮಂದಿರ ನಡೆಸುವುದಿಲ್ಲ. ಶಾಲೆ ನಡೆಸಲು ಅವಕಾಶ ನೀಡುವಂತೆ ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್ ಕೋರಿತ್ತು.

ಆದರೆ ಇದಕ್ಕೆ ಹುಲಿಯಮ್ಮ ದೇವಸ್ಥಾನ ಟ್ರಸ್ಟ್, ನ್ಯಾಯಾಲಯದಲ್ಲಿ ಆಕ್ಷೇಪಣೆ ಸಲ್ಲಿಸಿತ್ತು. ಕ್ಯಾತಮಾರನಹಳ್ಳಿಯಲ್ಲಿ ಧನುರ್ಮಾಸದಲ್ಲಿ ಒಂದು ತಿಂಗಳು ಭಜನೆ ನಡೆಯುತ್ತದೆ. ಜೊತೆಗೆ ವಿವಾದಿತ ಸ್ಥಳದ ಸುತ್ತ ಮೆರವಣಿಗೆ ಕೂಡ ಸಾಗುತ್ತದೆ. ಈಗಾಗಲೇ ನಡೆದಿರುವ ಘಟನೆಗಳಿಂದ ಎರಡೂ ಕೋಮಿನವರಿಗೆ ಸಾಕಷ್ಟು ಹಿಂಸೆ ಹಾಗೂ ನಷ್ಟ ಉಂಟಾಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಪ್ರಸ್ತುತ ಸ್ಥಳದಲ್ಲಿ ಮದರಸಾ ನಡೆಸಲು ಅವಕಾಶ ನೀಡಬಾರದು. ಬೇರೆ ಕಡೆ ಮಂಜೂರು ಮಾಡುವಂತೆ ಮನವಿ ಮಾಡಿದ್ದರು.

ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್, ಎರಡೂ ಸಮುದಾಯದ ಮುಖಂಡರ ಸಭೆ ಕರೆದು ಸೌಹಾರ್ದಯುತವಾಗಿ ಸಮಸ್ಯೆ ಇತ್ಯರ್ಥ ಮಾಡಿ ಎಂದು ಮಾರ್ಚ್ 31, 2025 ರಂದು ಜಿಲ್ಲಾಡಳಿತಕ್ಕೆ ಆದೇಶ ನೀಡಿತ್ತು.

ಕೋಮು ಘರ್ಷಣೆ ಸಾಧ್ಯತೆ; ಯಥಾಸ್ಥಿತಿ ಕಾಪಾಡಿ

ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಕೋಮು ಘರ್ಷಣೆ ಉಂಟು ಮಾಡುವ ಸಾಧ್ಯತೆಗಳು ದಟ್ಟವಾಗಿರುವ ಹಿನ್ನೆಲೆಯಲ್ಲಿ ಟ್ರಸ್ಟ್ ಕಟ್ಟಡಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಮುಂದುವರೆಸುವುದು ಸೂಕ್ತವೆಂದು ಮೈಸೂರು ಪೊಲೀಸ್ ಆಯುಕ್ತರು ಫೆಬ್ರವರಿ 14, 2025 ರಂದು ಜಿಲ್ಲಾಧಿಕಾರಿಗೆ ನೀಡಿರುವ ವರದಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಈ ಪ್ರದೇಶವು ಕೋಮು ಸೂಕ್ಷ್ಮ ಪ್ರದೇಶವಾಗಿರುವುದನ್ನು, ಅಲ್ಲಿ ಆಗಿಂದಾಗ್ಗೆ ನಡೆದಿರುವ ಗಲಭೆಗಳ ಉದಾಹರಣೆಗಳನ್ನು ಮತ್ತು ಸಾರ್ವಜನಿಕ ಆಸ್ತಿಗಳಿಗೆ ಉಂಟಾಗಿರುವ ನಷ್ಟ ಉಲ್ಲೇಖಿಸಿ, ಸ್ಥಳೀಯವಾಗಿ ಉಭಯ ಬಣಗಳ ನಡುವೆ ವಿಷಯ ಬೂದಿ ಮುಚ್ಚಿದ ಕೆಂಡದಂತೆ ಇದೆ ಎಂದು ಹೇಳಿದ್ದಾರೆ.

ಪೊಲೀಸರು ಕಾನೂನು, ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳನ್ನು ವಿವರಿಸಿ, ಟ್ರಸ್ಟ್ ವಿಚಾರದಲ್ಲಿ ಯಾವುದೇ ನಿರ್ಧಾರ ತೆಗೆದುಕೊಂಡಲ್ಲಿ ಉಭಯ ಬಣಗಳು ಪ್ರತಿಭಟನೆ ಮಾಡಿ ಕೋಮು ಘರ್ಷಣೆ ಉಂಟು ಮಾಡುವ ಸಾಧ್ಯತೆಗಳು ದಟ್ಟವಾಗಿವೆ ಎಂದು ಎಚ್ಚರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಟ್ರಸ್ಟ್ ಕಟ್ಟಡಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಮುಂದುವರೆಸುವುದು ಸೂಕ್ತವೆಂದು ಪೊಲೀಸ್ ಆಯುಕ್ತರು ಅಭಿಪ್ರಾಯಪಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಎರಡು ಬಾರಿ ಉಭಯ ಸಮುದಾಯದ ಮುಖಂಡರ ಸಭೆ ಕರೆದು ಸಮಸ್ಯೆ ಇತ್ಯರ್ಥಕ್ಕೆ ಹಲವು ಮಾರ್ಗೋಪಾಯ ನೀಡಿದ್ದರು.

ಎರಡು ಸಮುದಾಯದ ಮುಖಂಡರ ಅಭಿಪ್ರಾಯ ಪಡೆದಿದ್ದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು, ಅಂತಿಮವಾಗಿ ಅರೇಬಿಕ್ ಶಾಲೆ ನಡೆಸಲು ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್‌ಗೆ ಅವಕಾಶ ನೀಡಿ ಆದೇಶ ಹೊರಡಿಸಿದ್ದಾರೆ.

ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕವಾಗಿ ಪ್ರತಿರೋಧ ಒಡ್ಡಲು ಯಾರಿಗೂ ಕಾನೂನಿನಲ್ಲಿ ಅವಕಾಶವಿಲ್ಲ. ಅಲ್ಲದೆ ಮೂಲಭೂತ ಹಕ್ಕು ನಿರ್ವಹಣೆಗೆ ಸೂಕ್ತ ಅನುವು ಮಾಡಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಇದು ಸರ್ಕಾರದ ಜವಾಬ್ದಾರಿ ಕೂಡ. ಈ ಹಿನ್ನೆಲೆಯಲ್ಲಿ ಸ್ವತ್ತಿನ ಕಟ್ಟಡದಲ್ಲಿ ನರ್ಸರಿ ಅರೇಬಿಕ್ ಶಾಲೆಗೆ ಪರವಾನಗಿ ನೀಡುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದಾರೆ.

ಸ್ವತ್ತಿನಲ್ಲಿ ಅರೇಬಿಕ್ ಶಾಲೆ ಸುಲಲಿತವಾಗಿ ನಡೆಯಬೇಕು. ಯಾರೂ, ಯಾವುದೇ ರೀತಿಯ ಪ್ರತಿರೋಧ ತೋರದರೆ ಅಥವಾ ಅಡ್ಡಿ ಉಂಟು ಮಾಡಬಾರದೆಂದು ತಾಕೀತು ಮಾಡಿದ್ದಾರೆ. ಅಗತ್ಯ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಒದಗಿಸಬೇಕು. ಈ ಆದೇಶವನ್ನು ಯಾರೂ ಕೂಡ ಉಲ್ಲಂಘನೆ ಮಾಡಬಾರದು. ಒಂದು ವೇಳೆ ಉಲ್ಲಂಘಿಸಿದರೆ ಕಾನೂನು ಪ್ರಕಾರ ನಗರ ಪೊಲೀಸ್ ಆಯುಕ್ತರು ಕ್ರಮ ಕೈಗೊಳ್ಳಬೇಕು ಎಂದು ಲಕ್ಷ್ಮಿಕಾಂತ ರೆಡ್ಡಿ ಆದೇಶಿಸಿದ್ದಾರೆ. ಈ ಸಂಬಂಧ ತಾವು ಕೈಗೊಂಡ ಕ್ರಮವನ್ನು ಲಕ್ಷ್ಮಿಕಾಂತರೆಡ್ಡಿ ಅವರು ಹೈಕೋರ್ಟ್‌ಗೂ ಸಲ್ಲಿಸಿದ್ದಾರೆ.

ದೇವೇಗೌಡನಹುಂಡಿ ಹಾಲು ಉತ್ಪಾದಕರ ಸಂಘಕ್ಕೆ ಅವಿರೋಧ ಆಯ್ಕೆ



ಮೈಸೂರು ತಾಲೂಕು ದೇವೇಗೌಡನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಡಿ.ಸಿ.ಸೋಮಣ್ಣ, ಉಪಾಧ್ಯಕ್ಷರಾಗಿ ಸೋಮಾಚಾರಿ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಎಪಿಎಂಸಿ ಸದಸ್ಯರಾದ ಬಸವರಾಜು, ಎಸ್.ಆರ್.ಹುಂಡಿ ಡೈರಿ ಅಧ್ಯಕ್ಷ ಸಿದ್ದರಾಮು, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ ರಾಮು, ಶಿವನಾಗು, ನಾಗರಾಜು, ರಾಮಣ್ಣ, ರವಿ, ನಂಜುಂಡೇಗೌಡ, ಸುರೇಶ, ವಿನಯ್, ಶ್ರೀಧರ್, ಮಹೇಂದ್ರ, ಪ್ರಕಾಶ್, ಸಿದ್ದೇಗೌಡ, ಸುನೀಲ್, ಜಯರಾಮು, ಸಣ್ಣಯ್ಯ ಇದ್ದರು.

ನಾಳೆ ಮೈಸೂರಲ್ಲಿ 'ಶುಭಸ್ಯ ಶೀಘ್ರಂ' ಹಿಂದೂ ವಧು–ವರ ಅನ್ವೇಷಣಾ ಮೇಳ

ಮೈಸೂರು, ಏ.3(ಜಿಎ)–ಫ್ಯೂಸ್ ನೆಟ್‌ವರ್ಕ್ ವತಿಯಿಂದ ನಗರದ ಜೆ.ಕೆ. ಮೈದಾನದಲ್ಲಿ ಏ.5ರಂದು 'ಶುಭಸ್ಯ ಶೀಘ್ರಂ' ಹಿಂದೂ ವಧು–ವರ ಅನ್ವೇಷಣಾ ಮೇಳ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ಸ್ವಾಮಿ ಈ ವಿಷಯ ತಿಳಿಸಿ, ಹುಡುಗರಿಗೆ ನೋಂದಣಿ ಶುಲ್ಕ 999 ರೂ. ನಿಗದಿಪಡಿಸಿದ್ದು, ಹುಡುಗಿಯರಿಗೆ ಉಚಿತ. ಸುಮಾರು 700ಕ್ಕೂ ಹೆಚ್ಚು ವಧು–ವರರು ಭಾಗವಹಿಸುವ ನಿರೀಕ್ಷೆ ಇದ್ದು, ಇಲ್ಲಿ ಯಾವುದೇ ವಯಸ್ಸಿನ ಮಿತಿ ಇಲ್ಲ. ಹಿಂದೂ ಧರ್ಮದ ಎಲ್ಲಾ ಜನಾಂಗದವರಿಗೆ ವೇದಿಕೆ ಕಲ್ಪಿಸುವ ಉದ್ದೇಶವಾಗಿದ್ದು, ಮದುವೆಗೆ ಸಂಬಂಧಪಟ್ಟ ಎಲ್ಲವೂ ಒಂದೇ ಸೂರಿನಡಿ ದೊರಕಿಸುವ ವ್ಯವಸ್ಥೆ ಮಾಡಲಾಗಿದೆ. ಮಾಹಿತಿ, ನೋಂದಣಿಗೆ ಮೊ.9108812377, 8073762722 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಪ್ರಮೋದ್ ಇದ್ದರು.

ವಾಕ್–ಶ್ರವಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರು ಆರ್‌ಸಿಐ ಕಾಯ್ದೆ ಬಲ್ಲವರಾಗಿರಬೇಕು

- ಆರ್‌ಸಿಐ ಸದಸ್ಯ ಕಾರ್ಯದರ್ಶಿ ವಿಕಾಸ್ ತ್ರಿವೇದಿ ಸಲಹೆ
- ವಾಕ್–ಶ್ರವಣ ಅಂತಾರಾಷ್ಟ್ರೀಯ ಸಮ್ಮೇಳನ 'ವಿಶ್ರುತ–2' ಚಾಲನೆ

ಮೈಸೂರು, ಏ.3(ಎಂಟಿವೈ)– ವಾಕ್ ಮತ್ತು ಶ್ರವಣ ಕ್ಷೇತ್ರದಲ್ಲಿ ವೈದ್ಯಕೀಯ ಸೇವೆ ನೀಡುವವರು ಕಡ್ಡಾಯವಾಗಿ ಆರ್‌ಸಿಐ ಕಾಯ್ದೆ ತಿಳಿದುಕೊಳ್ಳುವುದರೊಂದಿಗೆ ಸಿಆರ್‌ಇ ನಂಬರ್ ಹೊಂದಿರಬೇಕು ಎಂದು ನವದೆಹಲಿಯ ಭಾರತೀಯ ಪುನರ್ವಸತಿ ಮಂಡಳಿ(ಆರ್‌ಸಿಐ)ಯ ಸದಸ್ಯ ಕಾರ್ಯದರ್ಶಿ ವಿಕಾಸ್ ತ್ರಿವೇದಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿರುವ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಗುರುವಾರ ಆಯೋಜಿಸಿದ್ದ ವಾಕ್–ಶ್ರವಣ ಅಂತಾರಾಷ್ಟ್ರೀಯ ಸಮ್ಮೇಳನ –2025 'ವಿಶ್ರುತ–2' ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರು ಕಡ್ಡಾಯವಾಗಿ ಆರ್‌ಸಿಐ ಕಾಯ್ದೆ, ಕಾನೂನುಗಳನ್ನು ಅರಿತುಕೊಳ್ಳಬೇಕು. ವಿಶೇಷ ಚೇತನರ ಸೇವೆ ಮಾಡುವವರು ಸಿಆರ್‌ಇ ನಂಬರ್ ಕಡ್ಡಾಯವಾಗಿ ಹೊಂದಿರಲೇಬೇಕು. ಪದವಿಯನ್ನು ಪಡೆಯದೇ ಇರುವವರು ಅನಧಿಕೃತವಾಗಿ ಕಾರ್ಯನಿರ್ವಹಿಸುವುದನ್ನು ತಡೆಗಟ್ಟಲು ಆರ್‌ಸಿಐ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವವರ ಬಗ್ಗೆ ಮಾಹಿತಿ ಗೊತ್ತಾದರೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದೂರು ಸಲ್ಲಿಸಬಹುದು. ದೂರು ನೀಡಿದವರ ಬಗ್ಗೆ ಗೌಪ್ಯತೆ ಕಾಪಾಡಲಾಗುತ್ತದೆ. ಚಿಕಿತ್ಸೆ ನೆಪದಲ್ಲಿ ಚೆಲ್ಲಾಟವಾಡುವವರಿಗೆ ಕಡಿವಾಣ ಹಾಕಲು ಸಂಸ್ಥೆ ಕ್ರಮ ಕೈಗೊಳ್ಳಲು ಬದ್ಧವಾಗಿದೆ ಎಂದು ತಿಳಿಸಿದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿರುವ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ವಾರ್ಷಿಕ ವಾಕ್–ಶ್ರವಣ ಅಂತಾರಾಷ್ಟ್ರೀಯ ಸಮ್ಮೇಳನ–2025 'ವಿಶ್ರುತ–2' ನವ ದೆಹಲಿಯ ಭಾರತೀಯ ಪುನರ್ವಸತಿ ಮಂಡಳಿ(ಆರ್‌ಸಿಐ)ಯ ಸದಸ್ಯ ಕಾರ್ಯದರ್ಶಿ ವಿಕಾಸ್ ತ್ರಿವೇದಿ ಉದ್ಘಾಟಿಸಿದರು.

ವಿಶೇಷ ಚೇತರ ಪುನರ್ವಸತಿ ವಿಷಯದಲ್ಲಿ ಯಾವುದೇ ಸಮಸ್ಯೆ, ದೂರುಗಳಿದ್ದರೆ ಪ್ರತಿ ಬುಧವಾರ ಮಧ್ಯಾಹ್ನದ ನಂತರ ಆನ್‌ಲೈನ್‌ನಲ್ಲಿ ಮುಕ್ತವಾಗಿ ಮಾತುಕತೆಯಾಡಲು ಅವಕಾಶ ಕಲ್ಪಿಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು, ವಿಶೇಷ ಚೇತನರ ಸೇವೆ ಮಾಡುತ್ತಿರುವ ವೃತ್ತಿಪರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು. ಈಗ ಬಿಡುಗಡೆ ಮಾಡಿರುವ ಆ್ಯಪ್ ಆರಂಭದಲ್ಲೇ ಮಕ್ಕಳಲ್ಲಿನ ವಾಕ್ ಶ್ರವಣ ಸಮಸ್ಯೆ ಪತ್ತೆ ಹಚ್ಚಿ, ಬಗೆಹರಿಸಲು ನೆರವಾಗಲಿದೆ. ಇದನ್ನು ಶಾಲಾ– ಕಾಲೇಜು, ಶಿಕ್ಷಣ ಸಂಸ್ಥೆಗಳು ಬಳಸಿಕೊಳ್ಳುವ ಮೂಲಕ ತಮ್ಮ ವಿದ್ಯಾರ್ಥಿಗಳ ವಾಕ್ ಶ್ರವಣ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಆರ್‌ಸಿಐ ಸಂಸ್ಥೆ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಆಸಕ್ತರು ಪ್ರಯೋಜನ ಪಡೆಯಬಹುದು ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ್ ಮಾತನಾಡಿ, 2050ರ ವೇಳೆಗೆ ವಿಶ್ವದಲ್ಲಿ ಪ್ರತಿ ಹತ್ತು ಜನರಲ್ಲಿ ಒಬ್ಬರಿಗೆ ಶ್ರವಣ ದೋಷ ಉಂಟಾಗುತ್ತದೆ ಎಂದು ವರದಿಯೊಂದು ಎಚ್ಚರಿಸಿದೆ. ಕೆಲವು ವರದಿಗಳ ಪ್ರಕಾರ 2008ರಲ್ಲಿ 1.2 ಬಿಲಿಯನ್ ಮಂದಿ ಶ್ರವಣ ದೋಷ ಕಾಯಿಲೆಗೆ ತುತ್ತಾಗಿದ್ದರು. 2017ರಲ್ಲಿ 1.4 ಬಿಲಿಯನ್‌ಗೆ ಏರಿಕೆಯಾಗಿದೆ 2050ರ ವೇಳೆಗೆ 700 ಮಿಲಿಯನ್ ಮಂದಿ ಈ ದೋಷಕ್ಕೆ ತುತಾಗಲಿದ್ದಾರೆ. ಈ ಅಂಕಿ ಅಂಶಗಳನ್ನು ಗಮನಿಸಿದರೆ ಶ್ರವಣದೋಷವುಳ್ಳವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ತಜ್ಞರು ಹಾಗೂ ವೈದ್ಯರು ಹೊಸ ಸವಾಲುಗಳನ್ನು ಅರಿತುಕೊಂಡು, ಸಮಸ್ಯೆಗಳನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಾಂಶುಪಾಲರಾದ ಡಾ.ಆರ್.ಸುಮಾ, ಸಂಘಟನಾ ಕಾರ್ಯದರ್ಶಿ ಡಾ.ಎನ್.ಹೇಮಂತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬ್ಯಾಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ರಾಬಿನ್ ಹುಡ್ (ತೆ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ10.20ಕ್ಕೆ, ಅಪ್ಪು (ಕ): ಮ1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೇಂದ್ರ ಸರ್ಕಾರಿ ನೌಕರರ ಪಿಂಚಣಿಗೆ ತಿದ್ದುಪಡಿ
ಪಿಂಚಣಿದಾರರ ಸಮನ್ವಯ ಸಮಿತಿ ಪ್ರತಿಭಟನೆ



ಮೈಸೂರು, ಏ.3(ಜಿಎ)–ಕೇಂದ್ರ ಸರ್ಕಾರಿ ನೌಕರರ ಪಿಂಚಣಿ ಯೋಜನೆಗೆ ತಿದ್ದುಪಡಿ ಮಾಡಿರುವುದನ್ನು ಖಂಡಿಸಿ, ಎಲ್ಲಾ ನಿವೃತ್ತ ನೌಕರರಿಗೂ ಅನ್ವಯವಾಗುವ ರೀತಿಯಲ್ಲಿ ವೇತನ ಆಯೋಗ ರಚಿಸಬೇಕೆಂದು ಒತ್ತಾಯಿಸಿ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಸದಸ್ಯರು ಜಯಲಕ್ಷ್ಮಿಪುರಂನ ಬಿಎಸ್‌ಎನ್‌ಎಲ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಕೇಂದ್ರ ನೌಕರರ ಪಿಂಚಣಿ ಯೋಜನೆಗೆ ತಿದ್ದುಪಡಿ ಮಸೂದೆ ಮಂಡಿಸಿ, ಅಂಗೀಕರಿಸಿದೆ ಇದರಿಂದ ಲಕ್ಷಾಂತರ ಪಿಂಚಣಿದಾರರ ಹಿತಾಸಕ್ತಿಗೆ ಧಕ್ಕೆಯಾಗಲಿದ್ದು, ನಮ್ಮ ನಡುವೆ ತಾರತಮ್ಯ ನಿರ್ಮಾಣವಾಗಲಿದೆ. ಈಗಾಗಲೇ ಪಿಂಚಣಿ ಪಡೆಯಲು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದು ಮುಂದೆ ತುತ್ತು ಅನ್ನಕ್ಕೂ ಸರ್ಕಾರ ಕಲ್ಲು ಹಾಕಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೋರಾಟ ಮಾಡುವ ಕಾರ್ಮಿಕ ಮುಖಂಡರನ್ನು ದೇಶದ್ರೋಹಿಗಳೆಂದು ಪರಿಗಣಿಸಿ ದಸ್ತಗಿರಿ ಮಾಡಲು ಸರ್ಕಾರ ಹೊರಟಿದೆ. ನಮ್ಮನ್ನು ವಿಚಾರಣೆಯಿಲ್ಲದೆ ಬಂಧಿಸುವ ಕಾನೂನು ತರಲಾಗುತ್ತಿದೆ. ಈ ಮೂಲಕ ಕಾರ್ಪೋರೇಟ್ ಕಂಪನಿಗಳ ಆಶಯ ಸರ್ಕಾರ ಈಡೇರಿಸುತ್ತಿದೆ ಎಂದು ದೂರಿದರು.

ಮಸೂದೆ 2026ರ ನಂತರ ನಿವೃತ್ತಿಯಾಗುವವರಿಗೆ ಪೂರಕವಾಗಿದೆ. ಅದಕ್ಕಿಂತ ಹಿಂದೆ ನಿವೃತ್ತಿಯಾದವರು ಏನು ತಪ್ಪು ಮಾಡಿದ್ದಾರೆ. ತಕ್ಷಣವೇ ಮಸೂದೆಯನ್ನು ಕೇಂದ್ರ ಸರ್ಕಾರ ಹಿಂಪಡೆದು, ಎಲ್ಲರಿಗೂ ಸಹಕಾರಿಯಾಗುವಂತೆ ರೂಪಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ವಿಷಕಂಠಮೂರ್ತಿ, ಮುಖಂಡರಾದ ಪರಮೇಶ್ವರಯ್ಯ, ಚಂದ್ರಶೇಖರ, ಉಮಾಪತಿ, ಶ್ರೀಧರ್, ಸುಬ್ರಹ್ಮಣ್ಯ, ರಾಜಶೇಖರ್, ಜಯರಾಮ್, ಬಸವರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶ್ರೀ ರಾಮನವಮಿ, ಮಹಾವೀರ ಜಯಂತಿ ಪ್ರಯುಕ್ತ ಮಾಂಸ ಮಾರಾಟ ನಿಷೇಧ

ಮೈಸೂರು,ಏ.3– ಏ.6 ರಂದು ಶ್ರೀ ರಾಮನವಮಿ ಮತ್ತು ಏ.10 ರಂದು ಮಹಾವೀರ ಜಯಂತಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಬೇಕು ಹಾಗೂ ಈ ದಿನ (ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಮೀರಾಬಾಯಿ

ನಿಧನ : 04.04.2022

(ಡಾ|| ಡಿ. ತಿಮ್ಮಯ್ಯರವರ ಧರ್ಮಪತ್ನಿ)

ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೇ ಉಳಿದಿದೆ.

ದುಃಖತಪ್ತರು

ಡಾ.ಡಿ. ತಿಮ್ಮಯ್ಯ, ಶಾಸಕರು, ಕರ್ನಾಟಕ ವಿಧಾನ ಪರಿಷತ್
ಶ್ರೀಮತಿ ಕಲ್ಪಶ್ರೀ, ಶ್ರೀ ಡಿ.ಟಿ. ಅರುಣ್‌ಕುಮಾರ್ ಮತ್ತು ಮಕ್ಕಳು
ಡಾ. ಡಿ.ಟಿ. ಸಹನಾ, ಶ್ರೀ ಹೆಚ್.ಜಿ. ಪವಿತ್ರ ಮತ್ತು ಮಕ್ಕಳು
ಶ್ರೀಮತಿ ಡಿ.ಟಿ. ಸವಿತಾ ಮತ್ತು ಅಶ್ವಿನ್‌ಕುಮಾರ್ ಮತ್ತು ಮಕ್ಕಳು
ಶ್ರೀಮತಿ ಮತ್ತು ಶ್ರೀ ಡಿ. ಕುಮಾರ್, ಶ್ರೀಮತಿ ಮತ್ತು ಶ್ರೀ ವೆಂಕಟಾಚಲ ಮತ್ತು ಮಕ್ಕಳು
ಹಾಗೂ ಕುಟುಂಬವರ್ಗ ಮತ್ತು ಬಂಧುಮಿತ್ರರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಲೋಕಮಣಿರವರು

ನಿಧನ: 04.04.2024

ಕಡಕೊಳ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು

ದುಃಖತಪ್ತರು: ಪತಿ :ಗೆಜ್ಜಗಳ್ಳಿ ನಂಜಪ್ಪ, ಪೂಜಾ-ಪ್ರತಾಪ್, ದಿವ್ಯ-ಕೀರ್ತನ್‌ಕುಮಾರ್ ಹಾಗೂ ಕುಟುಂಬವರ್ಗ, ಗೆಜ್ಜಗಳ್ಳಿ